# ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ 6 ಸಂಚಿಕೆ 7
೧೫, ಡಿಸೆಂಬರ್ ೧೯೫೭
*
ಪುಟ ೧೦ ಬೆಲೆ: ೧೩ ನ. ಪೈಸೆ

ಬ್ರಿಟಿಷರು ಆಳುತ್ತಿದ್ದ ಕಾಲದಲ್ಲಿ "ಇಂಡಿಯಾ ರಕ್ಷಣಾ ಶಾಸನ" ಎಂಬ ಕರಾಳ ಕಾನೂನೊಂದು ಜಾರಿಯಲ್ಲಿತ್ತು. ಸ್ವೇಚ್ಛಾಧಿಪತ್ಯದ ವಿರೋಧವಾಗಿ ಉಸಿರೆತ್ತುವ ಧೈರ್ಯ ತೋರುವವರನ್ನೆಲ್ಲ ಹೇಳದೆ ಕೇಳದೆ, ವಿಚಾರಣೆ ಇಲ್ಲದೆ, ವರ್ಷಾನುಗಟ್ಟಲೆ ಸೆರೆಮನೆಯಲ್ಲಿ ಇರಿಸುವ ಶಾಸನ ಅದಾಗಿತ್ತು. ಆದರೆ ಅಂಥ ಇತಿಮಿತಿ ಇಲ್ಲದ ಅಧಿಕಾರಗಳನ್ನು ಸರಕಾರಕ್ಕೆ ಕೊಡುವ ಕಾಯಿದೆಗಳಿಲ್ಲದೆ ತಮ್ಮ ಆಳ್ವಿಕೆಯನ್ನು ಉಳಿಸಿಕೊಳ್ಳುವುದೇ ಅಸಾಧ್ಯವೆಂದು ಕಾಂಗ್ರೆಸ್ ರಾಜ್ಯಭಾರದ ಆರಂಭದಲ್ಲೇ ಜಾರಿಗೆ ತರಲಾದ ಪ್ರತಿಬಂಧಕ ಸ್ಥಾನಬದ್ಧತೆ ಕಾನೂನಿಗೆ ತಿರುಗಿ ಜೀವದಾನ ಮಾಡುತ್ತ ಈವರೆಗೂ ಊರ್ಜಿತವಾಗಿ ಇರಿಸಲಾಗಿದೆ. ಈಗ ಅದಕ್ಕೆ ತಿರುಗಿ ಮೂರು ವರ್ಷಗಳ ಜೀವದಾನ ಕೊಡುವ ಮಸೂದೆಯು ಪಾರ್ಲಿಮೆಂಟಿನಲ್ಲಿ ಚರ್ಚಿಸಲ್ಪಡುತ್ತಿದೆ.

ಕಾಂಗ್ರೆಸ್, ಪಿ. ಎಸ್. ಪಿ. ಮತ್ತಿತರ ಪ್ರತಿಪಕ್ಷಗಳೆಲ್ಲ ಒಂದಾಗಿ, ಎಲ್ಲ ಪ್ರತಿಗಾಮಿ ಶಕ್ತಿಗಳನ್ನು ಅಣಿಗೊಳಿಸಿ, ಸರಕಾರವನ್ನು ಬಲತ್ಕಾರದಿಂದಲಾದರೂ ಉರುಳಿಸಬೇಕೆಂದು ಹವಣಿಸುತ್ತಿರುವ ಕೇರಳದಲ್ಲಿ

## ಸ್ಥಾನಬದ್ಧತೆ ಕಾನೂನಿಗೆ ಜೀವದಾನ

### ಪ್ರತಿಪಕ್ಷವನ್ನು ಇದಿರಿಸುವ ಅಸ್ತ್ರ

ಲೋಕಸಭೆಯಲ್ಲಿ ಕಮ್ಯೂನಿಸ್ಟ್ ಪಕ್ಷದ ನಾಯಕರಾದ ಎಸ್. ಎ. ಡಾಂಗೆಯವರು ಮಸೂದೆಯನ್ನು ವಿರೋಧಿಸಿ ಮಾತನಾಡಿದರು. ಪ್ರತಿಬಂಧಕ ಸ್ಥಾನಬದ್ಧತೆ ಕಾನೂನು, ಒಂದು ಪಕ್ಷದ ಇಚ್ಛೆಯನ್ನೂ ಸರ್ವಾಧಿಕಾರವನ್ನೂ ಎಲ್ಲರ ಮೇಲೆ ಬಲಾತ್ಕಾರವಾಗಿ ಹೇರುವ ಆಯುಧವಾಗಿದೆ. ಗೊಂದಲಗಳನ್ನು ತಡೆಗಟ್ಟುವುದರ ಬದಲು ಗಲಭೆಗಳನ್ನು ಉದ್ರೇಕಿಸುವುದಕ್ಕೆ ಈ ಕಾನೂನನ್ನು ಉಪಯೋಗಿಸಲಾಗಿದೆ. ಈ ಕಾನೂನು ರಾಜಕೀಯ ಪ್ರತಿಪಕ್ಷಗಳ ವಿರೋಧವಾಗಿ ಪ್ರಯೋಗವಾಗುತ್ತಿದೆ.

ಪ್ರತಿಬಂಧಕ ಸ್ಥಾನ ಬದ್ಧತೆಯ ಕಾನೂನು ಒಬ್ಬನೇ ಒಬ್ಬ ಅಕ್ಕಿ ದಾಸ್ತಾನುಗಾರನ ವಿರೋಧವಾಗಿಯೂ ಈವರೆಗೆ ಪ್ರಯೋಗಿಸಲ್ಪಟ್ಟಿಲ್ಲ, ಎಂದು ಡಾಂಗೆ ಸ್ಪಷ್ಟಪಡಿಸಿದಾಗ, ಒಬ್ಬ ಪ್ರತಿಪಕ್ಷದ ಸದಸ್ಯ ನಡುವೆ "ಅಕ್ಕಿ ದಾಸ್ತಾನುಗಾರರು ಕಾಂಗ್ರೆಸಿಗರು" ಎಂದು ಹೇಳಿದ್ದು ವರದಿಯಾಗಿದೆ.

ಗಾಂಧಿಜಿಯ ಚಿತ್ರಗಳನ್ನೂ ರಾಷ್ಟ್ರ ಘಟನೆಯ ಪ್ರತಿಗಳನ್ನು ಸುಡುವುದೇ ಮೊದಲಾದ ವಿಚಾರಗಳನ್ನು ಈ ಕಾನೂನಿನ ಅವಶ್ಯಕತೆಗೆ ಉದಾಹರಣೆಗಳಾಗಿ ಗೃಹಮಂತ್ರಿಯವರು ಮುಂದಿಟ್ಟಿದ್ದಾರೆ. ಆದರೆ ಆ ಉದಾಹರಣೆಗಳು, ಈ ಕಾನೂನು ಪ್ರಯೋಜನವಿಲ್ಲದ್ದೆಂದೂ ಪರಿಣಾಮಕಾರಿಯಲ್ಲವೆಂದೂ ಸ್ಪಷ್ಟಪಡಿಸುತ್ತವೆ ಈ ಕಾಯಿದೆ ಜಾರಿಯಲ್ಲಿದ್ದಾಗಲೇ ಆ ಘಟನೆಗಳೆಲ್ಲ ನಡೆದಿರುವುದು ಎಂದ ಮೇಲೆ ಈ ಕಾಯಿದೆಯನ್ನು ಮುಂದುವರಿಸಿದರೆ ಆಗುವ ಪ್ರಯೋಜನವೇನು? ದಶಂಬರ ತಿಂಗಳಲ್ಲಿ ಈ ಕಾಯಿದೆಯ ಅವಧಿ ಮುಗಿದಿದ್ದು, ಜನವರಿಯಲ್ಲಿ ಆ ಘಟನೆಗಳಾಗಿದ್ದರೆ— ಕಾಯಿದೆ ಇರಬೇಕಾಗಿತ್ತು ಎಂದು ಹೇಳುವುದರಲ್ಲಿ ಒಂದಿಷ್ಟು ಅರ್ಥವಿರುವುದು. ಕಾಯಿದೆಗೆ ಜೀವದಾನ ಕೊಡಿರಿ ಎಂದು ಫೆಬ್ರುವರಿಯಲ್ಲಿ ಕೇಳಿದರೆ ಸ್ವಲ್ಪವಾದರೂ ನ್ಯಾಯವಿರುವುದು. ಆದರೆ ಜಾರಿಯಲ್ಲಿದ್ದೂ ಪ್ರಯೋಜನ ವಿಲ್ಲದೆ ಹೋಗಿರುವ ಈ ಕಾಯಿದೆಗೆ ಜೀವದಾನ ಕೇಳುವ ಸರಕಾರದ ತರ್ಕಬುದ್ಧಿ ಸರಿಯಾಗಿಲ್ಲ ಎಂದು

ಕಾಯಿದೆಯಲ್ಲಿರುವ ವಿಚಾರಣೆಯ ನಿಯಮಗಳು ಬರೀ ನಾಟಕೀಯವಾಗಿವೆ. ಅವುಗಳಿಂದ ನ್ಯಾಯ ದೊರಕುವುದಿಲ್ಲ. ಸಮಾಜ ಘಾತುಕ ಶಕ್ತಿಗಳನ್ನು ಹಿಡಿದಿಡುವುದಕ್ಕೆ ಇತರ ಸಾಧಾರಣ ಕಾನೂನುಗಳೇ ಸಾಕು. ಅಸಾಧಾರಣ ಕಾನೂನು ಅಗತ್ಯವಿಲ್ಲ ಎಂದು ಡಾಂಗೆ ಸ್ಪಷ್ಟಪಡಿಸಿದರು;

ಮಹಾತ್ಮಾಗಾಂಧಿಯವರ ಭಾವಚಿತ್ರಗಳನ್ನಾಗಲಿ ರಾಷ್ಟ್ರ ಘಟನೆಯನ್ನಾಗಲಿ ಸುಡುವುದನ್ನು ತಪ್ಪಿಸಬೇಕು ನಿಜ. ಆದರೆ ಅದಕ್ಕೆ ಈ ಕಾನೂನಿನ ಅವಶ್ಯಕತೆಯಿಲ್ಲ. ಗಾಂಧಿಜಿಯವರು ಜೀವಂತ ಇದ್ದಿದ್ದರೆ, ಅವರ ಭಾವ ಚಿತ್ರಕ್ಕೆ ಕಾನೂನಿನ ರಕ್ಷಣೆ ಬೇಡವೆಂದು ಅವರೇ ಹೇಳುತ್ತಿದ್ದರು. ಮೂರು ತಿಂಗಳಿಗೊಮ್ಮೆ ತಿದ್ದುಪಡಿಯಾಗುವ ಘಟನೆಯ ಪ್ರತಿಯನ್ನೊಬ್ಬ ಸುಟ್ಟರೆ ಅದಕ್ಕೆ ಇನ್ನು ಕಾನೂನೇನೂ ಅವಶ್ಯಕವಿಲ್ಲ ಎಂದೂ ಡಾಂಗೆ ಹೇಳಿದರು.

ಅನಂತರ ಮಾತನಾಡಿದ ಸೌಶಿಲ್ ಬರೂಚಾರವರು, ಈ ಕಾನೂನು ಪ್ರಜಾಪ್ರಭುತ್ವದ ನಿಷೇಧವೆಂದು ಸಾರಿದರು. ತಾನು ಕಮ್ಯೂನಿಸ್ಟ್ ಸಿದ್ಧಾಂತವನ್ನು ಒಪ್ಪುವುದಿಲ್ಲ ಆದರೆ ಕಮ್ಯೂನಿಸ್ಟರ ವಿರೋಧವಾಗಿ ಇಂಥ ಶಾಸನವನ್ನು ಉಪಯೋಗಿ

## ದಶ ವರ್ಷಗಳ ನಂತರವೂ ಕರಿಕಾಯಿದೆ ಬೇಕೆ?

ಈ ಪ್ರತಿಬಂಧಕ ಸ್ಥಾನಬದ್ಧತೆಯ ಕಾನೂನು ಅಗತ್ಯವಿಲ್ಲ ಎಂದು ಅಲ್ಲಿನ ಕಮ್ಯೂನಿಸ್ಟ್ ಸರಕಾರ ಕೇಂದ್ರ ಸರ್ಕಾರಕ್ಕೆ ತಿಳಿಸಿದೆ. ಜನರ ಬೆಂಬಲನ್ನು ಹೊಂದಿಕೊಂಡಿರುವ ಸರಕಾರಕ್ಕೆ ಪ್ರತಿಬಂಧಕ ಸ್ಥಾನಬದ್ಧತೆ ಕಾನೂನಿನಂಥ ಮರ್ದನಾಸ್ತ್ರ ಅವಶ್ಯವಿಲ್ಲ. ಆದರೆ ಜನತೆಯ ವಿರೋಧವಾಗಿ ವರ್ತಿಸುವುದರಿಂದ ಜನರ ಬೆಂಬಲ ಕಳೆದುಕೊಂಡಿರುವ, ಕಳೆದುಕೊಳ್ಳುತ್ತಿರುವ, ಕಾಂಗ್ರೆಸ್ ಸರಕಾರಗಳಿಗೆ ಕೊನೆಗೂ ಪ್ರತಿಬಂಧಕ ಸ್ಥಾನಬದ್ಧತೆ ಕಾನೂನಿನಂಥ ಸ್ವಾತಂತ್ರ್ಯ ವಿಧ್ವಂಸಕ ಆಯುಧಗಳೇ ಆಧಾರ ಎನ್ನುವುದು ಕಾಂಗ್ರೆಸ್ ನಾಯಕರಿಗೆ ಚೆನ್ನಾಗಿ ಗೊತ್ತಿದೆ. ಅದ್ದರಿಂದಲೇ ಈ ಕಾನೂನಿಗೆ ಜೀವದಾನ ಬೇಡಲಾಗುತ್ತಿದೆ.

ಈ ಕಾನೂನಿಗೆ ಜೀವದಾನ ಮಾಡುವ ಮಸೂದೆಯು ಲೋಕಸಭೆಯಲ್ಲಿ ಚರ್ಚೆಗೆ ಬಂದಾಗ ಕಮ್ಯೂನಿಸ್ಟ್, ಪ್ರಜಾ ಸೋಷಲಿಸ್ಟ್ ಮತ್ತು ಸ್ವತಂತ್ರ ಸದಸ್ಯರು ಅದನ್ನು ತೀವ್ರವಾಗಿ ವಿರೋಧಿಸಿದರು. ಅದು "ಕರಿ ಕಾನೂನು", ಅದು ಸ್ವತಂತ್ರ ರಾಷ್ಟ್ರದ ಶಾಸನ ಪುಸ್ತಕದಲ್ಲಿರುವುದು ಯೋಗ್ಯವಲ್ಲ ಎಂದು ಅವರೆಲ್ಲ ಟೀಕಿಸಿದರು.

ಡಾಂಗೆ ಮುಂದುವರಿಸುತ್ತ, ಶೇರು ಬಜಾರಿನಲ್ಲಿ ಘಾತುಕತನದಿಂದ ವರ್ತಿಸುವ ಯಾವ ಸಮಾಜ ಶತ್ರುವನ್ನಾಗಲಿ, ವಿದೇಶ ನಾಣ್ಯಗಳನ್ನು ಪೋಲು ಮಾಡುವ ಯಾವ ಸಟ್ಟಾಗಾರನನ್ನಾಗಲಿ ಈ ಕಾನೂನಿನಂತೆ ಸ್ಥಾನಬದ್ಧತೆಗೆ ಗುರಿಪಡಿಸಿದ್ದಿಲ್ಲ ಎಂದರು. ಇಂಥ ಕೃತ್ಯಗಳು "ಸ್ವಾಭಾವಿಕ" ಎಂದೂ ಪರಿಣಾಮಗಳು "ಸ್ವಾಭಾವಿಕ ನಿರುದ್ಯೋಗ, ಸ್ವಾಭಾವಿಕ ಉಪವಾಸ, ಸ್ವಾಭಾವಿಕ ಮರಣ' ಎಂದು ಪರಿಗಣಿಸಲ್ಪಡುತ್ತವೆ! ಆ ಕೃತ್ಯಗಳೊಂದೂ ಸಮಾಜ ಘಾತುಕವೆಂದು ಸರಕಾರ ಎಣಿಸುವುದಿಲ್ಲ. ಆದರೆ ಒಬ್ಬ ಕೆಲಸಗಾರ ಅವನ ಹಕ್ಕಿನ ಸಲುವಾಗಿ ಮುಷ್ಕರ ಹೂಡಿದರೆ, ಅದು ಕೂಡಲೆ "ಅಸಾಧಾರಣ" ಕೃತ್ಯವೆಂದು ಎಣಿಸಲ್ಪಡುತ್ತದೆ; ಅದರ ವಿರೋಧವಾಗಿ ಈ ಕಾನೂನು ಪ್ರಯೋಗಿಸಲ್ಪಡುತ್ತದೆ. ಸರಕಾರದ ರೀತಿ ನೀತಿಗಳು ಹೀಗಿದ್ದರೆ, ಇಂಥ ಕಾನೂನುಗಳಿಂದ ಪ್ರಜಾಪ್ರಭುತ್ವವು ದಿನೇ ದಿನೇ ಹಾಳಾಗದೆ ಉಳಿಯಲಾರದು.

### ನಿಷ್ಪ್ರಯೋಜಕ ಮತ್ತು ದುಷ್ಪರಿಣಾಮಕಾರಿ

ರಾಮನಾಥಪುರಂ, ಪಂಜಾಬ್, ಕರಗಪುರ ಮುಂತಾದ ಕಡೆಗಳ ಘಟನೆಗಳು, ಹೇಳಬೇಕಾಗಿದೆ. ಈ ಕಾಯಿದೆಯನ್ನು ಮುಂದುವರಿಸುವ ಅಗತ್ಯವೇ ಇಲ್ಲ ಎಂದು ಡಾಂಗೆ ಹೇಳಿದರು.

### ಜನರನ್ನು ಸದೆಬಡೆಯುವ ಶಾಸನ

ಬಹುಸಂಖ್ಯಾಕ ಜನರ ಆಶೆ ಆಕಾಂಕ್ಷೆಗಳನ್ನು ಹತ್ತಿಕ್ಕುವುದಕ್ಕೂ ಕೆಲವು ಸಂದರ್ಭಗಳಲ್ಲಿ ಬಹು ಸಂಖ್ಯಾಕರ ನಿರ್ಣಯಗಳನ್ನು ಪ್ರತಿಭಟಿಸುವುದಕ್ಕೂ ಈ ಕಾನೂನು ಉಪಯೋಗಿಸಲ್ಪಡುತ್ತದೆ ಎಂದು ಡಾಂಗೆ ಟೀಕಿಸಿದರು. ಕಮ್ಯೂನಿಸ್ಟರನ್ನು ಇತರ ಪ್ರತಿಪಕ್ಷಗಳ ನಾಯಕರನ್ನೂ ಈ ಕಾನೂನಿನ ಪ್ರಕಾರ ಬಂಧಿಸಲಾಗಿದೆ. ಮಹಾರಾಷ್ಟ್ರದ ಮತ್ತು ಗುಜರಾಥಿನ ಅತ್ಯಂತ ಬಹುಸಂಖ್ಯಾಕ ಜನರ ನಿರ್ಧಾರವನ್ನು ಕಡೆಗಣಿಸಿ, ಕೆಲವೇ ಮಂದಿಯ ಹೇಳಿಕೆಯಂತೆ ದ್ವಿಭಾಷಾ ಮುಂಬಯಿ ರಾಜ್ಯವನ್ನು ಏರ್ಪಡಿಸಿದಾಗ ಈ ಕಾನೂನು ಧಾರಾಳವಾಗಿ ಉಪಯೋಗಿಸಲ್ಪಟ್ಟಿದೆ. ತಾನೂ ಈ ಕಾನೂನಿನ ಅನ್ವಯ ಸ್ಥಾನಬದ್ಧತೆಗೆ ಗುರಿಯಾಗಿದ್ದೆನೆಂದು ಡಾಂಗೆ ಹೇಳಿದರು. ಸರಕಾರವು ಈ ಕಾಯಿದೆಯನ್ನು ಉಪಯೋಗಿಸಿದಾಗ ಜನರು ಪ್ರಕೋಪಗೊಂಡರು. ಸರಕಾರ ಅವರ ಮೇಲೆ ಲಾಠಿ— ಗುಂಡುಗಳ ಪ್ರಯೋಗ ನಡೆಸಿತು.

ಸುವುದು ತೀರ ಅನ್ಯಾಯ. ಕಮ್ಯೂನಿಸ್ಟರಿಗೂ ನ್ಯಾಯ ಪಡೆಯುವ ಹಕ್ಕು ಇದೆ ಎಂದ ಬರೂಚಾರವರ ಹೇಳಿದರು. ಸಾಧಾರಣ ಕಾಯಿದೆಯ ಬಲದಿಂದ ಆಡಳಿತೆ ನಡೆಸಲು ಸಾಧ್ಯವಿಲ್ಲದ ಸರಕಾರ ಅಧಿಕಾರ ಬಿಟ್ಟು ತೊಲಗಬೇಕು ಎಂದು ಅವರು ಖಂಡತುಂಡವಾಗಿ ನುಡಿದರು. ವಿಚಾರಣೆಗೆ ಗುರಿಪಡಿಸಲು ಸಾಧ್ಯವಿಲ್ಲದ ಅಪರಾಧವೇ ಇಲ್ಲ. ನಾವೆಲ್ಲ ಹೇಳುವ 1919ರ ರವಲೆಟ್ ಕಾನೂನಿನಲ್ಲಿ ಕೂಡ ವಿಚಾರಣೆಯ ನಿಯಮವಿದೆ ಅದಿಲ್ಲದ ಈ ಕಾನೂನು ನಮ್ಮ ಶಾಸನ ಪುಸ್ತಕದಲ್ಲಿ ಇರಬಾರದು ಎಂದು ಬರೂಚ ಹೇಳಿದರು.

### ಕಾಂಗ್ರೆಸಿನ ಹೊಣೆಗಾರಿಕೆ

ಪಾರ್ವತಿ ಕೃಷ್ಣನ್‌ರವರು ಮಾತನಾಡುತ್ತಾ, ತಮಿಳು ನಾಡಿನಲ್ಲಿ ಜಾತೀಯತೆಗೆ, ದ್ರಾವಿಡ ಕಜಗಮಿನ ಚಳುವಳಿಗೆ, ಪ್ರೋತ್ಸಾಹ ನೀಡುತ್ತಿರುವುದು ಕಾಮರಾಜರ ಮಂತ್ರಿಮಂಡಲವೆಂದು ಹೇಳಿದರು. ಪ್ರತಿಬಂಧಕ ಸ್ಥಾನ ಬದ್ಧತೆಯ ಕಾನೂನನ್ನು ಉಪಯೋಗಿಸುವುದಿದ್ದರೆ ಕಾಮರಾಜರ ಮಂತ್ರಿಗಳ ಅನ್ಯಾಯಗಳ ಮೇಲೆ ಮೊದಲು ಉಪಯೋಗಿಸಬೇಕೆಂದು ಅವರು ವಾದಿಸಿದರು.

*

# ಇಂಡೊನೇಷಿಯದ ಸ್ವಾತಂತ್ರ್ಯ ಸಮರ ಮುನ್ನುಗ್ಗಿದೆ!

ವಸಾಹತು ದಾಸ್ಯದ ಕತ್ತಲೆ ಯುಗ ಕಳೆದು ರಾಷ್ಟ್ರಗಳ ಸ್ವಾತಂತ್ರ್ಯ–ಸಮಾನತೆಯ ಉಜ್ವಲ ಯುಗ ಉದಯವಾಗಿದೆ ಎನ್ನುವುದು ಈ ಕಾಲಘಟ್ಟದ ವಿಶಿಷ್ಟತೆ. ಮರಣೋನ್ಮುಖವಾಗಿರುವ ಸಾಮ್ರಾಜ್ಯಶಾಹಿಗಳು, ಕೊನೆಯ ಘಳಿಗೆ ಸಮೀಪಿಸಿದಂತೆಲ್ಲ, ನಗ್ನವಾಗಿ ತಮ್ಮ ಕರಾಳತೆಯನ್ನು ಪ್ರಕಟಿಸುತ್ತವೆ. ಆದರೆ ಎಚ್ಚೆತ್ತ ಜನತೆ, ಐಕ್ಯತೆಯ ಬಲದಿಂದ, ಸಾಮ್ರಾಜ್ಯಶಾಹಿಯ ಅರ್ಭಟವನ್ನು ಮಣ್ಣುಗೂಡಿಸಿ ಸ್ವಾತಂತ್ರ್ಯವನ್ನು ಭದ್ರಗೊಳಿಸುತ್ತವೆ; ಭವಿಷ್ಯತ್ತನ್ನು ಭದ್ರಗೊಳಿಸುತ್ತವೆ.

ಇಂಡೊನೇಶಿಯದಲ್ಲಿ ಇತ್ತೀಚೆಗೆ ನಡೆದಿರುವ ಘಟನೆಗಳು ಇವಕ್ಕೊಂದು ಉದಾಹಣೆಯಾಗಿದೆ. 1950ರಲ್ಲಿ ಡಚ್ ಸಾಮ್ರಾಜ್ಯಶಾಹಿಯು ಸ್ವತಂತ್ರ ಇಂಡೊನೇಶಿಯ ಪ್ರತಿನಿಧಿಗಳೊಡನೆ ಸಂಧಾನಕ್ಕೆ ಒಪ್ಪಬೇಕಾಯಿತು. ಇಂಡೊನೇಶಿಯದ ಪಶ್ಚಿಮ ಇರಿಯನ್ ಪ್ರದೇಶವನ್ನು ಇಂಡೊನೇಶಿಯಕ್ಕೆ ಒಪ್ಪಿಸುವ ಕುರಿತು ಮಾತುಕತೆ ನಡೆಸಲು ಒಪ್ಪಬೇಕಾಯಿತು. ಆದರೆ ಈ ವರೆಗೂ ಆ ಸಮಸ್ಯೆ ಬಗೆಹರಿಯದೆ ಉಳಿದಿದೆ. ಇತ್ತೀಚೆಗೆ, ಡಚ್ ಮತ್ತು ಆಸ್ಟ್ರೇಲಿಯ ಸರಕಾರಗಳು ಒಂದು ಜಂಟಿ ಹೇಳಿಕೆ ಹೊರಡಿಸಿ ಪಶ್ಚಿಮ ಇರಿಯನ್ ಪ್ರದೇಶವನ್ನು ಅಕ್ರಮವಾಗಿ ಡಚ್ಚರ ಸ್ವಾಧೀನ ಇರಿಸಿಕೊಳ್ಳುವ ಧೋರಣೆಯನ್ನು ಪ್ರಕಟಗೊಳಿಸಿವೆ. ಅಮೆರಿಕವು ಈ ವಿಚಾರದಲ್ಲಿ "ತಟಸ್ಥವಾಗಿ" ಇರುವ ನೀತಿಯನ್ನು ಸಾರಿದೆ. ಹೀಗೆ ಇಂಡೊನೇಶಿಯದ ಒಂದು ಭಾಗವನ್ನು ಆಕ್ರಮಿಸಿ ಸ್ವಾಧೀನದಲ್ಲಿಟ್ಟುಕೊಳ್ಳಲು ಸಾಮ್ರಾಜ್ಯಶಾಹಿಗಳು ಪಿತೂರಿ ನಡೆಸಿವೆ.

ನವಂಬರ ತಾ|| 19ರಂದು ಯುಕ್ತರಾಷ್ಟ್ರ ಸಂಸ್ಥೆಯ ರಾಜಕೀಯ ಸಮಿತಿಯಲ್ಲಿ ಈ ಸಮಸ್ಯೆಯು ಚರ್ಚಿಸಲ್ಪಟ್ಟಿತು. ಭಾರತ, ಬರ್ಮ, ಸಿಲೋನ್, ನೇಪಾಳ, ಅಫ್ಘನಿಸ್ಥಾನ, ಈಜಿಪ್ಟ್, ಸಿರಿಯ, ಇಥಿಯೋಪಿಯ ಮುಂತಾದ (ಪಾಕಿಸ್ಥಾನದ ಹೊರತು) ಆಸ್ಯ—ಆಫ್ರಿಕಾ ದೇಶಗಳು ಇಂಡೊನೇಶಿಯದ ಸಹಿತವಾಗಿ, ಪಶ್ಚಿಮ ಇರಿಯನಿನ ಸಮಸ್ಯೆಯನ್ನು ಕೂಡಲೆ ಮಾತುಕತೆಯಿಂದ ಪರಿಹರಿಸಬೇಕೆಂಬ ಠರಾವನ್ನು ಮಂಡಿಸಿದ್ದುವು.

ಇಂಡೊನೇಶಿಯದ ವಿದೇಶ ಮಂತ್ರಿ ಡಾ|| ಸುಬಾಂಡ್ರಿಯೋ ಠರಾವಿನ ಬಗ್ಗೆ ಮಾತನಾಡುತ್ತ, "ಡಚ್ ಸರಕಾರದೊಡನೆ ನಮಗಿರುವ ವಿವಾದವನ್ನು ತೀರ್ಮಾನಿಸಲು ಸಹಾಯ ಮಾಡಬೇಕೆಂದು ಯುಕ್ತ ರಾಷ್ಟ್ರ ಸಂಸ್ಥೆಯನ್ನು ನಾವು ಇದೀಗ ಪ್ರಾರ್ಥಿಸುತ್ತಿರುವುದು, ಬಹುತೇಕ ಕೊನೆಯ ಪ್ರಾರ್ಥನೆಯಾಗಬಹುದು." ಎಂದರು.

ಸೋವಿಯತ್ ಪ್ರತಿನಿಧಿಯು ಇರಿಯನ್ ಪ್ರದೇಶವನ್ನು ಇಂಡೊನೇಶಿಯಕ್ಕೆ ಹಿಂದಿರುಗಿಸಬೇಕೆಂದು ವಾದಿಸಿದರು. ಆಸ್ಯಾಖಂಡದಲ್ಲಿ ವಸಾಹತು ಆಳ್ವಿಕೆ ಕೊನೆಗಾಣಬೇಕು; ಇಂಡೊನೇಶಿಯದ ಭಾಗವಾದ ಪಶ್ಚಿಮ ಇರಿಯನ್ ಸ್ವತಂತ್ರವಾಗಿ ಇಂಡೊನೇಶಿಯಕ್ಕೆ ಸೇರಬೇಕು ಎಂದು ಸ್ಪಷ್ಟಪಡಿಸಿದರು.

ಪಶ್ಚಿಮ ಇರಿಯನಿನ ಸ್ವಾತಂತ್ರ್ಯದ ಹೋರಾಟವು ಯುಕ್ತ ರಾಷ್ಟ್ರ ಸಂಸ್ಥೆಯ ನಾಲ್ಕು ಗೋಡೆಗಳೊಳಗೆ ನಡೆಯುವ ವಾದ–ವಿವಾದಗಳಲ್ಲೇ ಮುಕ್ತಾಯಹೊಂದುವುದೆಂದು ಸಾಮ್ರಾಜ್ಯವಾದಿಗಳೂ ಅವರ ಕಿಂಕರರೂ ಆಶಿಸಿದ್ದಿರಬಹುದು. ಆದರೆ ಇಂಡೊನೇಶಿಯದ ಜನತೆ ಅವರ ಆ ಆಸೆಯನ್ನು ಈಡೇರಿಸುವಂತಿಲ್ಲ. ನವಂಬರ ತಾ|| 25ರಂದು ಇಂಡೊನೇಶಿಯದ 82 ಮಿಲಿಯ ಜನತೆ ಹತ್ತು ನಿಮಿಷಗಳ ಮೌನವನ್ನು ಆಚರಿಸಿತು. ಜೀವಾಧಾರ ಕೆಲಸಗಳ ಹೊರತು ಮತ್ತೆಲ್ಲ ಉದ್ಯಮಗಳಲ್ಲೂ ದುಡಿಯುವ ಕೆಲಸಗಾರರು ಉಪಕರಣಗಳನ್ನು ಕೆಳಗಿಟ್ಟರು. ಇಡೀ ಇಂಡೊನೇಶಿಯ ಪಶ್ಚಿಮ ಇರಿಯನಿನ ವಿಮೋಚನೆಯ ಹೋರಾಟವನ್ನು ಮುಂದೊತ್ತುವ ಪ್ರತಿಜ್ಞೆಯನ್ನು ಮಾಡಿತು. ಯುಕ್ತ ರಾಷ್ಟ್ರ ಸಂಸ್ಥೆಯು ಪಶ್ಚಿಮ ಇರಿಯನಿನ ವಿಮೋಚನೆಗೆ ಯೋಗ್ಯ ಕ್ರಮ ವಹಿಸದಿದ್ದರೆ, ಇಂಡೊನೇಶಿಯ ಸರಕಾರವು ಆ ಬಗ್ಗೆ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನಿರ್ಧಾರವಾಯಿತು.

ಅಧ್ಯಕ್ಷ ಸುಕರ್ನೊ, ಯುಕ್ತರಾಷ್ಟ್ರ ಸಂಸ್ಥೆಯು ಯೋಗ್ಯ ತೀರ್ಮಾನ ಮಾಡದಿದ್ದಲ್ಲಿ, "ನಾವು ನಮ್ಮ ಸ್ವಂತ ಶಕ್ತಿಯನ್ನು ಪ್ರದರ್ಶಿಸಬೇಕಾಗುವುದು. ಪಶ್ಚಿಮ ಇರಿಯನ್‌ನಲ್ಲಿ ಡಚ್ಚರ ಆಧಿಪತ್ಯ ಇರುವುದೆಂದರೆ ನಮ್ಮ ಬೆನ್ನ ಹಿಂದೆ ಪಿಸ್ತೂಲು ಅಥವಾ ಕಠಾರಿ ಇರುವಂತೆ. ಡಚ್ಚರು ಆ ದ್ವೀಪವನ್ನು ತಳಹದಿಯಾಗಿ ಉಪಯೋಗಿಸಿ ಇಂಡೊನೇಶಿಯ ಪ್ರಜಾ ರಾಜ್ಯದ ವಿರೋಧ ಪಿತೂರಿ ನಡೆಸುತ್ತಿದ್ದಾರೆ." ಎಂದು ಸಾರಿದ್ದಾರೆ.

## ಸುಕರ್ನೋರ ಕಗ್ಗೊಲೆಗೆ ಯತ್ನ

ಪಶ್ಚಿಮ ಇರಿಯನಿನ ವಿಮೋಚನೆಗೆ ಇಂಡೊನೇಶಿಯದ ಜನತೆ ಹೋರಾಟಕ್ಕೆ ತಯಾರಾಗುತ್ತಿರುವ ಹಿನ್ನೆಲೆಯಲ್ಲಿ ಅಧ್ಯಕ್ಷ ಸುಕರ್ನೋರವರ ಕಗ್ಗೊಲೆಗೆ ಯತ್ನ ನಡೆಯಿತು. ಆ ಯತ್ನವು ಯಾರೋ ಒಬ್ಬ ತಲೆತಿರುಕ ವ್ಯಕ್ತಿಯ ಸಾಹಸವಲ್ಲ; ಅದು ಸಾಮ್ರಾಜ್ಯವಾದಿಗಳು ಪಿತೂರಿಯಿಂದ ಆದುದೆನ್ನುವುದರಲ್ಲಿ ಅನುಮಾನವಿಲ್ಲ.

ಅಧ್ಯಕ್ಷ ಸುಕರ್ನೋರವರು ಮಕ್ಕಳೊಂದಿಗೆ ಒಂದು ಶಾಲೆಯ ಉತ್ಸವಕ್ಕೆ ತೆರಳಿದ್ದರು. ಒಂದು ಪಿಸ್ತೂಲಿನ ಸದ್ದಾದ ಕೂಡಲೆ ನಾಲ್ಕು ಗ್ರೆನೇಡುಗಳನ್ನು ಯಾರೊ ಒಗೆದರು. ಎರಡು ಶಾಲಾ ಮಕ್ಕಳ ಸಹಿತ ಏಳು ಮಂದಿ ಆಸ್ಫೋಟನದಿಂದ ಸ್ಥಳದಲ್ಲಿ ಮಡಿದರು. ಮತ್ತೆ ಮೂವರು ಆಸ್ಪತ್ರೆಯಲ್ಲಿ ಹತರಾದರು. 137 ಮಂದಿ ತೀವ್ರವಾಗಿ ಗಾಯಗೊಂಡರು. ಅಧ್ಯಕ್ಷ ಸುಕರ್ನೋರವರ ರಕ್ಷಕ ದಳದವರ ಪ್ರಯತ್ನದಿಂದ ಮಾತ್ರ ಅವರು ಉಳಿದುಕೊಂಡರು.

ಇಂಡೊನೇಶಿಯದಲ್ಲಿ ಸರಕಾರವನ್ನು ಉಳಿಸುವುದಕ್ಕೆ ಸಾಮ್ರಾಜ್ಯಶಾಹಿಗಳು ಕಳೆದ ಕೆಲವು ತಿಂಗಳುಗಳಿಂದ ನಡೆಸುತ್ತಿರುವ ಒಳಸಂಚು, ರಾಜಕೀಯ ತಂತ್ರ ಮತ್ತಿತರ ದುಷ್ಕೃತ್ಯಗಳ ಕೊನೆಯ ಹಂತ ಈ ಕಗ್ಗೊಲೆಯ ಪ್ರಯತ್ನವಾಗಿದೆ. ಇದರಿಂದ ಇಂಡೊನೇಶಿಯದ ಜನತೆ ಇನ್ನು ಒಂದು ನಿಮಿಷ ಕೂಡ ತಡಮಾಡದೆ ಸಾಮ್ರಾಜ್ಯಶಾಹಿಗಳನ್ನು ಉಚ್ಚಾಟನೆ ಮಾಡಲು ನಿರ್ಧಾರದ ಹೆಜ್ಜೆ ಇಡಲು ಪ್ರೇರಿತವಾಗಿದೆ.

೩ನೇ ಪುಟ ನೋಡಿ

## ಗೋವಾ ವಿಮೋಚನೆಗೆ ಪೋರ್ಚುಗಲ್ ಕಮ್ಯೂನಿಸ್ಟರ ಬೆಂಬಲ

ಪೋರ್ಚುಗಲ್‌ನಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ಮೇಲೆ ನಿಷೇಧವಿದೆ. ಕಮ್ಯೂನಿಸ್ಟ್ ಪಾರ್ಟಿಯ ಐದನೆಯ ಮಹಾಧಿವೇಶನವು ಗುಪ್ತವಾಗಿ ಜರಗಿ, ವಸಾಹತು ಜನರ ಸ್ವಯಂ ನಿರ್ಣಯಾಧಿಕಾರಕ್ಕೆ ಬೆಂಬಲ ನೀಡುವ ನಿರ್ಣಯವನ್ನು ಅಂಗೀಕರಿಸಿದೆ.

ಗೋವಾದ ಬಗ್ಗೆ ಪೋರ್ಚುಗೀಸ್ ಕಮ್ಯೂನಿಸ್ಟ್ ಪಾರ್ಟಿಯ ಘೋಷಣೆಯಲ್ಲಿ, "ಗೋವಾದ ಮತ್ತು ಭಾರತೀಯರ ಜೀವಹಾನಿಗೂ ಪೋರ್ಚುಗೀಸ್ ಸೈನಿಕರ ಮರಣಕ್ಕೂ ಪೋರ್ಚುಗಲ್ ಸರಕಾರದ ಧೋರಣೆಯೇ ಕಾರಣವಾಗಿದೆ. ಸ್ವಯಂ ನಿರ್ಣಯಾಧಿಕಾರವನ್ನು ಬಯಸುವ ಗೋವ, ದಮನ್ ಮತ್ತು ದಿಯು ಜನರ ಮೇಲೂ ಗೋವಾ ಸಮಸ್ಯೆಯು ಬೇಗನೆ ಬಗೆ ಹರಿಯಬೇಕೆಂದು ಬಯಸುವ ಭಾರತೀಯರ ಮೇಲೂ ಅಮಾನವವಾದ ಹೋರಾಟದ ವಿಪತ್ತನ್ನು ಪೋರ್ಚುಗೀಸ್ ಸರಕಾರ ಹೊರಿಸಿರುತ್ತದೆ....... ಗೋವದ ಪ್ರಶ್ನೆಯನ್ನು ಮಾತುಕತೆಗಳ ಮೂಲಕ ಶಾಂತ ರೀತಿಯಲ್ಲಿ ಪರಿಹರಿಸಬೇಕೆಂದೂ, ಸಂಪೂರ್ಣ ಸ್ವತಂತ್ರವಾಗಿ ತಮ್ಮ ಭವಿಷ್ಯತ್ತನ್ನು ನಿರ್ಣಯಿಸುವ ಅಧಿಕಾರ ಗೋವದ ಜನರದ್ದಾಗಿದೆ" ಎಂದು ಹೇಳಲಾಗಿದೆ.

ಹಾಗೆಯೇ ಪೋರ್ಚುಗಲಿನ ಇತರ ವಸಾಹತುಗಳ ವಿಮೋಚನೆಗೆ ಪೋರ್ಚುಗಲ್ ಕಮ್ಯೂನಿಸ್ಟ್ ಪಾರ್ಟಿಯು ತನ್ನ ಬೆಂಬಲವನ್ನು ಸ್ಪಷ್ಟಪಡಿಸಿದೆ. "ಪೋರ್ಚುಗೀಸ್ ಸ್ವೇಚ್ಛಾಧಿಪತ್ಯವು ವಸಾಹತು ಜನರನ್ನು ಅತ್ಯಂತ ಕ್ರೂರವಾಗಿ ಮರ್ದಿಸುತ್ತಿದೆ, ಸೂರೆ ಮಾಡುತ್ತಿದೆ. ಅದರ ವಸಾಹತು ಪದ್ಧತಿಯು ಗುಲಾಮಗಿರಿ ಮತ್ತು ಬಲತ್ಕಾರದಿಂದ ದುಡಿಸುವ ಪದ್ಧತಿಗಿಂತ ಬೇರೆಯೇನಲ್ಲ. ಆಫ್ರಿಕದ ಯುವಕರಲ್ಲಿ ಅತ್ಯಂತ ಬಲ ಶಾಲಿಗಳಾದವರನ್ನು ಸೆರೆಹಿಡಿದು ಅವರಿಂದ ಹಡಗುಗಳ ಒಳಗಡೆಯಲ್ಲೂ, ತೋಟಗಳಲ್ಲೂ ಗುಲಾಮರಾಗಿ ಕೆಲಸ ಮಾಡಿಸಲಾಗುತ್ತದೆ. ಅವರಲ್ಲಿ ಅನೇಕರು ಸಾಯುತ್ತಾರೆ, ಅಂಗಹೀನರಾಗುತ್ತಾರೆ, ತಿರುಗಿ ತಮ್ಮ ಮನೆ ಮಠ ಕಾಣದಂತಾಗುತ್ತಾರೆ........

ಪೋರ್ಚುಗೀಸ್ ಕಮ್ಯೂನಿಸ್ಟ್ ಪಾರ್ಟಿಯು ವಸಾಹತುಗಳ ಜನರಿಗೆ ತನ್ನ ಸಹತಾಪವನ್ನು ತಿಳಿಸುತ್ತದೆ; ಅವರ ಹೋರಾಟಗಳ ಬಗ್ಗೆ ಅವರನ್ನು ಅಭಿನಂದಿಸುತ್ತದೆ; ಅವರಿಗೆ ಬೆಂಬಲ ನೀಡುತ್ತದೆ" ಎಂದು ಮಹಾಧಿವೇಶನದ ನಿರ್ಣಯದಲ್ಲಿ ಹೇಳಲಾಗಿದೆ.

## ಸ್ವಾತಂತ್ರ-ಯೋಧೆ ಜಮೀಲಾ ★

ಇಪ್ಪತ್ತ ಎರಡು ವರ್ಷ ಪ್ರಾಯದ ಅಲ್ಜೀರಿಯಾ ಯುವತಿ ಜಮೀಲಾ ಬೋಹರ್ಡ್ ಫ್ರೆಂಚ್ ಸಾಮ್ರಾಜ್ಯವಾದಿ ಕೊಲೆಗಡುಕರಿಂದ ಮರಣ ದಂಡನೆಗೆ ಗುರಿಯಾಗಿದ್ದಾಳೆ. ಆಕೆಯ ಅಪರಾಧ–ತಾಯ್ನಾಡಿನ ವಿಮೋಚನೆಗೆ ಹೋರಾಡಿದುದು!

ಜಮೀಲಳನ್ನು ಕಳೆದ ಏಪ್ರಿಲ್ ತಿಂಗಳಲ್ಲಿ ಬಂಧಿಸಲಾಯಿತು. ಮಿಲಿಟರಿ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದ ಮೂವರ ಮೇಲೆ ಫ್ರೆಂಚ್ ಪೋಲೀಸರು ಗುಂಡು ಹಾರಿಸಿದಾಗ ಜಮೀಲಳ ಭುಜಕ್ಕೆ ಗೋಲಿ ತಗುಲಿ ಘಾಸಿಗೊಳಿಸಿತು. ಅನಂತರ ಆಕೆಯನ್ನು ಬಂಧಿಸಿ, ಆಗೋಸ್ತು ತಾ. 8ರಂದು ಮರಣ ದಂಡನೆ ವಿಧಿಸಲಾಗಿದೆ.

ಜಮೀಲಳನ್ನು ಸೆರೆಮನೆಯಲ್ಲಿ ಅಮಾನುಷ ಮರ್ದನಗಳಿಗೆ ಗುರಿಪಡಿಸಲಾಗಿತ್ತು.

ಆಕೆ ಅಪರಾಧವನ್ನು ಒಪ್ಪಿಕೊಂಡಿದ್ದಾಳೆ ಎಂಬ ದಾಖಲೆಯೊಂದನ್ನು ಪೋಲೀಸರು ಕೋರ್ಟಿನ ಮುಂದೆ ಸಾದರ ಪಡಿಸಿದರು. ಆದರೆ ಅದು ತನ್ನ ಬರಹವಲ್ಲವೆಂದೂ ಅದನ್ನು ಹಸ್ತಾಕ್ಷರ ಪರೀಕ್ಷಕರಿಂದ ಪರೀಕ್ಷೆ ಮಾಡಿಸಬೇಕೆಂದೂ ಜಮೀಲ ಕೇಳಿಕೊಂಡಳು. ಆ ಕೇಳಿಕೆ ನಿರಾಕರಿಸಲ್ಪಟ್ಟಿತು.

ಜಮೀಲಳ ವಿರೋಧವಾಗಿ ಒಂದೇ ಒಂದು ಸಾಕ್ಷಿ—ಹತ್ತೊಂಭತ್ತು ವರ್ಷದ ಒಬ್ಬ ಹುಡುಗಿ, ದೇಹ ಸ್ವಾಸ್ಥ್ಯವಿಲ್ಲದಾಕೆ, ಮಾತ್ರ ಸಾಕ್ಷ್ಯ ನುಡಿದಿರುವುದು! ಜಮೀಲಳ ಪರವಾಗಿ ಆಕೆಯ ತಾಯಿ ಗೊತ್ತುಮಾಡಿದ್ದ ವಕೀಲರು, ಈ ತಕ್ಷೀರಿನ ವಿಚಾರಣೆ ಸರಿಯಾಗಿ ನಡೆದಿಲ್ಲವೆಂದು ಪ್ರತಿಭಟಿಸಲು ಪ್ಯಾರಿಸಿಗೆ ಹೋದರು. ಆದರೆ ಅವರು ಅಲ್ಲಿಗೆ ತಲುಪುವ ಮೊದಲೇ 'ಜಮೀಲಳ ಪರವಾಗಿ' ಫ್ರೆಂಚ್ ಸರಕಾರವೇ ಒಬ್ಬ ವಕೀಲರನ್ನು ನೇಮಿಸಿ, ಜಮೀಲಳು

(೩ನೇ ಪುಟ ನೋಡಿ)

# ಇಂಡೊನೇಷಿಯ
# ಡಚ್ ಸಾಮ್ರಾಜ್ಯವಾದಿಗಳಿಗೆ ಅರ್ಧಚಂದ್ರ

ಇಂಡೊನೇಷಿಯದ ಭಾಗವಾದ ಪಶ್ಚಿಮ ಇರೇನ್ (ಡಚ್ ನ್ಯೂ ಗಿನಿಯ) ಇನ್ನೂ ಸಹ ಡಚ್ ಸಾಮ್ರಾಜ್ಯವಾದಿಗಳ ವಸಾಹತಾಗಿ ಉಳಿದಿದೆ. ಡಚ್ ಸಾಮ್ರಾಜ್ಯವಾದಿಗಳನ್ನು ಇಂಡೊನೇಷಿಯದಿಂದ ಹೊರದೂಡಲು, ವಸಾಹತು ಶಾಹಿಯನ್ನು ಅಳಿಸಲು ಇಂಡೊನೇಷಿಯದ ಜನತೆ ಹೋರಾಡುತ್ತಾ ಬಂದಿದೆ.

ಇಂಡೊನೇಷಿಯ ಸ್ವತಂತ್ರವಾದಂದಿನಿಂದಲೂ ಡಚ್ ಸಾಮ್ರಾಜ್ಯವಾದಿಗಳ ಆರ್ಥಿಕ ಹಿಡಿತದಿಂದ ತಮ್ಮ ರಾಷ್ಟ್ರವನ್ನು ಬಿಡುಗಡೆ ಮಾಡಲು ಯತ್ನಿಸುತ್ತಿದೆ. ಅನೇಕ ದೊಡ್ಡ ಡಚ್ ಕಂಪೆನಿಗಳು ಇಂಡೊನೇಷಿಯದಲ್ಲಿದ್ದು, ಶೋಷಣೆ ನಡೆಸಿ ಲಾಭವನ್ನು ಸೂರೆ ಮಾಡುತ್ತಿದೆ.

ಇಂಡೊನೇಷಿಯದ ಜನತೆ ಮತ್ತು ಅಲ್ಲಿನ ಕಾರ್ಮಿಕರು ಡಚ್ ಸಾಮ್ರಾಜ್ಯಶಾಹಿಗಳ ಈ ಶೋಷಣೆಯನ್ನು ಕೊನೆಗಾಣಿಸಲು ತೀರ್ಮಾನಿಸಿ, ಡಿಸೆಂಬರ್ 4ರಂದು ಭಾರೀ ಪ್ರದರ್ಶನ ನಡೆಸಿದರು. ಪ್ರದರ್ಶನ ನಡೆಸಿದ ಲಕ್ಷಾಂತರ ಕಾರ್ಮಿಕರು ಡಚ್ ಕಂಪೆನಿಗಳನ್ನು, ಬ್ಯಾಂಕುಗಳನ್ನು ವಶಪಡಿಸಿಕೊಂಡು ಅದನ್ನು ಇಂಡೊನೇಷಿಯ ಸರಕಾರದ ವಶಕ್ಕೆ ಕೊಟ್ಟಿದೆ. ಕೆಂಪು ಧ್ವಜಗಳನ್ನು ಹಿಡಿದ ಕಾರ್ಮಿಕರು ಮುನ್ನುಗ್ಗಿ, ಸಾಮ್ರಾಜ್ಯವಾದಿಗಳ ಅವಶೇಷಗಳನ್ನು ಅಳಿಸಿ ಹಾಕಿ, ತಮ್ಮ ಧ್ವಜವನ್ನು ಮೇಲೆ ಹಾರಿಸಿವೆ. ಕಾರ್ಮಿಕರ ಕ್ರಿಯಾ ಸಮಿತಿಯ ನೇತೃತ್ವದಲ್ಲಿ ನಡೆಯುತ್ತಿರುವ ಈ ಚಳುವಳಿ ಶಾಂತಯುತವಾಗಿ ಯಾವ ಗೊಂದಲವೂ ಇಲ್ಲದೆ ಯಶಸ್ವಿಯಾಗಿ ನಡೆದಿದೆ.

ಇಂಡೊನೇಷಿಯದಿಂದ ಡಚ್ ಜನರು ಕಾಲ್ಕೀಳುತ್ತಿದ್ದಾರೆ. 9000ಕ್ಕೂ ಮಿಕ್ಕ ಇರುವ ಡಚ್ ಜನರು ಇಂದು ಸ್ವದೇಶಕ್ಕೆ ಮರಳುತ್ತಿದ್ದಾರೆ. ಇಂಡೊನೇಷಿಯ ಸರಕಾರವು ವಿವಾದವನ್ನು ಶಾಂತಿಯುತವಾಗಿ ಇತ್ಯರ್ಥಗೊಳಿಸಲು ಡಚ್ ಸರಕಾರದೊಂದಿಗೆ ಮಾತುಕತೆ ನಡೆಸಲು ಯತ್ನಿಸುತ್ತಿದೆ.

ಇಂಡೊನೇಷಿಯದಲ್ಲಿ ಇತ್ತೀಚೆಗೆ ನಡೆಯುತ್ತಿರುವ ಈ ಘಟನೆ, ಏಷ್ಯಾ ಜನತೆ ಸಾಮ್ರಾಜ್ಯಶಾಹೀ ವಸಾಹತು ಶೋಷಣೆಯ ಅವಶೇಷಗಳನ್ನು ಸಂಪೂರ್ಣವಾಗಿ ಕಿತ್ತೊಗೆಯಲು ಯತ್ನಿಸುತ್ತಿರುವುದಕ್ಕೆ ಸಾಕ್ಷಿಯಾಗಿದೆ.

## ವಿಶೇಷ ಸಮಾಚಾರಗಳು

○ "ಕೇಂದ್ರ ಅಜ್ಞಾಪಿಸಿದ್ದರೂ ರಾಜ್ಯ ಸರಕಾರಗಳು ಭೂಸುಧಾರಣೆ ತಂದಿಲ್ಲ. ಇದರಿಂದ ದೇಶವಿಡೀ ಆಹಾರ ಬಿಕ್ಕಟ್ಟು ಒದಗಿದೆ ನಾನೇನು ಮಾಡುವುದು? ನಮ್ಮ ಜವಾಬುದಾರಿ ಅವರಿಗೆ ಹೇಳುವುದು, ಮಾಡುವುದು ಅವರ ಜವಾಬ್ದಾರಿ" ಎಂದು ಕೇಂದ್ರದ ಆಹಾರ ಸಚಿವ ಶ್ರೀ. ಜೈನ್ ಅವರು ಅಸಹಾಯಕತೆಯನ್ನು ತೋರ್ಪಡಿಸಿದ್ದಾರೆ.

○ "ಭೂಸುಧಾರಣೆ ರಾಜ್ಯದಲ್ಲಿ ಜಾರಿಯಾಗದಿರಲು ಪ್ರಧಾನ ತಡೆ ಅಲ್ಲಿನ ಪ್ರತಿಗಾಮಿ ಭೂಸ್ವಾಮಿಗಳು. 'ಭೂಸ್ವಾಮಿ—ಕೋಮುವಾರು-ನೌಕರಶಾಹಿ, ಈ ಒಕ್ಕೂಟವು ಎಲ್ಲಾ ಪ್ರಗತಿಶೀಲ ಮುನ್ನಡೆಯನ್ನು ತಡೆಯುತ್ತಿದೆ; ಇದಕ್ಕೆ ಪರಿಹಾರ ಜನತೆಯ ಸಾಮೂಹಿಕ ಶಕ್ತಿ" ಎಂದು ಕೇಂದ್ರದ ಸಮಾಜ ವಿಕಾಸ ಯೋಜನಾ ಖಾತೆಯ ಸಚಿವ ಶ್ರೀ ಡೇಯವರ ಕೆಂಡದಂತಹ ಮಾತುಗಳನ್ನಾಡಿದ್ದಾರೆ. ಇದು ಜೈನರವರಿಗಿತ್ತ ಪ್ರತ್ಯುತ್ತರವಲ್ಲವಷ್ಟೆ?

○ "ಸಮಾಜ ವಿಕಾಸ ಯೋಜನೆ ಯಶಸ್ವಿಯಾಗಿ ಸಮರ್ಥವಾಗಿ ನಡೆಯುವುದಿಲ್ಲ. ಅದಕ್ಕಾಗಿ ಒಂದು ಸಚಿವ ಖಾತೆಯ ಅಗತ್ಯವಿಲ್ಲ" ಎಂದು ಸಮಾಜ ವಿಕಾಸ ಯೋಜನೆಯ ಬಗ್ಗೆ ರಚಿತವಾದ ಬಲವಂತ್‌ರಾಯ್ ಮೆಹ್ತಾ ಸಮಿತಿಯು ಅಭಿಪ್ರಾಯಗಟ್ಟಿದೆ.

ಡೇಯವರ ಮಾತಿನಿಂದ ಮುಖಭಂಗ ಹೊಂದಿದ ಕೇಂದ್ರ ನೌಕರಶಾಹಿ ಗಣ್ಯರುಗಳ ಪ್ರತಿಕ್ರಿಯೆ ಇದಾಗಿರಬಹುದೆ.

○ ಸಂಬಳ ಪಾವತಿ ಕಾನೂನು (ಪೇಮೆಂಟ್ ಆಫ್ ವೇಜಸ್ ಆಕ್ಟ್) ತಿದ್ದುಪಡಿ ಮಾಡುವ ಮಸೂದೆಯು ತಾ॥ 11ರಂದು ಲೋಕಸಭೆಯಲ್ಲಿ ಚರ್ಚಿಸಲ್ಪಟ್ಟು ಅಂಗೀಕರಿಸಲಾಯಿತು.

ಬೋನಸ್ ಸಮಸ್ಯೆಯು ಬಹಳ ಜಟಿಲವಾಗಿದೆ. ಬೋನಸ್ಸಿನ ಬಗ್ಗೆ ಒಂದು ಸಮನ್ವಯವಾದ ನಿಯಮವನ್ನು ತಯಾರಿಸಲು ಈ ತನಕ ಸಾಧ್ಯವಾಗಿಲ್ಲ. ಸಕ್ಕರೆ ಕೈಗಾರಿಕೆಯ ಕೆಲಸಗಾರರ ಸಂಬಳ ನಿರ್ಣಯಿಸುವ ಸಮಿತಿಯು ಬೋನಸ್ಸಿನ ಪ್ರಶ್ನೆಯನ್ನೂ ಆಲೋಚಿಸಿ ತೀರ್ಮಾನಿಸುವುದಕ್ಕೆ ಈ ತಿದ್ದುಪಡಿ ಅಧಿಕಾರ ಕೊಡುತ್ತದೆ.

ಬೋನಸ್ಸಿನ ಬಗ್ಗೆ ಯೋಗ್ಯವಾದ ಕಾನೂನು ಮತ್ತು ನಿಯಮಗಳನ್ನು ಸೃಷ್ಟಿಸುವುದಕ್ಕೆ ಈ ತಿದ್ದುಪಡಿ ಸಹಾಯಕವಾಗುವುದೆಂದು ಅದನ್ನು ಲೋಕಸಭೆಯ ಎಲ್ಲ ವಿಭಾಗಗಳೂ ಸ್ವಾಗತಿಸಿವೆ.

○ "ಸಂಧಾನಪೂರ್ವಕವಾಗಿ ಇಂಡೊನೇಷಿಯಾದ ಭೂಮಿಯಾದ ಪಶ್ಚಿಮ ಇರಿಯನನ್ನು ಅದಕ್ಕೆ ಒಪ್ಪಿಸಲು ಡಚ್ ಸಾಮ್ರಾಜ್ಯಶಾಹಿಗಳು ನಿರಾಕರಿಸಿದ್ದಾರೆ. ಇದಕ್ಕುತ್ತರವಾಗಿ ಇಂಡೊನೇಷಿಯಾ ಜನತೆ - ಕಾರ್ಮಿಕ, ವಿದ್ಯಾರ್ಥಿಗಳು ಡಚ್ಚರ ಉದ್ಯಮ-ಸೊತ್ತುಗಳನ್ನೆಲ್ಲ ವಶಪಡಿಸಿ ಸರ್ಕಾರಕ್ಕೆ ಒಪ್ಪಿಸಿದ್ದಾರೆ.

○ ಭಾರತವಾದರೂ ಇಂಡೊನೇಷಿಯಕ್ಕೆ ಬುದ್ಧಿ ಹೇಳಬೇಕೆಂದು ಕೇಳಲಾಗಿದೆ. ಅವರಿಗೆ ಬುದ್ಧಿ ಹೇಳುವುದಿರಲಿ, ಅವರಿಂದ ಪಾಠ ಕಲಿತದ್ದೇ ಆದರೆ ಪಂಚವಾರ್ಷಿಕ ಯೋಜನೆಗಿರುವ ಹಣದ ಮುಗ್ಗಟ್ಟಿನ ಅರ್ಧಾಂಶ ಹೋಗುವುದೂ ಖಂಡಿತ! ಭಾರತದಿಂದ ವಿದೇಶೀಯರು ಪ್ರತಿ ವರ್ಷ ಲಾಭ ರೂಪದಲ್ಲಿ ರೂ. 150 ಕೋಟಿಯನ್ನು ಸಾಗಿಸುತ್ತಿದ್ದಾರೆಂಬುದು ನೆನಪಿರಲಿ.

○ ಪಾಕಿಸ್ತಾನದ 6ನೇ ಸಚಿವ ಸಂಪುಟ ಹುಟ್ಟಿದ 7ನೇ ವಾರದಲ್ಲೇ ಅಧಿಕಾರ ಪಟ್ಟದಿಂದ ಕೆಳಗುರುಳಿದೆ.

ಉರುಳಿದ ಸಂಪುಟದ ಪ್ರಧಾನಿ ಚುಂದ್ರೀಗರ್‌ರವರೇ ಪುನಃ ಒಮ್ಮೆ ಮಂತ್ರಿಮಂಡಲ ರಚಿಸಬೇಕೆಂದು, ಅಧ್ಯಕ್ಷ ಮಿರ್ಜಾರವರ ಆಶೆ. ಇದನ್ನು ನಡೆಯಗೊಡೆವು ಎಂದು ಇತರ ವಿರೋಧ ಪಕ್ಷಗಳ ಪ್ರತಿಜ್ಞೆ. ಹಾಗಾದರೆ?

ಪ್ರತ್ಯೇಕ ಮತದಾನ ಕ್ರಮದ ವಿಚಾರದಲ್ಲಿ ಮತಭೇದ ಎದ್ದು ಪಾಕಿಸ್ಥಾನದ ಚುಂದ್ರಿಗರ್ ಮಂತ್ರಿಮಂಡಲ ರಾಜೀನಾಮೆ ಇತ್ತಿದೆ. ಬೇರೊಂದು ಮಂತ್ರಿಮಂಡಲವನ್ನು ರಚಿಸಲು ಅಧ್ಯಕ್ಷ ಮಿರ್ಜಾರವರು ಚುಂದ್ರಿಗರ್‌ರವರನ್ನು ಕೇಳಿಕೊಂಡಿದ್ದಾರೆ.

ಹಿಂದೂಗಳೂ ಮುಸ್ಲಿಮರೂ "ಪ್ರತ್ಯೇಕ ರಾಷ್ಟ್ರಗಳು" ಎಂಬ ತತ್ವದ ಆಧಾರದಲ್ಲಿ ಭಾರತದ ವಿಭಜನೆಗೆ ಹೋರಾಡಿ, ಪಾಕಿಸ್ಥಾನವನ್ನು ಪಡೆದವರು, ಈಗ ಆ ತತ್ವದ ದುಷ್ಪರಿಣಾಮಗಳನ್ನು ಅನುಭವಿಸುತ್ತಿದ್ದಾರೆ!

○ ಅಣು ಆಯುಧಗಳ ಪರೀಕ್ಷಾರ್ಥ ಸ್ಫೋಟನೆಗಳನ್ನು ನಿಲ್ಲಿಸಲು ತಾವು ಸಿದ್ಧರಿರುವುದಾಗಿ ಸೋವಿಯತ್ ಪ್ರಧಾನಿ ಬುಲ್ಗಾನಿನ್ ಭಾರತ ಪ್ರಧಾನಿ ನೆಹರೂರವರಿಗೆ ಒಂದು ಪತ್ರದ ಮೂಲಕ ತಿಳಿಸಿದ್ದಾರೆ.

ಅಮೆರಿಕ ಮತ್ತು ಬ್ರಿಟನ್ ಕೂಡ ಅನುಸರಿಸುವುದಾದರೆ, ಅಣು ಆಯುಧಗಳ ಪರೀಕ್ಷೆಯನ್ನೂ ನಿಲ್ಲಿಸುವುದಾಗಿ 1958 ಜನವರಿ ತಾ॥ 1ರಂದು ಬಹಿರಂಗವಾಗಿ ಘೋಷಿಸಲು ಸೋವಿಯತ್ ಯೂನಿಯನ್ ತಯಾರಿದೆ ಎಂದು ಬುಲ್ಗಾನಿನ್ ತಿಳಿಸಿದ್ದಾರೆ.

"ವಿಶ್ವಶಾಂತಿಯ ಬಗ್ಗೆ ನಮ್ಮಲ್ಲಿ ಕಳಕಳಿಯಿದೆ; ರಾಷ್ಟ್ರಗಳ ಶಾಂತಿಯುತ ಸಹ ಅಸ್ತಿತ್ವ ನಮ್ಮ ಸಿದ್ಧಾಂತ. ಆದುದರಿಂದ ಅಣು ಆಯುಧಗಳ ಪರೀಕ್ಷೆಯನ್ನು ನಿಲ್ಲಿಸಿ ಬಿಡುವುದಕ್ಕೂ ಆಯುಧೀಕರಣದ ಸ್ಪರ್ಧೆಯನ್ನು ಕೊನೆಗಾಣಿಸುವುದಕ್ಕೂ ನಾವು ಸಿದ್ಧರಿದ್ದೇವೆ" ಎಂದು ಬುಲ್ಗಾನಿನ್ ಸ್ಪಷ್ಟಪಡಿಸಿದ್ದಾರೆ.

# ಬಲಿಕಂಬದ ನೆರಳಲ್ಲಿ ಅಲ್ಜೀರಿಯಾ ದೇಶಪ್ರೇಮಿ!

(೨ನೇ ಪುಟದಿಂದ)

ತಪ್ಪಿತಸ್ಥಳೆಂದು ಆತನ ಮೂಲಕ ಹೇಳಿಸಲಾಯಿತು.

ಜಮೀಲಳು ಕೋರ್ಟಿನ ಮುಂದೆ ಹೇಳಿದಳು: "ಮಹಾಶಯರೇ, ನೀವು ನನಗೆ ಮರಣ ದಂಡನೆ ವಿಧಿಸುವಿರೆಂದು ನನಗೆ ಗೊತ್ತಿದೆ. ಯಾಕೆಂದರೆ ನೀವು ಯಾರಿಗೆ ಸೇವೆ ಸಲ್ಲಿಸುತ್ತಿರುವಿರೋ ಅವರು ರಕ್ತಕ್ಕೆ ಬಾಯಾರಿದವರಾಗಿದ್ದಾರೆ. ನಾನು ನಿರಪರಾಧಿಯಾಗಿದ್ದೇನೆ. ನಿಜವೇನೆಂದರೆ, ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ; ನನ್ನ ದೇಶ ಸ್ವತಂತ್ರವಾಗಲೆಂದು ಬಯಸುತ್ತೇನೆ; ಅದಕ್ಕೋಸ್ಕರ ರಾಷ್ಟ್ರೀಯ ವಿಮೋಚನಾ ರಂಗದ ಹೋರಾಟಕ್ಕೆ ಬೆಂಬಲ ನೀಡುತ್ತೇನೆ. ಅದೊಂದೇ ಕಾರಣಕ್ಕೆ ನನ್ನನ್ನು ಚಿತ್ರಹಿಂಸೆಗೆ ಗುರಿಪಡಿಸಿದ್ದೀರಿ. ನನ್ನ ಇಬ್ಬರು ಸಹೋದರರನ್ನು ನೀವು ಕೊಂದಿರುವಿರಿ; ಹಾಗೆಯೇ ನನಗೂ ಮರಣ ದಂಡನೆ ವಿಧಿಸುವಿರಿ ....

"ಆದರೆ ನಮ್ಮನ್ನು ಕೊಲ್ಲುವುದರ ಮೂಲಕ ನಿಮ್ಮ ದೇಶದ ಸ್ವಾತಂತ್ರ್ಯದ ಪಾರಂಪರ್ಯವನ್ನೇ ನೀವು ಕೊಲ್ಲುತ್ತಿದ್ದೀರಿ; ನಿಮ್ಮ ದೇಶದ ಗೌರವಕ್ಕೆ ನೀವು ಕಲಂಕ ಹಚ್ಚುತ್ತಿದ್ದೀರಿ; ನಿಮ್ಮ ದೇಶದ ಭವಿಷ್ಯತ್ತನ್ನು ನೀವು ಆಪತ್ತಿಗೆ ಗುರಿಪಡಿಸುತಿದ್ದೀರಿ. ಅಲ್ಲದೆ ಅಲ್ಜೀರಿಯ ಸ್ವತಂತ್ರವಾಗುವುದನ್ನು ನೀವು ತಡೆಯಲಾರಿರಿ."

ಜಮೀಲ ಈಗ ಏಕಾಂತ ಬಂಧನದಲ್ಲಿದ್ದಾಳೆ. ಆಕೆಯ ಮರಣ ದಂಡನೆಯನ್ನು ರದ್ದು ಮಾಡಬೇಕೆಂದು ಎಂಭತ್ತೊಂಭತ್ತು ಮಂದಿ ಪ್ರಖ್ಯಾತ ಫ್ರೆಂಚ್ ಮಹಿಳೆಯರು ಮನವಿ ಮಾಡಿಕೊಂಡಿದ್ದಾರೆ. ಜಮೀಲ ಸಾಯಬಾರದು. ಆಕೆಯ ಜೀವ ಉಳಿಸುವುದು ಸ್ವಾತಂತ್ರ್ಯ ಪ್ರೇಮಿಗಳೆಲ್ಲರ ಕರ್ತವ್ಯ.

**ಜಮೀಲಳ ಮರಣ ದಂಡನೆ ರದ್ದಾಗಲಿ, ಜಮೀಲಳ ಬಿಡುಗಡೆಯಾಗಲಿ.**

# 'ದೇವರು ಕೊಟ್ಟರೂ ಪೂಜಾರಿ ಬಿಡನೆ?'

**ಕೇರಳದ ಕಾನೂನುಗಳಿಗೆ ಕೇಂದ್ರದ ಒಪ್ಪಿಗೆಗೆ ವಿಳಂಬ!**

ಕೇರಳ ವಿಧಾನ ಸಭೆಯು ಅಂಗೀಕರಿಸಿ, ರಾಷ್ಟ್ರಾಧ್ಯಕ್ಷರ ಒಪ್ಪಿಗೆಗೆ ಕಳುಹಿಸಲಾಗಿರುವ ಕಾನೂನುಗಳಿಗೆ ಅವರು ಇನ್ನೂ ಒಪ್ಪಿಗೆ ಕೊಟ್ಟಿಲ್ಲ. ಕೇರಳ ಕಮ್ಯೂನಿಸ್ಟ್ ಪಾರ್ಟಿಯು ಈ ಕಾಲ ವಿಳಂಬವನ್ನು ಖಂಡಿಸಿದೆ.

ಕೇರಳ ಸರಕಾರವು ಕೇಂದ್ರದ ಒಪ್ಪಿಗೆಗೆ ಕಳುಹಿಸಿರುವ ಕಾನೂನುಗಳು ಬಹಳ ಪ್ರಾಮುಖ್ಯವಾದವುಗಳು; ತುರ್ತಿನಲ್ಲಿ ಜಾರಿಗೆ ಬರತಕ್ಕವುಗಳು. ಅವುಗಳಿಗೆ ಕೂಡಲೆ ಒಪ್ಪಿಗೆ ಸಿಗಬೇಕು.

## ಅರಣ್ಯ ಆಡಳಿತ ಕಾನೂನು

ಖಾಸಗಿ ಅರಣ್ಯಗಳ ಆಡಳಿತೆಯನ್ನು ಸರಕಾರ ವಹಿಸಿಕೊಳ್ಳುವುದಕ್ಕೆ ಅಧಿಕಾರ ಕೊಡುವ ಮಸೂದೆಯು ಕೇರಳ ಅಸೆಂಬ್ಲಿಯಲ್ಲಿ ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಮಂಜೂರಾಗಿ ಕೇಂದ್ರಕ್ಕೆ ಕಳುಹಿಸಲ್ಪಟ್ಟಿದೆ. ಅದಕ್ಕೆ ಇನ್ನೂ ಅಧ್ಯಕ್ಷರ ಸಹಿ ಬಿದ್ದಿಲ್ಲ!

ಈ ಕಾನೂನಿನಲ್ಲಿ ಘಟನೆಗೆ ವಿರೋಧವಾದುದು ಏನೂ ಇಲ್ಲ. ಅಂಥ ಆಕ್ಷೇಪವನ್ನು ಯಾರು ಎತ್ತಿದ್ದೂ ಇಲ್ಲ. ಮಲಬಾರಿನ ದೊಡ್ಡ ದೊಡ್ಡ ಭೂಮಾಲಕರು ನೂರಾರು ಎಕ್ರೆ ಅರಣ್ಯಗಳನ್ನು ತಮ್ಮ ಕೈಯೊಳಗೆ ಇಟ್ಟುಕೊಂಡಿದ್ದಾರೆ. ಅವುಗಳ ಆಡಳಿತೆಯನ್ನು ಸರಕಾರ ವಹಿಸಿಕೊಳ್ಳುವುದಷ್ಟೆ ಈ ಮಸೂದೆಯ ಉದ್ದೇಶ. ಇದಕ್ಕೆ ಅಧ್ಯಕ್ಷರು ಅನುಮತಿ ಕೊಡಲು ತಡ ಮಾಡುವುದರಿಂದ ಆ ಭೂಮಾಲಕರು ಮರಗಳನ್ನೆಲ್ಲ ಕಡಿದು ಅರಣ್ಯಗಳನ್ನು ಬೋಳಿಸುವುದಕ್ಕೆ ಅವಕಾಶವಾಗಿದೆ; ರಾಷ್ಟ್ರೀಯ ಸಂಪತ್ತು ಸೂರೆಯಾಗುತ್ತಿದೆ.

## ವಿದ್ಯಾಭ್ಯಾಸ ಕಾನೂನು

ಅಧ್ಯಕ್ಷರ ಅನುಮತಿಗೆ ಕಳುಹಿಸಲಾಗಿರುವ ಮತ್ತೊಂದು ಕಾನೂನು ರಾಜ್ಯದ ವಿದ್ಯಾಭ್ಯಾಸ ಕ್ರಮದ ಸುಧಾರಣೆಗೆ ಸಂಬಂಧಿಸಿದ್ದು. ಅದು ಕೂಡ ಕಳೆದ ಸೆಪ್ಟಂಬರ ತಿಂಗಳಲ್ಲಿ ವಿಧಾನ ಸಭೆಯಲ್ಲಿ ಮಂಜೂರಾದದ್ದು.

ಈ ಮಸೂದೆಯನ್ನು ತಯಾರಿಸುವಾಗ, ಪೂರ್ತಿಗೊಳಿಸಿದ ನಂತರ ಸೆಲೆಕ್ಟ್ ಕಮಿಟಿಯ ಮುಂದೆ ಇದ್ದಾಗ,—ಹೀಗೆ ಪ್ರತಿಯೊಂದು ಘಟ್ಟದಲ್ಲೂ ಕೇಂದ್ರದೊಡನೆ ವಿಚಾರ ವಿನಿಮಯ ನಡೆಸಲಾಗಿದೆ. ಕೇಂದ್ರ ಸಲಹೆ ಸೂಚನೆಗಳನ್ನೆಲ್ಲ ಅದರಲ್ಲಿ ಒಳಪಡಿಸಲಾಗಿದೆ. ಆದರೂ ಕಾನೂನಿಗೆ ಅಧ್ಯಕ್ಷರ ಅನುಮತಿ ಇನ್ನೂ ದೊರೆತಿಲ್ಲ.

ಕೇಂದ್ರ ಸರಕಾರವು ಈ ಕಾನೂನುಗಳನ್ನು ಇನ್ನೂ ಪರಿಶೋಧಿಸುತ್ತಿದೆ, ಯೋಚನೆ ಮಾಡುತ್ತಿದೆಎಂದೆಲ್ಲ ಹೇಳುತ್ತೇನೆ. ಈ ಕಾನೂನುಗಳು ಕೂಡಲೆ ಜಾರಿಗೆ ಬರಬೇಕೆಂದು ಕೇರಳದ ಜನತೆ ಹಾರೈಸುತ್ತದೆ. ಜನಹಿತಕ್ಕೆ ಅಗತ್ಯವಿರುವ ಕಾನೂನುಗಳನ್ನು ಜಾರಿಗೊಳಿಸುವ ಕೇರಳ ಸರಕಾರದ ಕೈ ತಡೆಯುವ ಕೇಂದ್ರದ ಕ್ರಮ ಖಂಡನೀಯವಿದೆ. ಕೇರಳದ ಕಾನೂನುಗಳಿಗೆ ಇನ್ನಾದರೂ [illegible] ಬೇಗನೆ ಅಧ್ಯಕ್ಷರ ಅನುಮತಿ ದೊರಕಲಿ.

# ಮಂಗಳೂರು ಪತ್ರ

...ೂರ ಮಂತ್ರಿಗಳ ಮುಂದೆ ಮುತ
...ರ್ದರ್ಶನ ನಡೆಸುವ ನಿರ್ಧಾರ

...ಕ. ಜಿಲ್ಲಾ ಟ್ರೇಡ್ ಯೂನಿಯ
...ನ್ಸಿಲಿನ ಕಾರ್ಯಕಾರಿ ಸಮಿತಿಯ
...ು ಇತ್ತೀಚೆಗೆ ಮಂಗಳೂರಿನಲ್ಲಿ
...ಎ. ಶಾಂತಾರಾಮ ಪೈ ಇವರ ಅಧ್ಯ
...ುಲ್ಲಿ ಸೇರಿತು.

...ಲ್ಲೆಯ ಹಲವು ಕೈಗಾರಿಕೆಗಳಲ್ಲಿ
...ನ ಕೈಗಾರಿಕಾ ವಿವಾದಗಳನ್ನು ಇಂ
...ಯಲ್ ಟ್ರಿಬ್ಯುನಲ್‌ಗೆ ಒಪ್ಪಿಸುವ
...ಸುವನ್ನು—ಅದು ಕೂಡಾ ಜಿಲ್ಲೆಯ
...ೂರರ ಸಂಘಟಿತ ಚಳವಳದ ಪೆಣಾ
...ಾಗಿ—ಮೈಸೂರು ಸರಕಾರದ ಮ
...ರ ಮಂತ್ರಿಗಳು ಕೊಟ್ಟು ತಿಂಗಳು
...ರು ಕಳೆದರೂ ಆ ಕುರಿತು ಸರಕಾರ
...ಾಮಕಾರಿಯಾದ ಹೆಜ್ಜೆ ಇಡದ್ದನ್ನು
...ಭೆಯು ಮನಗಂಡು, ಜಿಲ್ಲೆಯ ಎಲ್ಲ
...ಡ್ ಯೂನಿಯನ್‌ಗಳೂ ತಮ್ಮ ಕೇಳಿ
...ನ್ನು ಪಡೆಯಲು ಪ್ರತ್ಯಕ್ಷ ಹೋರಾ
... ಸಿದ್ಧತೆಗಳನ್ನು ನಡೆಸಬೇಕೆಂದೂ,
...ತ್ರಿ ಮಜೂರ ಮಂತ್ರಿ ಶ್ರೀ ಬಿ. ವೈಕುಂಠ
...ಗರು ಮಂಗಳೂರಿಗೆ ಬಂದಾಗ ಅವರ
...ುಂದೆ ಸಂಘಟಿತ ಮುತಪ್ರದರ್ಶನ ನಡೆಸ
...ೆಂದೂ ತೀರ್ಮಾನಿಸಿದೆ.

...ಮೈಸೂರು ಸರಕಾರದ ದ. ಕ ಜಿಲ್ಲೆಗೆ
...ಮಿಸುವ ಲೇಬರ್ ಕೋರ್ಟಿನವರು
...ಾದ...ಳಲ್ಲಿ ಮಜೂರರಿಗೆ ಹೇಳಲಿಕ್ಕೆ
...ವುದನ್ನು ಹೇಳಲು ಅವಕಾಶ ಕೊಡದಿ
...ದ್ದನ್ನು ಸಭೆಯು ಖಂಡಿಸಿ, ಲೇಬರ್
...ೋರ್ಟಿನ ಈ ನೀತಿ ಕೈಗಾರಿಕಾ ವಿವಾದ
... ...ತಿರಿಕ್ತವಾಗಿದೆ ಎಂದು ಅಭಿ
... ... ಈ ಗತಿಯನ್ನು ಬದಲಾ
...ಬೇಕೆಂದು ಒತ್ತಾಯಪಡಿಸಿದೆ.

...ಮೈಸೂರು ಸರಕಾರದ ಲೇಬರ್ ಖಾತೆ
... ...ದೃಷ್ಟಿ ಪೂರ್ಣವಾದ ಸಕ್ರಿಯಾ
... ...ಲಹರಣದ ಧೋರಣೆಯನ್ನು
...ಂದ್ರ ಸರಕಾರದ ಗಮನಕ್ಕೆ ತರಬಯಸಿ
... ಕೆ.ಟಿ.ಯು.ಸಿ. ಯಿಂದ ಮನವಿ
...ಂದನ್ನು ಅರ್ಪಿಸಬೇಕೆಂದೂ ಈ ಸಭೆ
...ರ್ಮಾನಿಸಿದೆ.

...ಎರ್ನಾಕುಳಂನಲ್ಲಿ ಸೇರಲಿರುವ ಎ.
... ಟಿ. ಯು. ಸಿ. ಸಮ್ಮೇಳನಕ್ಕೆ ಎಲ್ಲ
...ೂನಿಯನ್‌ಗಳೂ ಪ್ರತಿನಿಧಿಗಳನ್ನು ಕ
...ಹಿಸಬೇಕೆಂದು ಈ ಸಭೆ ಕೇಳಿಕೊಂಡಿದೆ
...ಲ್ಲದೆ, ಮುನಿಸಿಪಾಲಿಟಿ ಪ್ರದೇಶದೊಳಗೆ
...ರ್ವಜನಿಕ ಸಭೆಗಳನ್ನು ಜರಗಿಸಲು
...ಸೆನ್ಸ್ ಪಡೆಯಬೇಕಾದರೆ ಅದಕ್ಕೆ ಈಗ
...ಾರಿಯಲ್ಲಿ ಹಲವು ಉಪದ್ರಕಾರಿ ಕ್ರಮಗ
...ಳನ್ನೂ, ಲೈಸೆನ್ಸ್ ಫೀಸ್ ಹೆಚ್ಚಿಸಿದ್ದನ್ನೂ
... ಸಭೆ ಮನಗಂಡು ಈ ವಿಷಯದಲ್ಲಿ
...ಾಡಲಿನಂತೆಯೇ ಯಾವ ತೊಡಕೂ
...ಲ್ಲದೆ ಶೀಘ್ರವಾಗಿ ಲೈಸೆನ್ಸ್ ಸಿಗುವಂತೆ
...ಾಡಬೇಕೆಂದು ಜಿಲ್ಲಾ ಪೋಲೀಸಾಧಿಕಾರಿ
...ಲೊಡನೆ ಈ ಸಭೆ ಕೇಳಿಕೊಂಡಿದೆ.

...ಸಭಾಂತ್ಯದಲ್ಲಿ ಕಾರ್ಯದರ್ಶಿ ಶ್ರೀ ಕೆ.
... ...ಶೆಟ್ಟರು ಯುಸ್. ಕೆ. ಟಿ. ಯು.
...ಯು ವರದಿಯನ್ನು ಸಭೆಯ ಮುಂದಿ
...ಟ್ಟರು.

**ನಗರಸಭೆಯ ನೀತಿಗೆ ಪ್ರತಿಷೇಧ**

...ಮಂಗಳೂರು ನಗರ ಸಭೆಯು ಆಡಳಿತೆ ಯ ಪಕ್ಷವಾದ ಕಾಂಗ್ರೆಸು, ನಗರಾಡಳಿತೆಯಲ್ಲಿ ತೋರಿಸುವ ಪಕ್ಷಪಾತ, ಆಡಳಿತೆಯ ಕ್ರಮವನ್ನು ಸಿಥಿಲಗೊಳಿಸುವಿಕೆ, ಕಾಂಗ್ರೆಸ್ ಪಕ್ಷದ ಸ್ವೇಚ್ಛಾವರ್ತನೆ ಇವನ್ನು ಪ್ರತಿಷೇಧಿಸಲು ಕಮ್ಯೂನಿಸ್ಟ್ ಪಾರ್ಟಿಯ ಮಂಗಳೂರು ನಗರ ಸಮಿತಿ ಕೊಟ್ಟ ಕರೆಯಂತೆ, ನಗರದ ನಾನಾ ಕಡೆಗಳಲ್ಲಿ ಕಳೆದ ಎರಡು ವಾರಗಳಿಂದ ಸಾರ್ವಜನಿಕ ಸಭೆಗಳು ಜರಗಿದುವು. ತಂತಮ್ಮ ವಾರ್ಡುಗಳ ಅವಶ್ಯಕತೆಗಳನ್ನು ಗಮನಿಸಿ ನಗರ ಸಭೆಗೆ ಮನವಿಯನ್ನರ್ಪಿಸಲು ತೀರ್ಮಾನಿಸಿದುವು.

ಅತ್ತಾವರ, ಬಾಬಗುಡ್ಡೆ, ಮುಳಿಹಿತ್ಲು, ಡೇರಿಬೈಲ್, ಬೋಳೂರು, ಉರ್ವ ಮಾರಿಗುಡಿ ಬಳಿ, ಜಪ್ಪು ಭಾರತ ಮೈದಾನ್, ಕಂಕನಾಡಿ, ಮಹಾಕಾಳಿಪಡ್ಪು, ಬೋಳೂರು, ಕುದ್ರೋಳಿ ಹೀಗೆ ಹಲವಾರು ಕಡೆಗಳಲ್ಲಿ ಸಭೆಗಳು ಜರಗಿ ಕಮ್ಯೂನಿಸ್ಟ್ ಪಾರ್ಟಿಯ ಕೌನ್ಸಿಲರುಗಳು ಈ ಸಭೆಗಳಲ್ಲಿ ಭಾಷಣವಿತ್ತರು.

ತಾ 8ರಂದು ಮಂಗಳೂರು ಕೇಂದ್ರ ಮೈದಾನದಲ್ಲಿ ಭಾರಿ ಸಭೆಯೊಂದು ಜರಗಿ ನಗರ ಸಭೆಯ ನೀತಿಯನ್ನು ಖಂಡಿಸಲಾಯಿತು.

ಈ ಸಭೆಯ ಅಧ್ಯಕ್ಷತೆಯನ್ನು ಶ್ರೀ ಎ. ಕೃಷ್ಣಶೆಟ್ಟರು ವಹಿಸಿದ್ದರು. ಶ್ರೀಗಳಾದ ಎ. ಶಾಂತರಾಮ ಪೈ, ಕೆ. ಮೋನಪ್ಪ ಶೆಟ್ಟಿ ಮೊದಲಾದವರು ನಗರ ಸಭೆಯ ಕಾಂಗ್ರೆಸ್ ಪಕ್ಷದ ಸ್ವೇಚ್ಛಾಧಿಕಾರಿ ವರ್ತನೆಗಳನ್ನು ಉದಾಹರಣೆ ಸಹಿತ ವಿವರಿಸಿದರು.

ಸಭಾಂತ್ಯದಲ್ಲಿ ಶ್ರೀ ಬಿ. ಲಿಂಗಪ್ಪ ಸುವರ್ಣರು ಧನ್ಯವಾದಗಳನ್ನಿತ್ತರು.

**ಜಿಲ್ಲಾ ಬೋರ್ಡಿನ ಠರಾವು**

ಇತ್ತೀಚೆಗೆ ಸೇರಿದ ದ. ಕ. ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯಲ್ಲಿ ಕಾಸರಗೋಡು ತಾಲ್ಲೂಕಿನ ಕನ್ನಡ ಭಾಗಗಳಾದ ಕುಂಬಳೆ ಮತ್ತು ಮಂಜೇಶ್ವರ ಫಿರ್ಕೆಗಳನ್ನು ಕರ್ನಾಟಕಕ್ಕೆ ಸೇರಿಸಬೇಕೆಂದು, ವಿವಾದಾಸ್ಪದವಾದ ಕಾಸರಗೋಡು ಫಿರ್ಕಾದ ಪ್ರಶ್ನೆಯನ್ನು ಮಧ್ಯಸ್ತಿಕೆಗೆ ಒಪ್ಪಿಸಬೇಕೆಂದೂ ಮೈಸೂರು ಕೇರಳ ಮತ್ತು ಕೇಂದ್ರ ಸರಕಾರಗಳನ್ನು ಕೇಳಿಕೊಳ್ಳುವ ಠರಾವೊಂದು ಸರ್ವಾನುಮತದಿಂದ ಮಂಜೂರಾಯಿತು.

ಈ ಠರಾವನ್ನು ಕಾಂಗ್ರೆಸಿನ ಶ್ರೀ ಎ. ಭೀಮಭಟ್ಟರು ತಂದಿದ್ದು ಕಮ್ಯೂನಿಸ್ಟ್ ಪಾರ್ಟಿಯ ಎ. ಕೃಷ್ಣ ಶೆಟ್ಟರು ಅನುಮೋದಿಸಿದ್ದರು.

ಇದೇ ರೀತಿಯ ಠರಾವೊಂದನ್ನು ಕೆಲ ಸಮಯದ ಹಿಂದೆ, ಕಮ್ಯೂನಿಸ್ಟ್ ಬಹುಮತವುಳ್ಳ ಮಲಬಾರ್ ಜಿಲ್ಲಾ ಬೋರ್ಡು ಕೂಡಾ ಸ್ವೀಕರಿಸಿತ್ತು.

ದ. ಕ. ಜಿಲ್ಲಾ ಬೋರ್ಡಿನಲ್ಲಿ ಕಾಸರಗೋಡು ಪ್ರಶ್ನೆಯ ವಿಷಯದಲ್ಲಿ ಈ ಹಿಂದೆ ಒಂದು ಠರಾವು ಬಂದಿತ್ತು. ಅದರಲ್ಲಿ ಚಂದ್ರಗಿರಿ ಹೊಳೆಯ ಉತ್ತರ ಭಾಗವನ್ನೆಲ್ಲ ಮೈಸೂರಿಗೆ ಸೇರಿಸಬೇಕೆಂದೂ ಹೇಳಲಾಗಿತ್ತು. ಆಗ ಆ ಠರಾವಿಗೆ ಕಾಸರಗೋಡು ತಾಲ್ಲೂಕಿನ ಮಲೆಯಾಳಿ ಪ್ರದೇಶಗಳಿಂದ ಆರಿಸಿ ಬಂದಿದ್ದ ಕಮ್ಯೂನಿಸ್ಟ್ ಸದಸ್ಯರು ಮತ್ತು ಕಮ್ಯೂನಿಸ್ಟ್ ಬೆಂಬಲಿತ ಸದಸ್ಯರು ಅಸಮಾಧಾನ ಸೂಚಿಸಿ ಕಾಸರಗೋಡು ತಾಲ್ಲೂಕಿನ ಕನ್ನಡ ಭಾಗಗಳನ್ನು ಮೈಸೂರಿಗೆ ಸೇರಿಸಬೇಕೆಂಬ ತಿದ್ದುಪಡಿ ತಂದಿದ್ದರು. ಆದು ಅಂದು ಕಾಂಗ್ರೆಸಿನಿಂದ ತಿರಸ್ಕೃತವಾಗಿತ್ತು.

ಆದರೆ ಅಂದು ಕಮ್ಯೂನಿಸ್ಟ್ ಸದಸ್ಯರು ತಂದಿದ್ದ ತಿದ್ದುಪಡಿಯನ್ನೇ ಇಂದು ಕಾಂಗ್ರೆಸಿಗರು ಠರಾವಿನ ರೂಪದಲ್ಲಿ ಸ್ವೀಕರಿಸಿದರು.

**ಬ್ರಾಂಚ್‌ಗಳನ್ನು ಮುಚ್ಚುವ ನೋಟೀಸು ಹಿಂದೆಗೆಯಲಾಯಿತು.**

ಪಾಣೆಮಂಗಳೂರಿನಲ್ಲಿರುವ, ಮಂಗಳೂರು ಗಣೇಶ ಬೀಡಿ ಕಾರ್ಖಾನೆಯ 32 ಬ್ರಾಂಚುಗಳನ್ನು ಮುಚ್ಚುವುದಾಗಿ ಮ್ಹಾಲಕರು ಎರಡು ತಿಂಗಳ ಹಿಂದೆ ನೋಟೀಸು ಹಾಕಿದ್ದರು. ಈ ನೋಟೀಸನ್ನು ಹಿಂದೆಗೆಯ ಬೇಕೆಂದೂ, ಬ್ರಾಂಚ್‌ಗಳನ್ನು ಮುಚ್ಚಬಾರದೆಂದೂ, ಈ ಬ್ರಾಂಚ್‌ಗಳ ಮಜೂರರು ಸಂಘಟಿತ ಚಳುವಳಿಯನ್ನು ನಡೆಸುತ್ತಾ ಬಂದಿದ್ದಾರೆ. ಮೈಸೂರಿನಲ್ಲಿರುವ ಕಂಪೆನಿಯ ಮ್ಹಾಲಕರಲ್ಲಿಗೆ ಶಿಷ್ಟ ಮಂಡಲ ಹೋಗಿ ಮನವಿ ಅರ್ಪಿಸಿದರು.

ಇದೀಗ ಮ್ಹಾಲಕರು ತಮ್ಮ ಶಾಖೆಗಳನ್ನು ಮುಚ್ಚುವ ನೋಟೀಸನ್ನು ಹಿಂದೆಗೆದಿದ್ದಾರೆ.

ಆದರೆ ಒಂದು ಬ್ರಾಂಚು ಮಾತ್ರ ಮುಚ್ಚಲ್ಪಟ್ಟಿದೆಯೆಂದೂ, ಕೆಲವು ಬ್ರಾಂಚ್‌ಗಳಲ್ಲಿ ಕಡಿಮೆ ಕೆಲಸ ಕೊಡಲಾಗುತ್ತಿದೆಯೆಂದೂ ದೂರು ಬಂದಿದೆ. ಮ್ಹಾಲಕರು ಈ ವಿಷಯದಲ್ಲಿ ಮಜೂರ ವಿರೋಧಿ ನೀತಿಯನ್ನು ಅನುಸರಿಸದೆ ಬ್ರಾಂಚನ್ನು ತೆರೆಯಬೇಕೆಂದೂ ಹಿಂದಿನಂತೆಯೇ ಕೆಲಸ ಕೊಡಬೇಕೆಂದೂ ಮಜೂರರು ಮ್ಹಾಲಕರನ್ನು ಒತ್ತಾಯಿಸುತ್ತಿದ್ದಾರೆ.

**ಪ್ರಜಾ ಸೋಶಿಯಲಿಸ್ಟರ ಮನೆ ಮುರುಕ ನೀತಿ !**

ಮಂಗಳೂರಿನಲ್ಲೊಂದು ಪ್ರಜಾಸೋಶಿಯಲಿಸ್ಟ್ ಪಕ್ಷದ ಶಾಖೆಯಿದೆ. ಸುಮಾರು ಒಂದು ವರುಷಗಳಿಂದ ಅಜ್ಞಾತವಾಸದಲ್ಲಿದ್ದ ಈ ಪಾರ್ಟಿ ಇದೀಗ ಒಮ್ಮಿಂದೊಮ್ಮೆಗೆ ನಿದ್ರೆಯಿಂದ ಎಚ್ಚತ್ತಿದೆ. ಕಣ್ಣುಬಿಟ್ಟು ನೋಡುವಾಗ ಲೋಕವೇ ಬದಲಾಗಿದೆ. "ಸ್ಪುಟ್ನಿಕ್" ಯುಗ ಆರಂಭವಾಗಿದೆ. ಹತ್ತಿರದ ಕೇರಳ "ಕೆಂಪು" ಆಗಿದೆ. ಸರಿ– ತಾ 1ರಂದು ಈ ನಿದ್ರೆಗಣ್ಣಿನಲ್ಲಿ ಒಂದು ಸಭೆ ಜರಗಿಸಿದರು–ಕೇಂದ್ರ ಮೈದಾನಿನಲ್ಲಿ–ವಿಷಯ "ಕಟ್ಟಂಪಳ್ಳಿ ದಿನಾಚರಣೆ". "ಕಟ್ಟಂಪಳ್ಳಿಯ ಸತ್ಯಾಗ್ರಹಿಗಳನ್ನು ಕೇರಳ ಸರಕಾರ ಹಿಂಸಾಚಾರ ಮಾಡಿದ್ದನ್ನು ಖಂಡಿಸುವುದು" ಒಂದೂವರೆ ವರುಷದ ನಂತರ ಇದೀಗ ಪ್ರ. ಸೋ. ಪಾರ್ಟಿಯ ಪ್ರಥಮ ದೇಖಾವೆ.

ಈ ಸಭೆಯಲ್ಲಿ ಹಲವು ಭಾಷಣಕರ್ತರು—ಸಭಿಕರ ಸಂಖ್ಯೆಗಿಂತ ಭಾಷಣಕರ್ತರ ಸಂಖ್ಯೆ ಹೆಚ್ಚಿತ್ತು—! ಅಸಹ್ಯವಾದ ಮತ್ತು ಅಸಭ್ಯವಾದ ರೀತಿಯ ಭಾಷಣ ಮಾಡಿ, ತಮ್ಮ ನಿದ್ದೆಗಣ್ಣನ್ನು ಉಜ್ಜಿಕೊಂಡರು.

"ಕಟ್ಟಂಪಳ್ಳಿ"ಯ ಆಕ್ರಮಗಾರರ ವಿಷಯದಲ್ಲಿ ಅತ್ಯಂತ ಶಾಂತತೆಯಿಂದಿದ್ದ ಕೇರಳ ಸರಕಾರವನ್ನು ಖಂಡಿಸಲು ಸಭೆ ಕರೆದ ಈ ಪ್ರಜಾ ಸೋಶಿಯಲಿಸ್ಟರು ದೆಹಲಿಯಲ್ಲಿ ಹರಿಜನ ಭಂಗಿಗಳ ಮೇಲೆ ಗೋಳಿಬಾರು ನಡೆಸಿದಾಗ, ರಾಮನಾಥಪುರಂನಲ್ಲಿ ಹತ್ಯಾಕಾಂಡ ನಡೆದಾಗ, ಎಲ್ಲಿದ್ದರು? ಜಿಲ್ಲೆಯಲ್ಲೆ ಆಹಾರ ಬೆಲೆ ವಿಪರೀತವಾಗಿ ಜನ ಹಾಹಾಕಾರ ನಡೆಸಿದಾಗ ಇದಕ್ಕೆ ಕಾರಣವಾದ ಕಾಂಗ್ರೆಸ್ ಸರಕಾರದ ನೀತಿಗಳ ಬಗೆಗೆ ಇವರ ಜನಪ್ರೇಮ ಯಾಕೆ ಕೆರಳಲಿಲ್ಲ? ಎಂಬುದೇ ಜನರು ಹಾಕುತ್ತಿರುವ ಸವಾಲು.

ಆದರೆ ಇನ್ನೂ ಒಂದು ಸ್ವಾರಸ್ಯವೆಂದರೆ ಜನಬೆಂಬಲವಿಲ್ಲದೆ ಬಾಡಿಗೆ ಕೊಟ್ಟ ಜನ ತರಿಸಿ ಸತ್ಯಾಗ್ರಹ ನಡೆಸುತ್ತಿದ್ದ "ಕಟ್ಟಂಪಳ್ಳಿ ಹೋರಾಟ"ವನ್ನು ಈ ಸಭೆ ನಡೆದ ಮರುದಿನವೇ ಹಿಂದೆಗೆಯಲಾಗಿದೆ.

ಈ ಸತ್ಯಾಗ್ರಹವನ್ನು ಈ ಮೊದಲೇ ಹಿಂದೆಗೆಯುವ ಅಭಿಪ್ರಾಯವಿತ್ತೆಂದೂ, ಪ್ರ. ಸೋ. ಪಾರ್ಟಿಯ ಕಾರ್ಯಕಾರಿ ಸಮಿತಿ ತಾ 1ರಂದು ''ಕಟ್ಟಂಪಳ್ಳಿ ದಿನ" ಆಚರಿಸಲು ಕರೆಕೊಟ್ಟ ನಿಮಿತ್ತ ಆ ದಿನಾಚರಣೆಯ ತನಕ ಈ "ಹೋರಾಟ" ವನ್ನು ಮುಂದರಿಸಿದ್ದೆಂದೂ ತಿಳಿದು ಬಂದಿದೆ.

# ಕಮ್ಯೂನಿಸ್ಟ್ ಪಾರ್ಟಿಯ ಪ್ರಾಂತ ಸಮ್ಮೇಲನಕ್ಕೆ ಸಿದ್ಧತೆ

ಮುಂದಿನ ಜನವರಿ ತಾ 1ರಿಂದ 3ರ ತನಕ ಮಂಗಳೂರಿನಲ್ಲಿ ಜರಗಲಿರುವ ಕಮ್ಯೂನಿಸ್ಟ್ ಪಾರ್ಟಿಯ ಕರ್ನಾಟಕ ಪ್ರಾಂತ ಸಮ್ಮೇಳನವನ್ನು ಅತ್ಯಂತ ಜಯಪ್ರದಗೊಳಿಸಲು ಬೇಕಾಗಿ ಕಳೆದ ತಾ. 9 ರಂದು ಸೇರಿದ ಕಮ್ಯೂನಿಸ್ಟ್ ಪಾರ್ಟಿಯ ದ. ಕ. ಜಿಲ್ಲಾ ಸಮಿತಿ ನಿರ್ಧರಿಸಿ ಆ ಬಗ್ಗೆ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಶ್ರೀ ಎ. ಕೃಷ್ಣಶೆಟ್ಟರು ಕನ್ವೀನರರಾಗಿರುವ ಸಿದ್ಧತಾ ಸಮಿತಿಯೊಂದನ್ನು ರಚಿಸಿದೆ. ಮತ್ತು ತಾ 3ರ ಬಹಿರಂಗ ಅಧಿವೇಶನದ ತಯಾರಿಗೆ, ಸ್ವಯಂಸೇವಕರ ಏರ್ಪಾಡಿಗೆ ಊಟ ಉಪಚಾರಗಳಿಗೆ, ಹಣಕಾಸಿನ ಸಂಗ್ರಹಕ್ಕೆ ಉಪಸಮಿತಿಗಳನ್ನೂ ರಚಿಸಿದೆ.

ಪ್ರಾಂತ ಸಮ್ಮೇಳನ ದ. ಕನ್ನಡ ಜಿಲ್ಲೆಯಲ್ಲಿ ಜರಗುವುದು ಇದು ಎರಡನೆಯ ಬಾರಿ. ಹಿಂದೆ 1951ರಲ್ಲಿ ಒಮ್ಮೆ ಜರಗಿತ್ತು.

ತಾ 3ರ ಬಹಿರಂಗ ಅಧಿವೇಶನವನ್ನು ಅತ್ಯಂತ ಯಶಸ್ವಿಗೊಳಿಸಲು ಬೇಕಾದ ಸನ್ನಾಹಗಳನ್ನು ಮಾಡಲಾಗುತ್ತಿದೆ. ಬಹಿರಂಗ ಅಧಿವೇಶನಕ್ಕೆ ಕೇರಳದ ಮುಖ್ಯಮಂತ್ರಿ ಕಾ॥ ಇ. ಯಂ. ಯಸ್. ನಂಬೂದಿರಿಪಾಡ್ ಇವರು ಆಗಮಿಸುವ ನಿರೀಕ್ಷೆ ಇದೆ.

## ಬರ್ನ್‌ಪುರದಲ್ಲಿ ೧೦,೦೦೦ ಕಾರ್ಮಿಕರ ಮುಷ್ಕರ

ಬರ್ನ್‌ಪುರದ ಇಂಡಿಯನ್ ಐರನ್ ಆಂಡ್ ಸ್ಟೀಲ್ ಕಂಪೆನಿಯ ಕಂಟ್ರಾಕ್ಟರುಗಳ ಕೈ ಕೆಳಗೆ ಕೆಲಸ ಮಾಡುತ್ತಿರುವ ಸುಮಾರು 10 ಸಾವಿರ ಜನ ಕೆಲಸಗಾರರು ಎರಡನೆಯ ದಿನವಾದ ತಾರೀಖು 11 ರಂದು ಮುಷ್ಕರವನ್ನಾಚರಿಸಿದರು.

## ನೆಹರೂ ... ಅಶುದ್ಧ ...

ಆರೋಗ್ಯಕ್ಕೆ ಹಸುವಿನ ... ಕತೆ ಇಲ್ಲ ಎಂದು ಪಂಡಿತ ... ತ್ತಾರೆ.

ಈ ಮಾತು ಹನ್ನೆರ... ನಾವೂ ಒಪ್ಪುತ್ತೇವೆ. ಆದ... ಲಿನ ಬದಲು ಆರೋಗ್ಯಕ... ದೇಶೀ ಫಲಗಳು, ... ದೊರೆತರೆ ನಾವೂ ನೆ... ಹದಿನಾರಾಣೆ ಸತ್ಯವೆಂದು...

ನಾವೂ ಟಂಡನ್‌ರಂ... ಯುವುದನ್ನೇ ಬಿಟ್ಟು ... ಕರುವಿನ ಆಹಾರಾಂಶ ... ಪಶುಗಳ ಹಾಲು ಸೇ... ಮನುಷ್ಯನಲ್ಲೂ ಪಶುತ್ವ ... ತಾದವನ್ನು ನಾವು ಒ...

ಆದರೆ ಈಗೇನು ಮಾ... ಶಗಳಿಗೆ ಹೋಗಿ ಶುದ್ಧ ... ನಮಗೆ ಎಂದೂ ಅವಕಾ... "ಇಲ್ಲಿಯ (ದೇಶದ) ಹಾ... ತಿರುತ್ತದೆ, ದುರ್ಬಲ ಪ... ಹಾಲು, ಇದನ್ನು ಸರಿ... ಇಡಲಾಗುವುದಿಲ್ಲ" (ನೆ... ಈ ತರ್ಕಗಳನ್ನೇನೋ ... ವುದಿಲ್ಲ. ಆದರೆ ನೀರು ... ಹಾಲೂ ಕೂಡಾ ನಮಗೆ... ವಲ್ಲ! ನಮ್ಮ ದ್ರೋಣಾ... ತೂ ತಮ್ಮ ಅಶ್ವತ್ಥಾಮನ... ಕಲಸಿ ಹಾಲೆಂದು ಕುಡಿ...

ಇಂದು ಹಾಲಿನ ಆರೋ... ವನ್ನೆತ್ತಿ ವಾದವಿವಾದ ನ... ಪಾರ್ಲಿಮೆಂಟಿನ ಬಗ್ಗೆ ... ಪಾರ್ಲಿಮೆಂಟಿನ ಸದಸ್ಯ... ಹಾಲು ಮುಖ್ಯ ಆಹ... ಬಹುದು, ಸಾಮಾ... ಅದೊಂದು ದುರ್ಲಭ... ಸುಳ್ಳಲ್ಲ. ಇಂದಂತೂ ... ಯಲ್ಲೂ ಸಾಕಷ್ಟು ಹಾ... ಹಸುವಿನ ಕೆಚ್ಚಲಲ್ಲೂ ...

ಚೀನಾದ ಜನತೆ ಹಾ... ವುದರಿಂದಲೇ ಹೃಷ್ಟಪು... ನೆಹರೂ ಅಭಿಪ್ರಾಯ... ಗಂತೂ ಇದು ಗೊತ್ತಿಲ್ಲ... ಹೇಳುತ್ತಿರುವುದರಿಂದ ... ಬಹುದು. ಚೀನಾದ ಜನ... ದರೂ ಇರಲಿ, ನಮ್ಮ... ಅಕ್ಕಿ, ಗೋಧಿಗಳ ಜೊ... ಬೇಳೆಗಳ ಜೊತೆಗೆ ಸಿ... ಸಾಂಬಾರಿನ ಪುಡಿಯ... ಇನ್ನು ತುಪ್ಪದಲ್ಲಿ ಆದೆ... ಈ ಮಿಶ್ರಾಹಾರ ತಿನ್ನ... ಗಿರುವ ರೋಗವನ್ನೆದು... ತ್ತಿನ ಇನ್ನಾವ ದೇಶದಲ್ಲ...

ಹಾಲೇನು ಬಂತು ... ಯಲು ನೀರು ಕೂಡಾ... ತ್ತಿಲ್ಲ. ಮನೆಗಳಲ್ಲಿ ... ಇನ್ನು ಶುದ್ಧ ವಸ್ತು... ಹೇಗೆ ಮಾಡಲು ಸಾಧ್ಯ...

ನಮಗಂತೂ ಅಶುದ್ಧ ... ನೆಹ್ರೂಜಿಯ ಮಾತ... ಎಂದೂ ಹಾಲು ಸೇ... ಲಾರೆವು.

ಅನಾರೋಗ್ಯಕಾರಿ... ವಾಗಲಿ!

ಅಶುದ್ಧ ಹಾಲು ... ನಾವು ಬಿಡಲಾರ...

("ಹಿಂದೂಸ್ಥಾನ್...

# ಜೋಡಿ ಗ್ರಾಮಗಳ ರೈತರಿಗೆ ಹೊಲ ಸಿಗಲಿ

**ವಿಶೇಷ ಲೇಖನ**

ಮೈಸೂರು ಸರ್ಕಾರವು ತಾರೀಖು 2-10-1956ನೇ ದಿನ, ಪೂಜ್ಯ ಮಹಾತ್ಮ ಗಾಂಧಿಜಿಯವರ ಜನ್ಮದಿನದಂದು 1954ರ ಇನಾಂ ರದ್ದಿಯಾತಿ ಆಕ್ಟ್ ಪ್ರಕಾರ ಕೆಲವು ಇನಾಂ ಜೋಡಿ ಗ್ರಾಮಗಳನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ಈ ಸಮಯದಲ್ಲಿ ಆ ಹಳ್ಳಿಗಳಲ್ಲಿನ ಸಾವಿರಾರು ರೈತರು ತಮ್ಮ ಹಳ್ಳಿಗಳ ಆಡಳಿತವು ಇನ್ನು ಮುಂದೆ ಸರ್ಕಾರದವರ ನೇರ ನೇತೃತ್ವದಲ್ಲಿ ಮುಂದುವರಿಯುವುದರಿಂದ ರೈತರ ಜೀವನ ಅಭಿವೃದ್ಧಿಗೊಳ್ಳುವುದೆಂದು ಭಾವಿಸಿದ್ದರು. ಆದರೆ ಈ ಸದ್ಭಾವನೆಯು ಭ್ರಮೆಯೆಂದು ತೋರುವುದಾಗಿದೆ, ತಕ್ಷಣವೇ ಅವರು ತೊಂದರೆಗೊಳಗಾಗಿದ್ದಾರೆ. ಅವರು, ಅದೃಷ್ಟವೋ ದುರಾದೃಷ್ಟವೋ, ಜೋಡಿ ಇನಾಂ ಗ್ರಾಮಗಳಲ್ಲಿ ಹುಟ್ಟಿ ಬೆಳೆದಿದ್ದರ ತಪ್ಪಿಗಾಗಿ ಅವರು ಹೆಚ್ಚಿನ ಹೊರೆಯನ್ನು ಹೊರಬೇಕಾಗಿದೆ.

ಬರುವ ಕೆಲವೇ ದಿನಗಳಲ್ಲಿ ಕಂದಾಯದ ಇಪ್ಪತ್ತರಷ್ಟನ್ನು ಜವಿಾನ್ದಾರರಿಗೆ ಪರಿಹಾರ ಕೊಡಲು ರೈತರಿಂದ ವಸೂಲ್ಮಾಡಲು ಹೋಗುವರು. ಈ ವಸೂಲಿಗೆ ರೈತರ ವಿರೋಧವನ್ನು ಸರ್ಕಾರವು ಎದುರಿಸಬೇಕಾಗುವುದೆಂದರೆ ಅತಿಶಯೋಕ್ತಿಯಾಗಲಾರದು. ಯಾಕೆಂದರೆ ರೈತರು ಜೋಡಿ ಇನಾಂದಾರರಿಗೆ ಒಂದು ಸಾರಿ ಹಣ ತೆತ್ತಿದ್ದಾರೆ. ಈಗ ಮತ್ತೊಮ್ಮೆ ಕೊಡಬೇಕೆಂದರೆ ಅದು ದ್ವಿತೀಯಾವೃತ್ತಿಯಾಗುವುದು. ಬಲವಂತದ್ದಾಗುವುದು.

ಮೇಲೆ ಹೇಳಲ್ಪಟ್ಟ ಇನಾಂ ರದ್ದಿಯಾತಿ ಶಾಸನದನ್ವಯ ಕದೀಂ ರೈತರಾದವರು ಸರ್ಕಾರಕ್ಕೆ ಆಗಲಿ ಇತರರಿಗೇ ಆಗಲಿ ಯಾವ ಪರಿಹಾರವನ್ನು ಕೊಡದೆಯೇ ಖಾಸಗಿಯವರ ವಶದಲ್ಲಿರುವ ಎಲ್ಲಾ ಭೂಮಿಗಳಿಗೂ ದಾಖಲೆ ಹಿಡುವಳಿದಾರರೆಂದು ಮಾಡಲ್ಪಡಬೇಕು. ಈ ಶಾಸನದಂತೆ ಕದೀಂ ರೈತನೆಂದರೆ ಲ್ಯಾಂಡ್ ರೆವಿನ್ಯೂ ಕೋಡಿನ 84ನೇ ಸೆಕ್ಷನ್ನಿನಂತೆಯೇ ಎಂದು ವಿವರಣೆ ಇದೆ. ಸಾರ್ವಜನಿಕ ಅಭಿಪ್ರಾಯವೂ ಸಹ ಇದೇ ಇತ್ತು. ಅಲ್ಲದೆ ಅಂದು ಈ ಶಾಸನವು ಹೊಗಳಲ್ಪಟ್ಟ ನಾನಾ ಭಾಗಗಳಿಂದಲೂ ಮತ್ತು ಅಂದಿನ ಶಾಸನ ಸಭಾ ಸದಸ್ಯರಿಂದಲೂ ಮತ್ತು ಶಾಸನವನ್ನು ತಯಾರಿಸಿ ಮಂಡಿಸಿದ ಸರ್ಕಾರದ ಕಡೆಯಿಂದಲೂ ಮೇಲಿನ ಕದೀಂ ರೈತ ಎನ್ನುವುದರ ವಿವರಣೆಯನ್ನು ಬುದ್ಧಿವಂತಿಕೆಯ ತಿರುವಿನೊಳಗೆ ಸಿಕ್ಕಿಸುವರೆಂಬ ಭಾವನೆಯು ಕನಸೇ ಇರಲಿಲ್ಲವೆಂದು ನಾವು ಧೈರ್ಯವಾಗಿ ಹೇಳಬಯಸುತ್ತೇವೆ.

ಕದೀಂ ರೈತನೆಂದರೆ ಸರ್ವೆ ಸೆಟ್ಲ್‌ಮೆಂಟ್ ಕಾಲದಲ್ಲಿ ಕ್ರಮಬದ್ಧ ಅಧಿಕಾರಿಗಳಿಂದ ನಿಗದಿಯಾದ ಒಂದು ದರದಂತೆ ಕಂದಾಯವನ್ನು ಕೊಡುತ್ತಾ ಭೂಮಿಯ ಹಿಡುವಳಿಯನ್ನು ಮುಂದುವರಿಸಿಕೊಂಡು ಹೋಗುವ ಹಕ್ಕನ್ನು ಪಡೆದಿರತಕ್ಕವನೆಂದು ಸಾಮಾನ್ಯವಾಗಿಯೂ ಅರ್ಥವಿದೆ. ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 84 ನೇ ಸೆಕ್ಷನ್ನಿನ ಅರ್ಥವಾದರೂ ಇಷ್ಟೇ ಇದೆ.

ಅದರಲ್ಲೇ ಇನ್ನೂ ಮುಂದುವರಿದು 233 ನೇ ಸೆಕ್ಷನ್ ಪ್ರಕಾರ ಯಾವುದೇ ಇನಾಂಜೋಡಿ ಗ್ರಾಮಗಳಲ್ಲಿ ಸರ್ವೆ ಸೆಟ್ಲ್‌ಮೆಂಟ್ ದಾಖಲಾದಾಗಿನಿಂದ ಹಕ್ಕು ದಾಖಲಾದ ಭೂ ಹಿಡುವಳಿದಾರರೆಲ್ಲರಿಗೂ ಸರ್ಕಾರಿ ಗ್ರಾಮಗಳಲ್ಲಿರುವ ದಾಖಲಾದ ಭೂ ಹಿಡುವಳಿದಾರರಂತೆಯೇ ಸಮನಾದ ಅವಕಾಶ, ಹಕ್ಕುಗಳು ಕೊಟ್ಟಿರುತ್ತದೆ. ಇನ್ನೂ ಚೆನ್ನಾಗಿ, ಲ್ಯಾಂಡ್ ರವಿನ್ಯೂ ಕೋಡಿಗೆ 1939 ರಲ್ಲಾದ ತಿದ್ದುಪಡಿಯಂತೆ-ಈ ಸೆಕ್ಷನ್ನಿನಿಂದ ಒಂದು ಪ್ಯಾರಾವನ್ನು ತೆಗೆದಿದೆ. ಇದರಿಂದಲೂ ರೈತರ ಈ ಸ್ವಾಧೀನದ ಹಕ್ಕು ಮತ್ತಷ್ಟು ಸ್ಪಷ್ಟಪಡುತ್ತದೆ.

ಇದನ್ನೆಲ್ಲಾ ಒಟ್ಟೈಸಿಸಿ ಹೇಳುವುದಾದರೆ ಸರ್ವೆ ಸೆಟ್ಲ್‌ಮೆಂಟಾದ ಗ್ರಾಮಗಳ ಇಂಡೆಕ್ಸ್ ಆಫ್ ಲ್ಯಾಂಡ್ ರಿಜಿಸ್ಟರಿನಲ್ಲಿ ಯಾವ ರೈತರ ಹೆಸರು ಹಿಡುವಳಿದಾರನೆಂದು ದಾಖಲಾಗಿದೆಯೋ ಅವನು ಕದೀಂ ರೈತನಾಗುತ್ತಾನೆ. ಕಾರಣ ಅವನಿಗೆ ಎರಡು ಪ್ರಾಮುಖ್ಯವಾದ ಮತ್ತು ಅವನನ್ನೇ ಸಂಕೇತವಾಗಿ ಹೊಂದಿರುವ ಹಕ್ಕುಗಳು ಉಂಟಾಗುತ್ತವೆ. (1) ಸರ್ವೆ ಸೆಟ್ಲ್‌ಮೆಂಟ್ ಕಾಲದಲ್ಲಿ ಸೆಟ್ಲ್‌ಮೆಂಟ್ ಅಧಿಕಾರಿಯು ಗೊತ್ತುಮಾಡಿರುವ ಒಂದು ದರದಂತೆ ಕಂದಾಯವನ್ನು ಕಟ್ಟಿಕೊಂಡು ಆ ಭೂಮಿಯ ಹಿಡುವಳಿದಾರನೆಂದು ಮುಂದುವರಿಯುವ ಹಕ್ಕು (2) ಆ ಭೂಮಿಯ ಮೇಲಿನ ಮಾಲಿಕ ಹಕ್ಕು, ಅಂದರೆ ಅವನ ಇಷ್ಟ ಬಂದ ರೀತಿಯಲ್ಲಿ ಆ ಭೂಮಿಯನ್ನು ಪರಭಾರೆ ಮಾಡುವ ಸ್ವಯಂಸಿದ್ಧ ಹಕ್ಕು. ಈಗ ಇಂಡೆಕ್ಸ್ ಆಫ್ ಲ್ಯಾಂಡ್ಸ್ ರಿಜಿಸ್ಟರಿನಲ್ಲಿ ಅವನ ಹೆಸರನ್ನು ದಾಖಲುಗೊಳಿಸುವ ಹಕ್ಕನ್ನು ಅವನು ಹೊಂದಿರಬೇಕಾದರೆ ಅವನು ಜೋಡಿ ಅಥವಾ ಇನಾಂದಾರರಿಗೆ ಆ ಭೂಮಿಯ ಬೆಲೆಯನ್ನು ಹಿಂದಾಗಲೇ ಕೊಟ್ಟಿರಬೇಕು. ಇಲ್ಲವೇ ಅವನು, ಅಥವ ಇಂದಿಗೆ ಅವನ ವಂಶದವನು, ಗ್ರಾಮವು ಜೋಡಿ ಇನಾಂ ಆಗುವುದಕ್ಕೆ ಮುಂಚಿನಿಂದಲೇ ಆ ಭೂಮಿಯ ಹಿಡುವಳಿದಾರನಾಗಿದ್ದು ಮುಂದುವರಿದು ಬಂದಿರಬೇಕು. ಇವೆರಡೂ ಇಲ್ಲದಿದ್ದಲ್ಲಿ ಇಂಡೆಕ್ಸ್ ಆಫ್ ಲ್ಯಾಂಡ್ಸ್ ರಿಜಿಸ್ಟರಿನಲ್ಲಿ ಅವನ ಹೆಸರು ಹಿಡುವಳಿದಾರನೆಂದು ದಾಖಲಾಗುವ ಬಗ್ಗೆ ಅವಕಾಶ ಯಾವುದಿದೆ. ಅವನು ಇಂಡೆಕ್ಸ್ ಆಫ್ ಲ್ಯಾಂಡ್ಸ್ ರಿಜಿಸ್ಟರಿನಲ್ಲಿ ಹೆಸರು ಕಾಣದ ಕೇವಲ ಸಾಗುವಳಿದಾರ ರೈತನಾಗಿಯೇ ಇರುತ್ತಿದ್ದ. ಈ ಒಂದು ಸ್ಥಿತಿಗೆ ಏನು ಉತ್ತರವಿದೆ?

ಮೇಲಿನ ಸ್ಥಿತಿಯಂತೆ ಬಿಟ್ಟುಕೊಡುವುದಾದರೆ ಸರ್ವೆ ಸೆಟ್ಲ್‌ಮೆಂಟ್ ಆಗಿರುವ ಜೋಡಿ ಇನಾಂ ಗ್ರಾಮಗಳಲ್ಲಿ ಬಹುಮಂದಿ ರೈತರು ಯಾವುದೇ ತರಹೆಯ ಪರಿಹಾರವನ್ನು ಕೊಡಬೇಕಾಗಿಲ್ಲದವರಾದ ಕದೀಂ ರೈತರಾಗುತ್ತಾರೆ. ಆದರೆ ಇಲ್ಲೇ ಹಳಸು ಹಂಚಿಕೆ ಜೋಡಿ ಇನಾಂದಾರರುಗಳಿಗೆ ಗ್ರಾಮ ಅಥವಾ ಭೂಮಿಯ ಮೇಲೆ ಅವರು ಅನುಭವಿಸುತ್ತಿದ್ದ ಹಕ್ಕನ್ನು ಸರ್ಕಾರ ತೆಗೆದುಕೊಂಡಾಗ ಅಂಥಾ ಗ್ರಾಮಗಳ ಕದೀಂ ಭೂಮಿಗಳ ಕಂದಾಯದ ಇಪ್ಪತ್ತರಷ್ಟನ್ನು ಜೋಡಿ ಇನಾಂದಾರಿಗೆ ಪರಿಹಾರವಾಗಿ ಕೊಡುವುದಾಗಿ ಹೇಳಿ ಸರ್ಕಾರವು ತಾನೇ ಕಟ್ಟುಬಿದ್ದಿದೆ. ಇಲ್ಲಿ ಸರ್ಕಾರವೇ ಲಾಭವನ್ನು ಹೊಂದುವುದು. ಅಂದರೆ ಈವರೆವಿಗೆ ಭೂಕಂದಾಯ ಪಾಲು ಜೋಡಿ ಇನಾಂದಾರರಿಗೆ ಹೋಗುತ್ತಿದ್ದುದು ಸರ್ಕಾರಕ್ಕೆ ಬರುತ್ತದೆ. ಆದ್ದರಿಂದ ಇದುವರೆಗಾಗಲೇ ಇಂಡೆಕ್ಸ್ ಆಫ್ ಲ್ಯಾಂಡ್ಸ್ ರಿಜಿಸ್ಟರಿನಲ್ಲಿ ದಾಖಲೆ ಹೊಂದಿರುವ ಭೂಮಿಗಳ ಪರಿಹಾರವನ್ನು ಸರ್ಕಾರವೇ ಕೊಡುವುದು ಸಂಪೂರ್ಣ ನ್ಯಾಯವಾದದು. ರೈತ ಕೊಡಬೇಕಾದರೆ ಅದು ಅನ್ಯಾಯ.

ಅವರೆ ಈ ಪರಿಹಾರ ಕೊಡಬೇಕಾಗಿ ಬಂದುದೇ ಬಹುಶಃ ಸರ್ಕಾರಕ್ಕೆ ಯೋಚನೆಗೆ ಇಟ್ಟುಕೊಂಡು, ಇದಕ್ಕೆ ಏನಾದರೊಂದು ದಾರಿ ನೋಡಬೇಕೆಂದು ಮತ್ತು ಯಾರ ಸ್ಥಿತಿಯು ಇದರಿಂದ ಇಕ್ಕಟ್ಟಿಗೆ ಬರುತ್ತದೆಯೋ ಅಂಥಾರ ಮೇಲೆ ಅಂದರೆ ರೈತರ ಮೇಲೆ ಈ ಹೊರೆಯನ್ನು ತಳ್ಳುವ ಉದ್ದೇಶದಿಂದ, ನಿಧಾನವಾಗಿ ಯೋಚಿಸಿ, ಹಳೆಯ ಮೈಸೂರಿನ ಹೈಕೋರ್ಟಿನ ತೀರ್ಪುಗಳನ್ನೆಲ್ಲಾ ಮೆಲುಕು ಹಾಕಿ ಮಗುಚಿ ಯಾವುದೋ ಒಂದರಲ್ಲಿ 'ಕದೀಂ ರೈತ' ಎನ್ನುವುದಕ್ಕೆ 'ಗ್ರಾಮವು ಜೋಡಿ ಅಥವಾ ಇನಾಂ ಆಗುವುದಕ್ಕೆ ಮುಂಚಿತವಾಗಿದ್ದ ಹಿಡುವಳಿದಾರನೆಂದು ವಿವರಣೆ ಇರುವ' ಒಂದನ್ನು ಹುಡುಕಿ ಆಚೆ ಹಾಕಿದ್ದಾರೆ. ಈಗ ಯಾವ ರೈತನಾದರೂ ತಾನು ಲ್ಯಾಂಡ್ ರೆವಿನ್ಯೂ ಕೋಡ್ 84ನೇ ಸೆಕ್ಷನ್ ಪ್ರಕಾರ ಕದೀಂ ರೈತನೆಂದು ಹಕ್ಕು ಕೇಳುವುದಕ್ಕೆ ಹೋದರೆ ಮೇಲೆ ಹೇಳಿದ ಹೈಕೋರ್ಟ್ ತೀರ್ಪನ್ನು ಮುಂದೊಡ್ಡಿ ಇದಕ್ಕೆ ಸಾಕ್ಷ್ಯಗಳನ್ನು ಕೊಡು ಎನ್ನುತ್ತಾರೆ. ಸರ್ಕಾರದವರು ಇದು ಇನಾಂ ಜೋಡಿ ಗ್ರಾಮಗಳ ರೈತರ ಸುಲಿಗೆಗೆ ಸ್ವಚ್ಛತೆಯನ್ನೂ ನೀಡದ ಅತಿಯೇ ಹೊರತು ಇನ್ನೇನಲ್ಲ.

ಈ ಎಲ್ಲಾ ಅಸ್ತವ್ಯಸ್ತದ ಕರುಣಾಜನಕ ಮತ್ತು ಆಘಾತವೆಂದರೆ ಇಷ್ಟೆ. ಒಂದು ವೇಳೆ ಮೇಲಿನ ಹೈಕೋರ್ಟಿನ ತೀರ್ಪಿನಂತೆಯೇ ಅನೇಕ ರೈತರು ಕದೀಂ ರೈತರೇ ವಾಸ್ತವವಾಗಿದ್ದರೂ ಸಹ (ಯಾಕೆಂದರೆ ಈ ಗ್ರಾಮಗಳು ಜೋಡಿ ಅಥವಾ ಇನಾಂ ಆಗುವುದಕ್ಕೆ ಮುಂಚೆ ಅವೆಲ್ಲವೂ ಬೇಚರಾಕ್ ಗ್ರಾಮಗಳಾಗಿದ್ದ ಅಂದರೆ ಜನವಾಸ ವ್ಯವಸಾಯಿತವಲ್ಲದ ಗ್ರಾಮಗಳೇ ಆಗಿರಲಿಲ್ಲ. ಇದಕ್ಕೆ ಸಾಕ್ಷಿಯಾಗಿ ಅನೇಕ ಕುರುಹುಗಳು ಯಾವತ್ತೂ ಇವೆ) ಅದನ್ನು ಸಾಧಿಸಿ ಸಾಕ್ಷ್ಯ ಕೊಡುವುದು ದುಸ್ಸಾಧ್ಯ. ಯಾಕೆಂದರೆ ಸುಮಾರು ಇತ್ತೀಚಿನ ಕಾಲದಲ್ಲಿ ಇನಾಂ ಹಾಕಿರುವ ಗ್ರಾಮಗಳೇ ಸಿದ್ಧಂತಿಲ್ಲ. ಹೀಗಿರುವಾಗ ಗ್ರಾಮವು ಇನಾಂ ಆಗುವುದಕ್ಕೆ ಮುಂಚೆ ಸರ್ಕಾರಕ್ಕೆ ಸಂದಾಯಿಸಲ್ಪಟ್ಟ ಕಂದಾಯದ ದಾಖಲೆಗಳನ್ನು ಏನೂ ತಿಳಿಯದ ರೈತನು ಒದಗಿಸಬೇಕೆಂದು ಕೇಳುವುದು ಎಂತಹ ದುಸ್ಸಾಧ್ಯವಾದ ಕೆಲಸ ಎನ್ನುವುದನ್ನು ಯಾರಾದರೂ ಊಹಿಸಬಹುದು. ಕೋರ್ಟಿನ ಮುಂದೆ ಸಾಕ್ಷಿ ಹೇಳಲು ಇಷ್ಟು ಕಾಲದಿಂದಲೂ ಬದುಕಿರುವವರಾದರೂ ಎಲ್ಲಿ . . . . ದೇವರನ್ನು ಬೃಹಸ್ಪತಿಯರೇ ರಕ್ಷಿಸಬೇಕು.

ಇಂದು ಇಪ್ಪತ್ತೊಂದು ಅಧಿಕಾರಿ ಕಛೇರಿಗಳಿಂದ ಅಲಂಕೃತವಾದ ಸರ್ಕಾರವಿದ್ದೂ, ಕೇವಲ ಮೂರು ನಾಲ್ಕು ವರ್ಷಗಳ ಇತ್ತೀಚಿನ ದಾಖಲೆಗಳನ್ನು ಅವಶ್ಯಕ ಬಿದ್ದವರು ಪಡೆಯಲು ಪ್ರಯತ್ನ ಪಟ್ಟಿರುವವರಿಗೆ ಅಧಿಕಾರಿಗಳು ಹೇಗೆ ಒಂದು ಆಫೀಸಿನಿಂದ ಇನ್ನೊಂದು ಆಫೀಸಿಗೆ ಒಂದು ದಿನದಿಂದ ಇನ್ನೊಂದು ದಿನಕ್ಕೆ ಜನರನ್ನು ಓಡಾಡಿಸಿ ಕೊನೆಗೆ ಇಲ್ಲವೆಂದು ಹೇಳಿಸಿಕೊಂಡಿರುವ ಅನುಭವವು ಚೆನ್ನಾಗಿಯೇ ಇದೆ. ಕ್ರಮಬದ್ಧ ರೀತಿಯಲ್ಲಿ ಕೆಲಸ ಮಾಡುತ್ತಿರುವ ಹೊಸ ಹೊಸ ಮಾದರಿಯನ್ನು ಅನುಸರಿಸುತ್ತಿರುವ ಇಂದಿನ ಸರ್ಕಾರದಲ್ಲೇ ಈ ಪರಿಸ್ಥಿತಿ ಇರುವಾಗ ಆ ಮೂಢ ಬಡ ರೈತನು ಮೂರು ನಾಲ್ಕು ತಲೆಮಾರು 100—150 ವರ್ಷಗಳ ಹಿಂದಿನ ಕಂದಾಯದ ರಶೀತಿಯನ್ನು ಯಾರು ತಾನೆ ಕೇಗೆ ಒದಗಿಸಿಯಾರು. ಇವರಲ್ಲಿ ಇನ್ನೊಂದು ಪ್ರಶ್ನೆ ಸರ್ಕಾರದ ಹತ್ತಿರವಾದರೂ ಆ ಹಿಂದಿನ ರೆವಿನ್ಯೂ ರೈತಾಪಿ ದಾಖಲಾತಿಗಳವೆಯೇ? ಯಾರಾದರು ನಕಲು ಕೇಳಿದರೆ ಕೊಡುವರೆ? ಅಥವಾ ಯಾರಾದರು ಒಂದು ದಾಖಲೆಯನ್ನು ತಂದು ಒದಗಿಸಿದರೆ ಅದರ ಸತ್ಯಾಸತ್ಯತೆಯನ್ನು ಅಸಲಿನೊಂದಿಗೆ ಪರೀಕ್ಷಿಸುವರೇ? ಇವೆಲ್ಲವೂ ಹೀಗಿರುವಾಗ ಕದೀಂ ರೈತರಾಗುವವನು ಸಾಕ್ಷ್ಯವನೆಲ್ಲಿಂದ ಒದಗಿಸಿಯಾರು? ಯಾರು ಕದೀಂ ರೈತರೆನಿಸಿಯಾರು? ಅಂದಿನ ಹೈಕೋರ್ಟಿನ ತೀರ್ಮಾನವು ಯಾವ ಆಧಾರ ಅಪೇಕ್ಷಿಗಳಿಗೆ ಗಣ ಮಾಡಬೇಕಿದ್ದಿತೋ ಅಂದಿನ ತೀರ್ಪಿಗೆ ವಾಸ್ತವ ಪರಿಸ್ಥಿತಿ ಏನಿತ್ತೋ-ಅದನ್ನೆಲ್ಲಾ ಮರೆತುಬಿಟ್ಟು ಎಲ್ಲ ರೈತರನ್ನು ಕೇವಲ ಖಾಯಂ ರೈತರೆಂದು ಪರಿಗಣಿಸಿದರೆ ಅವರು ಕಂದಾಯದ ಇಪ್ಪತ್ತರಷ್ಟನ್ನು ತೆತ್ತ ತಾವು ಭೂಮಿಯ ದಾಖಲೆ ಹಿಡುವಳಿದಾರರಾಗುವಂತಾಗುತ್ತದೆ.

ಇದು ಜೋಡಿ ಇನಾಂ ಗ್ರಾಮಗಳ ರೈತರಿಗಾಗಿರುವ ಬಹಳ ದೊಡ್ಡ ತಪ್ಪು. ಇದರ ಅರಿವು ಅವರೆಲ್ಲರಿಗೂ ಪೂರ್ಣವಾಗಿ ಆಗಿಲ್ಲ. ಕೆಲವರಿಗೆ ಈ ಅನ್ಯಾಯದ ಅನುಭವವಾಗಿದ್ದರೂ ಅವರು ಅಸಹಾಯಕ ಸ್ಥಿತಿಯಲ್ಲಿದ್ದಾರೆ. ಕೆಲವರು ಅಲಕ್ಷ್ಯವಿದ್ದಲೂ ಇರಬಹುದು. ಆದರೆ ಅವರೇ ಹತ್ತು ವರ್ಷಗಳ ಕಾಲ ಕಂದಾಯದ ಮೂರರಷ್ಟನ್ನು ಸರ್ಕಾರಕ್ಕೆ ಕಟ್ಟಬೇಕಾಗಿ ಬಂದಾಗ ತಕ್ಷಣ ಎಚ್ಚೆತ್ತುಕೊಳ್ಳುತ್ತಾರೆ. ನಿರಾಪರಾಧಿಗಳಾಗಿ ಅವರು ಕೊಡಬೇಕಾಗಿ ಬರುವಾಗ, ತಾವು ಅನುಭವಿಸುತ್ತಿರುವುದಲ್ಲದೆ ಹೆಚ್ಚಿನ ಯಾವ ಹಕ್ಕು ಅವರಿಗೆ ದೊರಕದೇ ಇರುವಾಗ, ಅವರಿಗೇ ಈ ಅನ್ಯಾಯದ ತಿರೆಯ ಬಿಗಿತದ ಅನುಭವವಾಗುತ್ತದೆ.

ಸರ್ಕಾರವು ಈಗಲಾದರೂ ರೈತರಿಗಾಗಿರುವ ಈ ಮಹದನ್ಯಾಯವನ್ನು ಅರ್ಥಮಾಡಿಕೊಂಡು ಇನಾಂ ರದ್ದಿಯಾತಿ ಶಾಸನದಲ್ಲಿರುವ ನ್ಯೂನತೆಗಳನ್ನು ತಿದ್ದಿ ರೈತರಿಗೆ ಸಹಾಯಕರಾಗುವರೆಂದು ಆಶಿಸೋಣವೇ.

—ಕೆ. ವಿ. ಕೃಷ್ಣಸ್ವಾಮಿ

# 'ಘೋಷಣೆಯಲ್ಲಿ ಕಾಲ ಕಳೆಯುವವರು ಕಾಂಗ್ರೆಸಿಗರು, ಕಮ್ಯೂನಿಸ್ಟರಲ್ಲ'

ತಾ.1-12-57ನೇ ಭಾನುವಾರ ಸಂಜೆ 6 ಗಂಟೆಗೆ ಕರ್ನಾಟಕ ಸಂಘದ ಭವನದಲ್ಲಿ ಇಲ್ಲಿನ ಕಮ್ಯೂನಿಸ್ಟ್ ಪಕ್ಷದವರು ಶಿವಮೊಗ್ಗದ ವಕೀಲರಾದ ಶ್ರೀ ಬಿ. ಎಲ್. ಎ. ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯನ್ನು ಏರ್ಪಡಿಸಿದ್ದರು.

ಕಮ್ಯೂನಿಸ್ಟ್ ಕಾರ್ಯಕರ್ತರಾದ ಶ್ರೀ ವಿ. ಬಸವರಾಜುರವರು ಸ್ವಾಗತ ಭಾಷಣ ಮಾಡಿದರು. ಸಭೆಯಲ್ಲಿ ಮುಖ್ಯ ಅತಿಥಿಗಳಾದ ಕಾಮ್ರೇಡ್ ಬಿ. ವಿ. ಕಕ್ಕಿಲ್ಲಾಯರವರನ್ನು ಸಭಿಕರಿಗೆ ಪರಿಚಯ ಮಾಡಿಕೊಟ್ಟರು.

ಎರಡು ಸಾವಿರಕ್ಕೂ ಹೆಚ್ಚಾಗಿ ಸೇರಿದ ಸಭೆಯನ್ನು ಉದ್ದೇಶಿಸಿ ಕಾಮ್ರೇಡ್ ಕಕ್ಕಿಲ್ಲಾಯರವರು ಮಾತನಾಡುತ್ತಾ, ಕಳೆದ ಹತ್ತು ವರ್ಷಗಳಲ್ಲಿ ಕಾಂಗ್ರೆಸ್ಸಿನ ಆಡಳಿತ ಕ್ರಮವನ್ನು ವಿವರಿಸಿ, ನೆಹರೂರವರು-ಕಮ್ಯೂನಿಸ್ಟರು ಘೋಷಣೆಯಲ್ಲಿ ಕಾಲ ಕಳೆಯುತ್ತಾರೆಂದು ಆರೋಪಿಸುತ್ತಿದ್ದರೂ, ಅವರೇ ತಮ್ಮ ಹತ್ತು ವರ್ಷಗಳ ಆಡಳಿತದಲ್ಲಿ ಬರೀ ಘೋಷಣೆಯಲ್ಲಿ ಕಾಲ ಕಳೆಯುತ್ತಿರುವುದನ್ನು ವಿವರಿಸಿದರು. 1937ರ ಲಕ್ನೋ ಕಾಂಗ್ರೆಸ್ ಅಧಿವೇಶನದ ನಿರ್ಣಯ, 1947ರಲ್ಲಿ ಕೆಂಪು ಕೋಟೆ ಕೋಟೆಯಿಂದ ಜನತೆಗೆ ಕೊಟ್ಟ ಆಹಾರ ಮತ್ತು ವಿದ್ಯಾಭ್ಯಾಸದ ಭರವಸೆ, 1952ರ ಆವಡಿ ನಿರ್ಣಯದ ಸಮತಾವಾದದ ಘೋಷಣೆ, ಮೊದಲನೇ ಪಂಚವಾರ್ಷಿಕ ಯೋಜನೆಗಳ ಭರವಸೆಗಳೆಲ್ಲವೂ ಘೋಷಣೆಯ ರೂಪದಲ್ಲೇ ಉಳಿದಿವೆ. ಮೊದಲನೆ ಪಂಚವಾರ್ಷಿಕ ಯೋಜನೆಯ ವಿಫಲತೆ, ಎರಡನೇ ಯೋಜನೆಗಿರುವ ದುಡ್ಡಿನ ತೊಡಕಿಗೆ ಇರುವ ಆತಂಕವನ್ನು ಹೇಳುತ್ತ, ಕಾಂಗ್ರೆಸ್ ಬಂಡವಾಳ ಶಾಹಿಗಳ ವಿರುದ್ಧ ಕ್ರಮವಸಗಲು ಹಿಂಜರಿಯುತ್ತಿದ್ದುದರಿಂದಲೇ ಯೋಜನೆಗೆ ಮುಗ್ಗಟ್ಟು ಒದಗಿದೆ ಎಂದರು.

20 ವರ್ಷಗಳ ಹಿಂದೆಯೇ ಕಾಂಗ್ರೆಸ್ಸಿಗರು ಒಪ್ಪಿದ ಭೂಸುಧಾರಣೆಯನ್ನು ಅವರ ಒಪ್ಪಿಕೊಳ್ಳುವಂತೆ ಜಾರಿಗೆ ತರುವುದರಲ್ಲಿ ಯಶಸ್ವಿಯಾಗದಿರುವುದೇ ನಮ್ಮ ದೇಶದ ಆಹಾರ ಸಮಸ್ಯೆ ಹಾಗೂ ಬಡತನದ ಮೂಲಕಾರಣವೆಂದು ತಿಳಿಸಿದರು.

ಹಿಂದೂಸ್ಥಾನದ ಮತ್ತು ವಿಶ್ವದ ಯಾವ ಭಾಗದ ಕಮ್ಯೂನಿಸ್ಟರೇ ಆಗಲಿ, ಯುದ್ಧ ಪಿಪಾಸೆ ತಳೆದವರಲ್ಲವೆಂಬುದು ಇಂದಿನ ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ವ್ಯಕ್ತವಾಗಿದೆ ಎಂದು ತಿಳಿಸಿದರು. ಕೇರಳದ ಕಮ್ಯೂನಿಸ್ಟ್ ಸರ್ಕಾರವು ತನ್ನ ಸೇವೆಯನ್ನು ಮಾಡುತ್ತಿರುವುದಕ್ಕೆ, ವಿದ್ಯಾ ಸುಧಾರಣೆ, ಭೂ-ಹೀನರಿಗೆ ಭೂಮಿ ಹಂಚಿಕೆ, ಆಡಳಿತ ವರ್ಗದಲ್ಲಿ ದಕ್ಷತೆ ಇವುಗಳಿಂದಾಗಿ ಹಿಂದೂಸ್ಥಾನದ ಜನತೆಯ ಆಶೀರ್ವಾದ ಹಾಗೂ ಬೆಂಬಲ ಕೇರಳ ಸರ್ಕಾರಕ್ಕಿರುವುದಾಗಿ ತಿಳಿಸಿದರು.

ನಂತರ ಅಧ್ಯಕ್ಷತೆ ವಹಿಸಿದ್ದ ಬಿ. ಎಲ್. ಎ. ಹೆಗ್ಗಡೆಯವರು ಮಾತನಾಡುತ್ತಾ, ಕಳೆದ ಹತ್ತು ವರ್ಷಗಳಲ್ಲಿ ಕಾಂಗ್ರೆಸ್ಸಿನ ಆಡಳಿತ ಕ್ರಮದಲ್ಲಿರುವ ಲೋಪದೋಷಗಳಿಗೆ ಲೆಕ್ಕವಿಲ್ಲ. ಕಾಂಗ್ರೆಸ್ಸಿಗರಲ್ಲೇ ಇರುವ ಭಿನ್ನಾಭಿಪ್ರಾಯ ಹಾಗೂ ಕಾಂಗ್ರೆಸ್ ಪಕ್ಷ ಚುನಾವಣೆಗೆ ಉಮೇದುವಾರರನ್ನು ಆರಿಸಿದ ದೋಷಗಳನ್ನು ವಿವರಿಸಿ, ಕಮ್ಯೂನಿಸ್ಟರನ್ನು ದೊಂಬಿಕೋರರೆಂದು ಹೇಳುವ ಕಾಂಗ್ರೆಸ್ಸಿಗರೇ ಬೊಂಬಾಯಿ ಮುಂತಾದ ಕಡೆಗಳಲ್ಲಿ ಎಸ್. ಕೆ. ಪಾಟೀಲರಂತಹವರ ನೇತೃತ್ವದಲ್ಲಿ ನಡೆಸಿದ ದೊಂಬಿಯನ್ನು ಜನತೆ ಮರೆಯುವಂತಿಲ್ಲವೆಂದು ತಿಳಿಸಿ, ಕಮ್ಯೂನಿಸ್ಟ್ ಪಕ್ಷಕ್ಕೆ ಜನತೆಯ ಬೆಂಬಲ ಕೋರಿದರು.

ಶಿವಮೊಗ್ಗದ ಜಿಲ್ಲಾ ಕಾರ್ಯದರ್ಶಿಗಳಾದ ಚಂದೂಕುಟ್ಟಿಯವರು ಸಾರ್ವಜನಿಕರಿಗೆ ಪಕ್ಷದ ಪರಿಚಯ ಮಾಡಿಕೊಟ್ಟರು

ಬಸವರಾಜ್‌ರವರಿಂದ ವಂದನಾರ್ಪಣೆಯಾಗಿ ಸಭೆ ಮುಕ್ತಾಯವಾಯಿತು.

### ಪಾರ್ಟಿ ಸದಸ್ಯರ ಸಭೆ

ಭದ್ರಾವತಿ ಕಮ್ಯೂನಿಸ್ಟ್ ಪಾರ್ಟಿಯ ಆಫೀಸಿನಲ್ಲಿ ಇಲ್ಲಿನ ಕಮ್ಯೂನಿಸ್ಟ್ ಸದಸ್ಯರ ಸಭೆಯನ್ನು ಕಕ್ಕಿಲ್ಲಾಯರ ಅಧ್ಯಕ್ಷತೆಯಲ್ಲಿ ಕರೆಯಲಾಗಿತ್ತು. ಸಭೆಗೆ, ಕಾರ್ಖಾನೆಯ ಅನೇಕ ನೌಕರರೂ, ಪೇಪರ್ ಮಿಲ್ಸ್‌ನ ಕೆಲಸಗಾರರೂ ಆಗಮಿಸಿದ್ದರು. ಚಂದೂಕುಟ್ಟಿಯವರು ಸ್ವಾಗತ ಭಾಷಣ ಮಾಡಿದರು.

ಪೇಪರ್ ಮಿಲ್ಸ್ ಕೆಲಸಗಾರರಾದ ಚಂದ್ರಶೇಖರ್‌ರವರು ಅಧ್ಯಕ್ಷರಿಗೆ ಕೆಲಸಗಾರರ ಪರಿಚಯ ಮಾಡಿಕೊಟ್ಟರು.

ಕಕ್ಕಿಲ್ಲಾಯರವರು, ಕೂಲಿಗಾರರು ಸಂಘಟಿತರಾಗಿ ತಮ್ಮ ಸಾಮೂಹಿಕ ಹಿತರಕ್ಷಣೆ ಮಾಡಿಕೊಳ್ಳಬೇಕಾಗಿಯೂ ಆಡಳಿತ ವರ್ಗ ಹಾಗೂ ಬಂಡವಾಳಶಾಹಿಗಳು ಒಡೆದು ಆಳುವ ನೀತಿಯಿಂದ, ಕೂಲಿಗಾರರಲ್ಲಿ ಜಾತಿ ಹಾಗೂ ಪಕ್ಷಗಳ ಬೇಧವನ್ನು ಕಲ್ಪಿಸಲು ಪಡುವ ಪ್ರಯತ್ನಕ್ಕೆ ಬಲಿಯಾಗದೆ, ತಮ್ಮ ಸಂಘಟನೆಯನ್ನು ಉಳಿಸಿಕೊಳ್ಳಬೇಕೆಂದು ತಿಳಿಸಿದರು.

ಸಾಮಾನ್ಯವಾಗಿ ಬಂಡವಾಳಗಾರರು ಸೇರುವ ಚೇಂಬರ್ಸ್ ಆಫ್ ಕಾಮರ್ಸ್‌ನಲ್ಲೇ ಆಗಲಿ, ಕಂಪೆನಿಗಳ ಪಾಲುಗಾರರೇ ಆಗಲೀ ಹೇಗೆ ತಮ್ಮ ಹಿತರಕ್ಷಣೆಗಾಗಿ ಒಂದಾಗಿ ಕೂಲಿಗಾರರ ವಿರುದ್ಧ ಹೋರಾಡುವುದನ್ನು ಕಲಿತಿದ್ದಾರೋ, ಅವರ ಪಾಠವನ್ನಾದರೂ ನಾವು ಕಲಿತು ನಮ್ಮ ಹಿತರಕ್ಷಣೆಗಾಗಿ ಒಗ್ಗಟ್ಟಿನಿಂದ ಸಂಘಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕಲ್ಲದೆ, ಸಂಘಶಕ್ತಿಯನ್ನು ಮುರಿದು ಕೂಲಿಗಾರರಿಗೆ ಅಹಿತ ಬಗೆಯುವವರನ್ನು ದೂರವಿರಿಸಬೇಕೆಂದು ತಿಳಿಸಿದರು.

ವಂದನಾರ್ಪಣೆಯೊಡನೆ ಸಭೆ ಮುಕ್ತಾಯವಾಯಿತು

●○●

## ಓದುಗರ ಓಲೆ....

ಸ್ವಾಮಿ,

ಬಾಗೇಪಲ್ಲಿ ತಾಲ್ಲೂಕು ಚೇಳೂರು ಹೋಬಳಿ ಜಲಬಿಗಾನಹಳ್ಳಿ ಮಜರಾ ಸುಗಾಲ ಕಾಂಡಕ್ಕೆ ಸೇರಿದ ದೊಮ್ಮೆರಿಕುಂಟೆ ಕೆರೆ ಕಿತ್ತುಹೋಗಿ ಸುಮಾರು 20 ವರ್ಷಗಳಾದರೂ, ಸಂಬಂಧಪಟ್ಟ ಅಧಿಕಾರಿಗಳಿಗೆ ಅನೇಕವರ್ಷ ಅರ್ಜಿಗಳು ಸಲ್ಲಿಸಿದರೂ ಸರ್ಕಾರ ಲಕ್ಷ್ಯಕ್ಕೆ ತೆಗೆದುಕೊಳ್ಳದೆ ಇರುವುದರಿಂದ, ಸದರಿ ಕೆರೆ ಕೆಳಗಿನ ಸುಮಾರು 40 ಎಕರೆ ತರಿ ಜಮೀನು ಪ್ರತಿ ವರ್ಷವೂ ಕಟ್ಟೆಯಿಲ್ಲದ್ದರಿಂದ ಕೆರೆಗೆ ಬರುತ್ತಿದ್ದ ನೀರೆಲ್ಲವೂ, ಪಸಲಿನ (ಬೆಳೆಯ ಮೇಲೆ ಪ್ರವಾಹ ಬಿದ್ದು ರೈತನಿಗೆ ಅಪಾರ ನಷ್ಟವಾಗುತ್ತಿದೆ.

ಇಲ್ಲಿಯ ಸುಗಾಲಿ ಜನ ಬಹಳ ಹಿಂದುಳಿದವರೂ, ಮತ್ತು ಬಹಳ ಬಡತನದ ಬೇನೆಯಿಂದ ಜೀವನ ನಡೆಸುತ್ತಿದ್ದವರು. ರೈತರ ಸಂಸಾರಗಳ ಜಮೀನು ಪ್ರವಾಹದಿಂದ ನಾಶವಾಗುತ್ತಿರುವುದರಿಂದ ಕೇವಲ ಕೂಲಿಯಿಂದ ಜೀವನ ಮಾಡುವ ಪರಿಸ್ಥಿತಿ ಒದಗಿದೆ.

ಆದ್ದರಿಂದ ಈಗಲಾದರೂ, ಸರ್ಕಾರದವರು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಸದರಿ ದೊಮ್ಮೆರಿಕುಂಟೆ ಕೆರೆಯ ಕಟ್ಟೆಯನ್ನು ಕಟ್ಟಿಸಿ ಕೊಡುವರೆಂದು ನಂಬಿರುತ್ತೇವೆ.

'ಸುಗಾಲಿ ರೈತರು.'

## ಗುಬ್ಬಿ

ತಾ 1—12—57ರಲ್ಲಿ ಗುಬ್ಬಿತಾಲೂಕಿನಲ್ಲಿ ನಡೆಯುವ ಸಮಾಜ ಶಿಕ್ಷಣ ಸಪ್ತಾಹವು ಅಳಲ ಘಟ್ಟ ಗ್ರಾಮದಲ್ಲಿ ಎಚ್. ಸಿ. ಚೆನ್ನಪ್ಪನವರ ಅಧ್ಯಕ್ಷತೆಯಲ್ಲಿ ಪ್ರಾರಂಭಗೊಳಿಸಲ್ಪಟ್ಟಿತು. ಶ್ರೀ ಎ. ನರಸಿಂಹಮೂರ್ತಿ ಬಿ. ಎ.ರವರು ಸ್ವಾಗತ ಭಾಷಣ ಮಾಡಿದರು. ಗುಬ್ಬಿ ಬಿ. ಡಿ. ಓ. ರವರೂ ಎ. ಎಂ. ಚಿಕ್ಕ ತಿಮ್ಮಯ್ಯನವರೂ ಭಾಷಣ ಮಾಡಿದರು.

### ಮುನಿಸಿಪಲ್ ಕೆಲಸಗಾರರ ಸಂಘ ಸ್ಥಾಪನೆ

ತಾ 19—11—57ರಲ್ಲಿ ಗುಬ್ಬಿ ಮುನಿಸಿಪಲ್ ಕೆಲ್ಸಗಾರರು ಸಭೆಸೇರಿ ಗುಬ್ಬಿ ಮುನಿಸಿಪಲ್ ಕೆಲ್ಸಗಾರರ ಸಂಘ ಸ್ಥಾಪಿಸಲು ತೀರ್ಮಾನಿಸಿದರು. ಸಂಘಕ್ಕೆ ಎಚ್. ಟಿ. ಶಿವಣ್ಣಮಯ್ಯನವರು ಅಧ್ಯಕ್ಷರಾಗಿಯೂ ಎಚ್. ಸಿ. ಚೆನ್ನಪ್ಪನವರು ಕಾರ್ಯದರ್ಶಿಗಳನ್ನಾಗಿಯೂ ಗುಬ್ಬಿ ಹುಚ್ಚಪ್ಪ ಮುಂತಾದ 7 ಜನರನ್ನೊಳಗೊಂಡ ಕಾರ್ಯಕಾರಿ ಸಮಿತಿ ರಚಿಸಲಾಯಿತು.

(ಒನೇ ಪುಟದಿಂದ)

ನವಿತ್ತಿದ್ದಾರೆ. ಜೀವಂತ ರೈತರನ್ನು ವಂಚಿಸಿ ಭೂಮಿಯನ್ನು ವಿಕ್ರಯ (ದಾನ) ಮಾಡುವುದಿದೆ. ಆದರೆ ಈ ಕಾಂಗ್ರೆಸ್ ಪುಢಾರಿಗಳು, ಈಗ, ಸತ್ತವರಿಗೂ ಅಂತಿಮಕ್ರಿಯೆ ಮಾಡಲ್ಪಡುವ ಮಸಣ ಭೂಮಿಯನ್ನು ದಾನವಾಗಿ ಕೊಡುವುದು ಒಂದು ವಿಚಿತ್ರ ದಾನಬುದ್ಧಿಯೇ ಸರಿ.

ಆದರೆ, ಮಧುಗಿರಿಯಲ್ಲಿ ಬಹಳ ಹಳೆಯ ಕಾಲದಿಂದಲೂ ಸ್ಮಶಾನ ಭೂಮಿಯಾಗಿ ಬಳಸಿಕೊಂಡು ಬಂದ ಈ ಜಮೀನನ್ನು ದಾನ ಮಾಡಿ, ಸಾರ್ವಜನಿಕರಿಗೆ ಅತೀವವಾದ ತೊಂದರೆ ಕೊಟ್ಟಿರುವುದನ್ನು ಮಧುಗಿರಿಯ ಜನತೆ ಖಂಡಿಸುತ್ತಾರೆ, ಹಾಗೂ ಸರಕಾರ ಈ ಕೂಡಲೇ, ಈ ಸ್ಮಶಾನ ಭೂಮಿಯ ದಾನದ ನಡುವೆ ಪ್ರವೇಶಿಸಿ, ಜನರ ಪ್ರಾರ್ಥನೆಯಂತೆ ಈ ಸ್ಮಶಾನ ಭೂಮಿಯನ್ನಾದರೂ ಜನರಿಗೆ ಉಳಿಸಿ ಕೊಡಬೇಕೆಂದು ಕೇಳಿಕೊಳ್ಳಲಾಗಿದೆ.

## ಗೌರಿ ಬಿದನೂರು

### ಆಹಾರ ಬೆಳೆಗಳ ಸಂಪೂರ್ಣ ನಾಶ!

ಗೌರಿ ಬಿದನೂರು ತಾಲೂಕಿಡೀ ಆಹಾರ ಬೆಳೆಗಳು ಸಂಪೂರ್ಣ ಕೆಟ್ಟು ಹೋಗಿವೆ ಎಂಬ ವರದಿ ಬಂದಿದೆ. ಕೋಲಾರ ಜಿಲ್ಲೆಯಿಡೀ ಆಹಾರ ಬೆಳೆಗಳು ಕಳೆದ ಮೂರು ವರುಷಗಳಲ್ಲಿ ಕೆಟ್ಟು ಹೋಗುತ್ತಿರುವುದು ಎಲ್ಲರಿಗೂ ಗೊತ್ತು. ಈಗ ಮಳೆ ಬರದೆ ಬೆಳೆ ಕೆಟ್ಟು, ಆ ಮೇಲೆ ಪಂಪು ನೀರಿನ ಮೂಲಕ ಬೆಳೆಸಿದ ಮೆಣಸಿನಕಾಯಿ ಮತ್ತು ಹೊಗೆಸೊಪ್ಪಿನ ಬೆಳೆ ಸಂಪೂರ್ಣ ಕೆಟ್ಟು ಹೋಗಿದೆ. ಹೊಗೆಸೊಪ್ಪಿನ ಬೆಳೆ ಗೌರಿಬಿದನೂರು ತಾಲೂಕಿನಲ್ಲಿ ಹಿಂದಿನ ಮೂರು ವರುಷಗಳಿಂದಲೂ ಕೆಡುತ್ತಿದೆ. ರೈತರಿಗೆ ಅಲ್ಪಸ್ವಲ್ಪ ಹಣ ಬರುತ್ತಿದುದ್ದು, ಅದೂ ಇಲ್ಲದಂತಾಗಿದೆ.

ಇಷ್ಟೇ ಸಾಲದೋ ಎಂಬಂತೆ, ಕಷ್ಟಪಟ್ಟು ಪಂಪು ಮಾಡಿದ ನೀರಿನಿಂದ ಮಾಡಿದ ಭತ್ತದ ಬೆಳೆಯೂ ಹಾಳಾಗಿದೆ. ತೆನೆ ಕೊನರುವ ಮೊದಲೇ ಹುಳ ಬಿದ್ದು, ಕಡೆಯ ಆಸರೆಯಾದ ಈ ಬೆಳೆಯು ರೈತರ ಕೈಗೆ ಬರದಂತಾಗಿವೆ. ಮೆಣಸಿನ ಕಾಯಿ ಹೊಗೆಸೊಪ್ಪು, ಭತ್ತದ ಬೆಳೆ ಈ ಮೂರು ಮುಖ್ಯ ಬೆಳೆಗಳು ರೈತರ ಜೀವನಾಧಾರವಾಗಿದೆ. ಅದೇ ಇಲ್ಲವಾದ ಮೇಲೆ, ಗೌರಿಬಿದನೂರು ತಾಲೂಕೇ ಅಲ್ಲ, ಕೋಲಾರ ಜಿಲ್ಲೆಯಿಡೀ, ಆಹಾರದ ಅಭಾವ ಪರಿಸ್ಥಿತಿಯು ಉಗ್ರತೆ ಎಷ್ಟಿರಬಹುದೆಂದು ಸರ್ವಸಾಮಾನ್ಯರೇ ಗ್ರಹಿಸಬಹುದು. ಆದರೆ ನಮ್ಮ ಕಾಂಗ್ರೆಸ್ ಸರಕಾರ ಈ ಬಗ್ಗೆ ತೋರಿದ ಪ್ರತಿಕ್ರಿಯೆ ಏನು?

### ವ್ಯವಸಾಯ ಸಚಿವರ ಟೊಳ್ಳು ಮಾತು

ಗೌರಿಬಿದನೂರಿಗೆ ತೆರಳಿದ್ದ ವ್ಯವಸಾಯ ಸಚಿವರು ಅಲ್ಲಿನ ರೈತರಿಂದ ಮನವಿ ಸ್ವೀಕರಿಸಿದ್ದರು. ಟ್ರಾಕ್ಟರು, ಬುಲ್‌ಡೋಜರುಗಳ ಬಾಡಿಗೆ ಕಮ್ಮಿಗೊಳಿಸಬೇಕೆಂದು ಮತ್ತು ಬೆಳೆ ಕೆಟ್ಟಿರುವುದರಿಂದಾಗಿ ಪರಿಹಾರ ನೀಡಬೇಕೆಂದು ಮನವಿಮಾಡಲಾಗಿತ್ತು. ಮಾನ್ಯ ವ್ಯವಸಾಯ ಸಚಿವ ರುದ್ರಪ್ಪನವರು ಅಲ್ಲಿನ ರೈತರ ತೀವ್ರ ಆಹಾರ ಬಿಕ್ಕಟ್ಟನ್ನು ಕಣ್ಣಾರ ಕಂಡು ಪರಿಹಾರ ನೀಡುವ ಭರವಸೆ ಇತ್ತರು. ಆದರೆ ಇದೇ ಸಚಿವರು ಮರುದಿನ ಕೋಲಾರ ಜಿಲ್ಲೆಯಲ್ಲಿ ಆಹಾರ ಪರಿಸ್ಥಿತಿ ಚೆನ್ನಾಗಿದೆ ಎಂದು ಅಸತ್ಯ ಹಾಗೂ ಮೋಸಕಾರಕ ಹೇಳಿಕೆ ಕೊಟ್ಟಿರುತ್ತಾರೆ.

ಈ ಹಿಂದೆ ಅಸೆಂಬ್ಲಿಯಲ್ಲಿ ಈ ಪರಿಹಾರ ಪ್ರಶ್ನೆ ಬಂದಾಗ ಸರಕಾರ ಈ ಬಗ್ಗೆ ಹೆಜ್ಜೆ ತಕ್ಕೊಳ್ಳುವುದು ಎಂದು ಹೇಳಲಾಗಿದ್ದೂ, ಏನೊಂದು ಪರಿಹಾರ ರೈತರಿಗೆ ಒದಗಿದ್ದಿಲ್ಲ. ಆದರೆ ಸುಳ್ಳು ಹೇಳಿಕೆಗಳು, ಮೋಸದ ಭರವಸೆಗಳು ಮತ್ತು ಪ್ರವಾಸ ಕಾರ್ಯಕ್ರಮಗಳಲ್ಲೇ ನಮ್ಮ ಮಂತ್ರಿ ಮಾನ್ಯರುಗಳು ಮಾತ್ರ ತಪ್ಪದೇ ಮುಳುಗಿದ್ದಾರೆ.

(ಕೊನೇ ಪುಟ ನೋಡಿ)

# ಪ್ರಾಂತೀಯ ಸುದ್ದಿ ಸಂಗ್ರಹ

## ಹರಿಹರ

ಮೈಸೂರು ಕಿರ್ಲೋಸ್ಕರ ಕೆಲಸಗಾರರ ಸಂಘದ ಬಹಿರಂಗ ಸಭೆಯು ತಾರೀಖು 4—12—57ರಂದು ಸಂಘದ ಉಪಾಧ್ಯಕ್ಷರಾದ ಶ್ರೀ ಎಚ್. ಎಸ್. ರಾಮಚಂದ್ರ ರಾವ್ ಇವರ ಅಧ್ಯಕ್ಷತೆಯಲ್ಲಿ ವಿಮಾನ ಕಾರ್ಖಾನೆ ಕಾರ್ಮಿಕರ ಹೋರಾಟಕ್ಕೆ ಸಹಾನುಭೂತಿ ವ್ಯಕ್ತಪಡಿಸಲು ಸೇರಿತ್ತು.

ಸಭೆಯಲ್ಲಿ ಅನೇಕ ಕಾರ್ಮಿಕ ಸಹೋದರರು ಮಾತನಾಡಿ ವಿಮಾನ ಕಾರ್ಮಿಕರ ಹೋರಾಟವನ್ನು ಮುರಿಯಲು ಕೈಕೊಂಡ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿ ಮಾತನಾಡಿದರು.

ಸಂಘದ ಅಧ್ಯಕ್ಷರು ಕೇಂದ್ರ ಸರ್ಕಾರ ಮತ್ತು ಪ್ರಾಂತ ಸರ್ಕಾರ ಅನುಸರಿಸುತ್ತಿರುವ ಕಾರ್ಮಿಕರ ವಿರೋಧಿ ನೀತಿಯನ್ನು ಬದಲಾಯಿಸಲು ವಿಮಾನ ಕಾರ್ಖಾನೆ ಕಾರ್ಮಿಕರ ನಾಯಕರು ಕೈಕೊಂಡ ಉಪವಾಸದ ಬಗ್ಗೆ ಸರಕಾರ ಹೊರಿಸಿರುವ ಅಪಹಾಸ್ಯಕರ ಆಪಾದನೆಗಳ ಹೇಯ ನೀತಿಯನ್ನು ಖಂಡಿಸಿದರು.

ವಿಮಾನ ಕಾರ್ಖಾನೆ ಕಾರ್ಮಿಕರ ಹೋರಾಟವನ್ನು ಮುರಿಯಲು ಸರ್ಕಾರ ಕೈಕೊಂಡ ದಬ್ಬಾಳಿಕೆ ನೀತಿಯನ್ನು ಖಂಡಿಸುವ, ಈವರೆಗೆ ಕೈದು ಮಾಡಿದ ಎಲ್ಲ ವಿಮಾನ ಕಾರ್ಮಿಕ ನಾಯಕರನ್ನು ಅನಿರ್ಬಂಧವಾಗಿ ಕೂಡಲೇ ಬಿಡಬೇಕೆನ್ನುವ ಮತ್ತು ವಿಮಾನ ಕಾರ್ಮಿಕರ ಹೋರಾಟಕ್ಕೆ ಬೆಂಬಲ ಸೂಚಿಸುವ ನಿರ್ಣಯಗಳನ್ನು ಸ್ವೀಕರಿಸಿದ ನಂತರ ಸಂಘದ ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

## ಪಾವಗಡ

### ಕಮ್ಯೂನಿಸ್ಟ್ ಪಾರ್ಟಿ ಸಭೆ

ತಾ. 5-12-57 ರಂದು ಪಾವಗಡ ತಾಲ್ಲೂಕಿನ ಕಮ್ಯೂನಿಸ್ಟ್ ಪಾರ್ಟಿಯ ವಿಸ್ತ್ರದ ಸಭೆ ಸೇರಿ, ಪ್ರಚಲಿಸುವ ಪರಿಸ್ಥಿತಿ ಬಗ್ಗೆ, ಪಾರ್ಟಿ ಹೆಚ್ಚೆಚ್ಚು ಸದಸ್ಯರನ್ನು ಸೇರಿಸಿಕೊಳ್ಳುವ ಬಗ್ಗೆ, ತುಮಕೂರು ಜಿಲ್ಲೆಯ ಪಾರ್ಟಿ ಸಮ್ಮೇಳನದ ಬಗ್ಗೆ ಚರ್ಚಿಸಿತು. ಹಾಗು ರೈತ ಸಂಘಕ್ಕೆ ಹೆಚ್ಚೆಚ್ಚು ರೈತರನ್ನು ಸದಸ್ಯರನ್ನಾಗಿಸಲು ಪಾರ್ಟಿ ಸದಸ್ಯರು ತೀವ್ರವಾದ ಉತ್ಸಾಹ ತಾಳಿ ದುಡಿಯಬೇಕೆಂದು ನಿರ್ಣಯಿಸಲಾಯಿತು.

ಆಹಾರ ಧಾನ್ಯ ಬೆಲೆಗಳ ಹೆಚ್ಚುವರಿಯಿಂದಾಗಿ ಜನರು ತೊಂದರೆ ಪಡುತ್ತಿರುವುದರಿಂದ ಸರಕಾರ ಈ ಕೂಡಲೇ ಪಾವಗಡದಲ್ಲಿ ಅಗ್ಗ ಬೆಲೆಯಂಗಡಿಗಳನ್ನು ತೆರೆಯ ಬೇಕೆಂದು, ಒತ್ತಾಯಿಸುವ ತೀರ್ಮಾನವಾಯಿತು.

### ಪಿ. ಡಬ್ಲ್ಯೂ. ಡಿ. ಕಾರ್ಮಿಕರಿಗೆ ಸಂಬಳ ಭಡತಿಯಾಗಬೇಕು !

ಪಾವಗಡ ತಾಲ್ಲೂಕಿನ ಪಿ ಡಬ್ಲ್ಯೂ. ಡಿ. ಖಾತೆಯಡಿಯಲ್ಲಿ ರೋಡ್ ಗ್ಯಾಂಗ್ ಕೆಲಸಗಾರರು ಸುಮಾರು 100ಕ್ಕು ಮಿಕ್ಕಿ ಇದ್ದಾರೆ. ಇವರ ಜೀವನದ ಸ್ಥಿತಿಗತಿಗಳು ಅತ್ಯಂತ ಶೋಚನೀಯವಾಗಿವೆ. ದೈನಂದಿನ ಬಳಕೆಯ ಪದಾರ್ಥಗಳ ಬೆಲೆಯು ಕೈಗೆಟಕದಷ್ಟು ಮೇಲಕ್ಕೇರಿದ ಈಸಂದರ್ಭದಲ್ಲಿ ಈ ಕಾರ್ಮಿಕರಿಗೆ ಕೊಡಲಾಗುವ ಸಂಬಳ ಬರೇ 32 ರೂಪಾಯಿ. ಈ ಸಂಬಳದಿಂದ ಕಾರ್ಮಿಕರು ಯಾವ ತೆರನ ಜೀವನ ಸಾಗಿಸುತ್ತಿರಬಹುದೆಂದು ಸುಲಭವಾಗಿ ತಿಳಿಯಬಹುದಾಗಿದೆ. ಈ ಅನ್ಯಾಯವನ್ನು ಸರಿಪಡಿಸುವ ಬಗ್ಗೆ ಶಾಂತರೀತಿಯಲ್ಲಿ ಕಾರ್ಮಿಕರು ಮ್ಯಾನೇಜ್‌ಮೆಂಟನ್ನು ಕೇಳಿದರೆ, ಅದರಲ್ಲಿ ಮುಖ್ಯರಾದವರನ್ನು ನೌಕರಿಯಿಂದ ಕಿತ್ತು ಹಾಕುವ ಅಧಿಕಾರಶಾಹೀ ದುಸ್ಸಂಪ್ರದಾಯ ಇಲ್ಲಿನದಾಗಿದೆ ಅಷ್ಟೆ ಅಲ್ಲ, ಸಂಬಳ ಸಹಿತ ರಜಾ ದಿನ ಕೆಲಸಗಾರರಿಗೆ ದೊರಕುವ ಸೌಲಭ್ಯವಿದೆ ತಾನೆ! ಇಲ್ಲಿ ಅದೂ ಕಾಣೆ.

ಮೊನ್ನೆ ಮೊನ್ನೆ ಮುನಿಸಿಪಲ್ ನೌಕರರಿಗೆಲ್ಲಾ ರೂ. 6ರಂತೆ ಸಂಬಳ ಭಡತಿ ಕೊಟ್ಟಿದ್ದು, ಪಿ. ಡಬ್ಲ್ಯೂ. ಡಿ. ಖಾತೆಯ ಕಾರ್ಮಿಕರನ್ನು ಕಡೆಗಣಿಸಿದುದು, ಹೋರಾಟಕ್ಕೆ ಮಾತ್ರ ಡೊಗ್ಗು ಸಲಾಂ ಹೊಡೆಯುವ ಸರಕಾರದ ಸಂದರ್ಭಸಾಧಕ ನೀತಿಯನ್ನು ತೋರ್ಪಡಿಸುತ್ತದೆ. ಸರ್ಕಾರ ತನ್ನ ಈ ನಿಲುವನ್ನು ಬದಲಿಸಿ, ಪಿ. ಡಬ್ಲ್ಯೂ. ಡಿ. ಕಾರ್ಮಿಕರ ಕೇಳಿಕೆಗಳನ್ನು ಮನ್ನಿಸುವುದೆಂದು ನಂಬಿದ್ದೇವೆ.

### ಭದ್ರಾವತಿ ಕಬ್ಬಿಣ ಕಾರ್ಖಾನೆ ಕಾರ್ಮಿಕರ ಸಂಘದ ಚುನಾವಣೆಯಲ್ಲಿ ಸೂರಿಯವರ ಗೆಲವು ನಿಶ್ಚಯ !

4 ವರ್ಷಗಳಿಂದಲೂ ನಡೆಯದೇ ಇದ್ದ ಕೂಲಿಗಾರ ಸಂಘದ ಚುನಾವಣೆಯು ಇದೇ ತಿಂಗಳು ಕೊನೆಯ ವಾರದಲ್ಲಿ ನಡೆಯಲಿದೆ. ಸಂಘದ ಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸಿರುವ ಸೂರಿಯವರ ಗೆಲುವಿಗಾಗಿ ಕಾರ್ಖನೆಯ ಕೆಲಸಗಾರರು ತಾವಾಗಿಯೇ ಮುಂದೆ ಬಂದು ಚುನಾವಣೆಯ ಪ್ರಚಾರದಲ್ಲಿ ತೊಡಗಿದ್ದಾರೆ. ಸೂರಿಯವರ ಪರವಾಗಿ ಪ್ರಚಾರದಲ್ಲಿ ತೊಡಗಿರುವ ಕಾರ್ಯಕರ್ತರು ಸಂಘದ ಸದಸ್ಯರ ಮುಂದೆ ಸೂರಿಯವರ ಹೆಸರು ಹೇಳುವ ಮೊದಲೇ ತಮ್ಮ ಓಟು ಸೂರ್ಯನಾರಾಯಣ್‌ರವರಿಗೆ ಮೀಸಲು ಎಂದು ಹೇಳುತ್ತಿದ್ದಾರೆ. ಇತರ ಸ್ಥಾನಗಳಿಗೆ ಸ್ಪರ್ಧಿಸಿರುವರು ತಮ್ಮ ಗೆಲುವಿನ ದೃಷ್ಟಿಯಿಂದ ತಾವಾಗೆಯೇ ಸೂರಿಯವರಿಗೊಂದು ಓಟು, ನನಗೊಂದು ಕೊಡಿ ಎನ್ನುತ್ತಿದ್ದಾರೆ. ಇಂದು ಭದ್ರಾವತಿಯಲ್ಲಿ ಎಲ್ಲೆಲ್ಲೂ ಸೂರಿಯವರ ಹೆಸರು ಕೇಳಿ ಬರುತ್ತಿದೆ. ಇಲ್ಲಿರುವ ಇಬ್ಬಣದವರು, ಸೂರಿಯವರು ನಮ್ಮವರು ತಮ್ಮವರು ಎಂದು ಕರೆದು ಕೊಳ್ಳಲಾರಂಭಿಸಿದ್ದಾರೆ ಇವರ ಆಯ್ಕೆ ಎಂದರೆ ಕೂಲಿಗಾರರ ಐಕ್ಯತೆ ಎನ್ನುತ್ತಿದ್ದಾರೆ ಕೂಲಿಗಾರರು. ಈ ಸ್ಥಳದ ನಿವೃತ್ತರಾದರಾಜಕಾರಣಿಗಳುಇನ್ನುಮುಂದೆ ಕೂಲಿಗಾರರ ಮಧ್ಯೆ ನಮ್ಮಕೈವಾಡ ನಡೆಯದಲ್ಲಾ ಎಂದು ಪೇಚಾಡುತ್ತಿದ್ದಾರೆ. ಆಡಳಿತ ವರ್ಗದವರು, ಅಂಕಿ ಅಂಶಗಳೊಡನೆ ಮಾತಾಡುವ ಅಲ್ಲದೆ ಯಾರ ಪ್ರಭಾವಕ್ಕೂ ಒಳಗಾಗದ ಸೂರಿಯವರನ್ನು ಹೇಗೆ ಎದುರಿಸುವುದು ಎಂದು ಆಲೋಚಿಸುತ್ತಿದ್ದಾರೆ.

ಗುಂಪು ರಾಜಕೀಯಗಳ ಹವ್ಯಾಸಕ್ಕೆ ಹೋಗದೆ ನಿಜವಾದ ಕೂಲಿಗಾರನಾಯಕ ಸೂರ್ಯನಾರಾಯಣ್ ಎಂದು ಕಾರ್ಮಿಕ ವರ್ಗ ಈಗಾಗಲೇ ಗುರುತಿಸಿದೆ. ಅವರ ಗೆಲುವು ಕೂಲಿಗಾರರ ಐಕ್ಯತೆಯ ಕುರುಹು ಎಂದು ಹೇಳುತ್ತಿದೆ–ಇಲ್ಲಿನ ಕೂಲಿಗಾರ ವರ್ಗ.

## ಕೋಲಾರ

ಕೆ. ಸಿ. ಆರ್. ಮೈ.ಎಲ್ ಬಸ್ಸಿನ ಮಾಲಿಕರು ಎರಡು ವರ್ಷ ಕೆಲಸ ಮಾಡಿದ ಡ್ರೈವರ್ ಸಸೆಸ್ಟಿನ್ ಮತ್ತು ಒಂದು ವರ್ಷ ಕೆಲಸ ಮಾಡಿದ ಕಂಡಕ್ಟರ್ ರಾಮದಾಸ್‌ರವರಿಗೆ ಕ್ರಮವಾಗಿ ರೂ. 200—0—0 ಮತ್ತು 110—0—0 ಗಳನ್ನು ಕೊಡದೆ ಒಂದುವರೆ ತಿಂಗಳಿನಿಂದ ಸತಾಯಿಸುತ್ತಿದ್ದು ಕೊನೆಗೆ ನಿಮಗೆ ನಾನು ಯಾವುದೂ ಕೊಡಬೇಕಾದ್ದಿಲ್ಲವೆಂತಲೂ ಅವರ ಕೈಲಾದ್ದನ್ನು ಮಾಡಿಕೊಳ್ಳಬಹುದೆಂತಲೂ ತಿಳಿಸಿದ್ದರು. ಈ ವಿಚಾರದಲ್ಲಿ **ಕೋಲಾರ ಡಿಸ್ಟ್ರಿಕ್ಟ್ ಮೋಟಾರು ಕೆಲಸಗಾರರ ಸಂಘವು** ಕ್ರಮ ಕೈಕೊಂಡು ಕೇವಲ ಆರು ದಿನಗಳಲ್ಲಿ ಕೆಲಸಗಾರರಿಗೆ ಸಲ್ಲಬೇಕಾದ ಪೂರ್ತಿ ಹಣವನ್ನು ಕೊಡುವ ಹಾಗೆ ಏರ್ಪಾಡು ಮಾಡಿ ತಾ 30—11—57ರಲ್ಲಿ ಸಂಘದ ಕಾರ್ಯದರ್ಶಿಯವರಾದ ಕಾ|| ಎ. ವೆಂಕಟಗಿರಿಯವರೊಡನೆ ಮಾಡಿಕೊಂಡ ಒಪ್ಪಂದಕ್ಕೆ ಮಾಲಿಕರು ಸಹಿಯನ್ನು ಹಾಕಿರುತ್ತಾರೆ.

### ಈ ಲಂಚಕೋರ ಪೋಲೀಸ್ ಕ್ಲಾರ್ಕನ ಮೇಲೆ ಕ್ರಮ ಜರುಗಲಿ

ಪೋಲೀಸ್ ಸೂಪರಿಂಟೆಂಡೆಂಟರವರ ಆಫೀಸಲ್ಲಿರುವ ಸೂರ್ ಅಹಮದ್ ಎಂಬ ಗುಮಾಸ್ತ ತಾನೂ ನೌಕರನೆಂಬುದನ್ನು ಮರೆದು ಮೋಟಾರ್ ಕೆಲಸಗಾರರನ್ನು ಕೀಳು ಮಟ್ಟದವರೆಂದು ಭಾವಿಸಿ ಹೀನವಾಗಿ ಮಾತನಾಡಿಸುತ್ತಾರೆ. ಇದನ್ನು ಮೇಲಾಧಿಕಾರಿಗಳಿಗೆ ಅನೇಕ ಸಲ ತಿಳಿಸಿದರೂ ಅವರು ಅದಕ್ಕೆ ಕಿವಿಕೊಡುವಂತೆಯೇ ಕಾಣಲಿಲ್ಲ. ಹೆಚ್ಚಿಗೆ ಮಾತಾಡಿದರೆ ಲೈಸನ್ಸ್‌ಗಳನ್ನು ತಮ್ಮಲ್ಲಿಯೇ ಇರಿಸಿಕೊಂಡು ಅನೇಕ ಸಲ ಓಡಾಡಿಸಿ ಇಲ್ಲದ ತಪ್ಪುಗಳನ್ನು ತೋರಿಸಿ ಅವರಿಗೆ ಭಾರೀ ಕಿರುಕುಳ ಕೊಡುತ್ತಿದ್ದಾರೆ. ಇದರಿಂದ ಮೋಟಾರ್ ಕೆಲಸಗಾರರಿಗೆ ಆ ಆಫೀಸಿನಲ್ಲಿ ನಡೆಯಬೇಕಾದ ಎಲ್ಲ ಕೆಲಸಕ್ಕೂ ಕಷ್ಟವೇ ಬಂದೊದಗಿದೆ. ಆದ್ದರಿಂದ ಮೇಲಧಿಕಾರಿಗಳು ಜನಗಳ ಕಷ್ಟ ನಿವಾರಣೆಗಾದರೂ ಕ್ರಮ ಕೈಕೊಳ್ಳಬೇಕಾಗಿದೆ. ಒಂದು ಲೈಸನ್ಸ್ ರಿನ್ಯೂವಲ್‌ಗೆ ರೂ. 10ರಿಂದ 20ರ ವರೆಗೆ ಲಂಚವನ್ನು ಕೇಳುತ್ತಾರೆ. ಒಂದು ವೇಳೆ ಅದು ಕೊಡದಿದ್ದ ಪಕ್ಷದಲ್ಲಿ ಈ ಊರಿನಲ್ಲಿ ಲೈಸನ್ಸ್ ರಿನ್ಯೂವಲ್ ಆಗುವುದಕ್ಕೆ ಅಸ್ಪದ ಕೊಡುವುದಿಲ್ಲವೆಂದು ಹೇಳಿದ್ದೂ ಉಂಟು. ಜನಗಳ ಮೇಲ್ಮೆಗಾದರೂ ಈತನನ್ನು ಆ ಜವಾಬ್ದಾರಿ ಕೆಲಸದಿಂದ ತೆಗೆದರೆ ಎಲ್ಲರಿಗೂ ಉಪಕಾರವಾದಂತಾಗುತ್ತದೆ.

### ಮುಳಬಾಗಿಲು ಸಬ್‌ಇನ್‌ಸ್ಪೆಕ್ಟರರ ಈ ದುರ್ವರ್ತನೆ ನಿಲ್ಲಬೇಕು !

ಇದೇ ರೀತಿ ಮುಳಬಾಗಲ್ ಟ್ರಾ ಸಬ್ ಇನ್ಸಪೆಕ್ಟರ್‌ರವರಾದ ರಾಮೇಗೌಡರು ಮೋಟಾರ್ ಕೆಲಸಗಾರರಿಗೆ ಅನೇಕ ತೊಂದರೆಗಳನ್ನು ಕೊಡುತ್ತಿರುವರು. ತಾವು ಹೊರಡಬೇಕೆಂದು ಒಂದು ಬಸ್ಸನ್ನ ಅರ್ಧಗಂಟೆ ನಿಧಾನ ಮಾಡಿ ಅದರ ಹಿಂದಿನ ಬಸ್ಸಿನವರು ಅಲ್ಲಿಗೆ ಬಂದು ತಮ್ಮ ತಮ್ಮಲ್ಲೇ ಕಾದಾಡಬೇಕಾದ ಪ್ರಸಂಗಗಳೂ ಕೂಡ ಬಂದೊದಗಿವೆ. ಇವರು ತಮ್ಮ ಕೆಲಸವಿದ್ದಲ್ಲಿ ಬಸ್ ವೇಳೆಗೆ ಸರಿಯಾಗಿ ಹೊರಡಬೇಕು ವಿನಹ, ತನಗಾಗಿ ಬಸ್ಸನ್ನೇ ನಿಲ್ಲಿಸಿಕೊಂಡು ಅದರಲ್ಲಿರುವ ಪ್ರಯಾಣಿಕರಿಗೆ ತೊಂದರೆ ಕೊಡುವುದು ಸರಿಯಲ್ಲ. ಇವರು ಸರ್ಕಾರಿ ಕೆಲಸವಾದರೆ ಬೇರೆ ಏರ್ಪಾಡಾದರೂ ಮಾಡಿಕೊಂಡು ಹೋಗಬೇಕು. ಇಲ್ಲದಿದ್ದರೆ ಇವರಿಂದ ಸ್ನೇಹದಲ್ಲಿರುವ ನೌಕರರು ಕಾದಾಡಬೇಕಾಗುತ್ತೆ. ಇನ್ನು ಮುಂದಾದರೂ ಇವರು ಈ ರೀತಿ ಮಾಡದೆ ಇರಲಿ.

### ಮದುಗಿರಿಯಲ್ಲಿ ಸ್ಮಶಾನ ದಾನ !

ಮಧುಗಿರಿಯಲ್ಲಿ ಭೂದಾನದ ಅಭಿಮಾನ ಈಗೀಗ ಹೆಚ್ಚುತ್ತಿದೆ ಎಂಬುದಕ್ಕೆ ಈ ಕೆಳಗೆ ಒಂದು ನಿದರ್ಶನವನ್ನು ಕೊಡುತ್ತಿದ್ದೇನೆ. ಆಚಾರ್ಯ ಭಾವೆಯವರು ಮೈಸೂರು ಪ್ರವಾಸದಲ್ಲಿ ಪ್ರಚಾರ ಮಾಡಿದ ಭೂದಾನ, ಗ್ರಾಮದಾನ, ತಾಲೂಕ್ ದಾನ, ಪ್ರೇಮದಾನಗಳ ಮಣಿಮಾಲೆಗೆ, ಮಧುಗಿರಿಯ ಕಾಂಗ್ರೆಸ್ ಪುಡಾರಿಗಳೊಬ್ಬರು ಇನ್ನೊಂದು 'ದಾನ'ವನ್ನು ಸೇರಿಸಿದ್ದಾರೆ. ಅದು 'ಸ್ಮಶಾನದಾನ' !

ಈ ದಾನ ಕೊಟ್ಟ ಕಾಂಗ್ರೆಸ್ ಪುಡಾರಿಗಳು ಈಗ ಎಂ. ಎಲ್. ಎ. ಆಗಿರುವ ಮಾಲಿಕ ಮರಿಯಪ್ಪನವರು ಕಳೆದ ಚುನಾವಣೆಯಲ್ಲಿ ಇವರಿಗೆ ತನ್ನ ಪೂರ್ಣ ಬೆಂಬಲವಿತ್ತ ಬಸ್ಸು ಮಾಲೀಕ ಸಜ್ಜಪ್ಪನವರಿಗೆ, ಪ್ರತ್ಯುಪಕಾರವಾಗಿ ಮಧುಗಿರಿಯ ಒಬರ್ ಪೈನ್ ಕೋಪೆನಿಸಿಕೊಂಡ ಸ್ಮಶಾನ ಭೂಮಿಯನ್ನು ಉದಾರವಾಗಿ ದಾ

(೬ನೇ ಪುಟ ನೋಡಿ)

# ತಿರುಗುಬಾಣ

ನವೆಂಬರ 23ನ್ನ (ರೈಲ್ವೆ) ದುರಂತ ದಿನಾಚರಣೆಯನ್ನು ಆಚರಿಸಬೇಕೆಂಬುದಾಗಿ ಕಾಂಗ್ರೆಸ್ ಸರಕಾರ ಕರೆಯೀಯುವುದು ಲೇಸು ಎಂಬುದಾಗಿ ನಮ್ಮ ಓದುಗರ ಸಲಹೆ.

ಹೌದು ! ಯಾಕಾಗಬಾರದು ! ಈ ನವಂಬರ 23ರಂದು ಮುಂಬಾಯಿ-ಕಲ್ಕತ್ತಾ ಮೈಲು ಕಂಬಿ ತಪ್ಪಿ ಹಿರಿಯ ದುರಂತವೊಂದು ಘಟಸಿದೆ. ಇದೇ ನವಂಬರ 23, ಕಳೆದ ವರುಷ ಅರಿಯಲೂರಿನಲ್ಲಿ ಭಯಂಕರ ರೈಲ್ವೆ ದುರಂತವೊಂದು ಒದಗಿತ್ತು.

ನಮ್ಮ ಕಾಂಗ್ರೆಸ್ ಸರಕಾರ ಇದಕ್ಕೇನನ್ನುವುದ? ಏನನ್ನಬೇಕ? ಈ ಕಂಬಿ ತಪ್ಪಿ ಆಗುವ ದುರಂತಕ್ಕೆ ಕಾರಣಭೂತರಾದವರನ್ನು ಸರಕಾರವೇ ರಚಿಸಿದ ವಿಚಾರಣಾ ಸಮಿತಿ ತೋರ್ಬೆರಳಿಂದ ತೋರಿಸಿವರೂ, ಸರಕಾರ ಭರವಸೆಯು ಹಳಿ ತಪ್ಪಿ ಓಡಿ ಹೋಗುತ್ತಿದೆ. ಆದರೆ 'ಹಳಿ ತಪ್ಪಿದ' ಕಾಂಗ್ರೆಸ್ ಆಳ್ವಿಕೆಗೆ (ಕೇರಳ ದುರಂತ ಬಿಟ್ಟು) ಇತರ ಕಡೆಯಲ್ಲಿ ದುರಂತಗಳು ಸಂಭವಿಸಿದರೆ ಅದನ್ನಾದರೂ 'ಆಚರಿಸಿ' ಸಂತೋಷಪಡಬಹುದಲ್ಲ ಎಂದು ಈ ರೈಲ್ವೆ ದುರಂತಲ್ಲಿ ಭಾಗಿಯಾದ ಕೆಲವರ ಚಿಂತೆಯಂತೆ !

**ಎಡ (ವಿದ) ಪಕ್ಷ ಪಿ. ಎಸ್. ಪಿ. !**

ಭಾರತದೆಲ್ಲೆಡೆಗಳಲ್ಲಿಯೂ ಕೇರಳದ ಕಮ್ಯೂನಿಸ್ಟ್ ಆಡಳಿತೆಯ ವಿರುದ್ಧವಾಗಿ 'ಪ್ರತಿಭಟನಾ ದಿನಾಚರಣೆ' ಮಾಡಬೇಕಂದ, ಪಿ. ಎಸ್. ಪಿ. ಕರೆಗೊಟ್ಟಿದೆ.

ಇದರ ಬದಲು ಕಾಂಗ್ರೆಸ್ – ಪಿ. ಎಸ್. ಪಿ. ಸೋತು, ಕೇರಳದಲ್ಲಿ ಕಮ್ಯೂನಿಸ್ಟ ಆಡಳಿತೆ ವಹಿಸಿದ ದಿನವನ್ನೇ "ದುರಂತ ದಿನ'ವನ್ನಾಗಿ ಆಚರಿಸಿದರೆ ಎಷ್ಟೋ ಮೇಲು ಎಂದು ಥಾನುಪಿಳ್ಳೆಯವರ 'ದುರಂತ' ಯೋಜನೆಯಾಗಿದೆಯಂತೆ !

o o o o

ಕೇರಳದಲ್ಲಿ ಆಡಳಿತೆಯ ಕಂಬಿ ತಪ್ಪಿದ ಕಾಂಗ್ರೆಸ್ ಮತ್ತು ರಾಜಕೀಯವಾಗಿ ಎಡ (ವಿದ) ಪಕ್ಷವಾದ ಪಿ. ಎಸ್. ಪಿ. ಹಾಗೂ ಇವುಗಳ ನಾಯಕತ್ವ ಆಗಾಗ್ಗೆ ಕಂಬಿ ತಪ್ಪಿ, ಘಟಿಸುವ ದುರಂತಗಳ ವಿಚಾರಣೆಗಾಗಿ, ಅಶೋಕ ಮೆಹ್ತಾ ಥಾನುಪಿಳ್ಳೆ ಮತ್ತು ಶ್ರೀ ಮನ್ನಾರಾಯಣ- ಪಿ. ಟಿ. ಚಾಕೋರವರನ್ನು ಒಳಗೊಂಡ ವಿಚಾರಣಾ ಸಮಿತಿಯೊಂದನ್ನು ರಚಿಸಬೇಕೆಂದು ಪಿ. ಎಸ್. ಪಿ. ಕೇಂದ್ರ ನಾಯಕತ್ವವೂ-ಕಾಂಗ್ರೆಸ್ ಹೈಕಮಾಂಡೂ ಯೋಚಿಸುತ್ತಿದೆಯಂತೆ !

o o o o

ಕೇರಳದಲ್ಲಿ ಪಿ.ಎಸ್.ಪಿ. ಕಾಂಗ್ರೆಸ್ ಒಂದಾಗಿ ಕಮ್ಯೂನಿಸ್ಟ್ ಆಡಳಿತೆಯನ್ನು ದ್ವೇಷಿಸಲು ಪ್ರಧಾನವಾದ ಕಾರಣಗಳಾವುವು ಎಂದು ನಮ್ಮನ್ನು ಪ್ರಶ್ನಿಸಲಾಗಿದೆ.

2) ಕಾರ್ಮಿಕರು ಹೋರಾಟ ಮಾಡುತ್ತಿರುವಾಗ ಅದನ್ನು ಹತ್ತಿಕ್ಕಲು ಪೋಲೀಸರನ್ನು ಉಪಯೋಗಿಸಲು ನಿರಾಕರಿಸಿದ್ದು.

1) ವಿದ್ಯಾ ಮಸೂದೆಯಂಥ ಪುರೋಗಾಮಿ ಶಾಸನವನ್ನು ತಂದು ಚರ್ಚಿನ ಪಟ್ಟಭದ್ರ ಹಿತಗಳಿಗೆ ಧಕ್ಕೆ ತಂದುದು. ಈ ಸಂಬಂಧದಲ್ಲಿ ಚೂಪಾಗಿರುವ ಲಾಠಿಯನ್ನು ಹಿಡಿದುಕೊಂಡು, ಕಮ್ಯೂನಿಸ್ಟ್ ಸರಕಾರನ್ನು ಹಿಂಸಾತ್ಮಕವಾಗಿ ನಾಶ ಮಾಡುವೆವು ಎಂದು ಘೋಷಣೆ ಹಾಕುತ್ತಾ, ಕುಡಿದು ಗಲಭೆ ಎಬ್ಬಿಸುತ್ತಾ ನಡೆದ ಮೆರವಣಿಗೆಯ ಮೇಲೆ, ನ್ಯಾಯವಾಗಿಯೂ ಪೋಲೀಸರು ಗುಂಡು ಹಾರಿಸಬೇಕಿದ್ದು, ಹಾರಿಸದಂತೆ ಕಮ್ಯೂನಿಸ್ಟರು ಕುತಂತ್ರದಿಂದ ತಡೆದದ್ದು:

5) ಕಡೆಯದಾಗಿ ಕಟ್ಟಂಪಳ್ಳಿಯಲ್ಲಿ ಹರಿಜನ ಕಾಲೋನಿಯನ್ನು ಕಟ್ಟುವುದಾಗಿ ಸಾರಿ, ಸರಕಾರಿ ಭೂಮಿಯಲ್ಲಿ ಬಲಾತ್ಕಾರ ಪ್ರವೇಶ ಮಾಡುವ ಪಿ. ಎಸ್. ಪಿ. ತಂತ್ರವು ಫಲಕಾರಿಯಾಗುವ ಮುನ್ನವೇ ಮುರಿದದ್ದು.

3) ಪ್ರಗತಿಗಾಮಿಯಾದ ಭೂಸುಧಾರಣೆ ತಂದು ಕೇರಳದ ರೈತರನ್ನೆಲ್ಲಾ ಇನ್ನೊಂದು ಚುನಾವಣೆಯಲ್ಲಿ ಕಮ್ಯೂನಿಸ್ಟರಿಗೆ ಓಟು ಕೊಡುವ ಹಾಗೆ ಪರೋಕ್ಷವಾಗಿಯಾದರೂ ಬಲಾತ್ಕರಿಸಿದ್ದೆ ಅಲ್ಲದೆ, ತನ್ನಿಮಿತ್ತವಾಗಿ ಲಂಚದ ಆಶೆ ತೋರಿಸಿದ್ದು ಇವಲ್ಲಾ ಸದ್‌ಕೃತ್ಯಗಳಿಂದಾಗಿ ಇಡೀ ಭಾರತದಲ್ಲೇ ಕಮ್ಯೂನಿಸ್ಟರ ಪ್ರಭಾವ ಬೀರುವಂಥಾ ಅತ್ಯಂತ ಘನವಾದ 'ದೇಶದ್ರೋಹಿ" (ಅಂದರೆ ಕಾಂಗ್ರೆಸ್-ಪಿ. ಎಸ್. ಪಿ. ವಿರೋಧಿ) ಪಿತೂರಿಯನ್ನು ನಡೆಸಿದ್ದು.

4) ಕಾಂಗ್ರೆಸ್ ಸರಕಾರದ ಬ್ರಹ್ಮಾಸ್ತ್ರವಾಗಿದ್ದ, ಪ್ರತಿಬಂಧಕಾಜ್ಞೆಯನ್ನು ಕಮ್ಯೂನಿಸ್ಟರು ಕೇರಳದಲ್ಲಿ ಬಳಸುವುದಿಲ್ಲವೆಂದು ಸಾರಿದ್ದು. ಇದರಿಂದಾಗಿ ನೆಹ್ರೂರಂಥ ಜನಪ್ರಿಯ, ವ್ಯಕ್ತಿಯನ್ನು ಜನರ ದೃಷ್ಟಿಯಲ್ಲಿ ಜನದ್ರೋಹಿ ಎಂಬುದಾಗಿ ಸ್ಥಿರೀಕರಿಸಲು ಹೊಂಚು ಹಾಕಿದ್ದು. ಇವೆಲ್ಲಾ ಕಾರಣಗಳಿಂದಾಗಿ ಕಮ್ಯೂನಿಸ್ಟ್ ನಾಯಕರ ಭಾಷಣ ಕೇಳಲು ಲಕ್ಷಗಟ್ಟಲೆ ಜನ ಸೇರುವಂತಾಗಿದೆ. ಆದರೆ ಕಟ್ಟಂಪಳ್ಳಿಯಲ್ಲಿ ಪಿ. ಎಸ್. ಪಿ. ಸತ್ಯಾಗ್ರಹಕ್ಕೆ ಬೆಂಬಲವಾಗಿ ಹಾಗೂ ಕಮ್ಯೂನಿಸ್ಟರ ವಿರುದ್ಧವಾಗಿ ಪ್ರತಿಭಟನಾ ಸಭೆಗೆ, ಅದೂ ಥಾನುಪಿಳ್ಳೆಯವರು ಭಾಷಣಕರ್ತರಾಗಿದ್ದೂ, ಬರೇ ಮುನ್ನೂರು ಜನವೂ ಸೇರದಂತಹ ಪರಿಸ್ಥಿತಿ ಒದಗಿದೆ.

ಇದಕ್ಕೆಕಾರಣ ಕಮ್ಯೂನಿಸ್ಟರ ಸರ್ವಾಧಿಕಾರವೇ ಸರಿ. ಇದು ದುರಂತವೇ ಸರಿ, ಎಂದು ಪಿ. ಎಸ್. ಪಿ. ಭಾವಿಸಿದ್ದು ಸರಿಯೇ ! ಆದರೆ ಯಾರ ದುರಂತ ?

"ಸೂಕ್ಷ್ಮದರ್ಶಿ"

(೧ನೇ ಪುಟದಿಂದ)

## ಮಾಲಿಕರ ಫೋರ್ಜರಿ ಪತ್ರ

ಲು ಮಾಡಿದ ಕುಹಕ ಪತ್ರ ಇಲ್ಲಿ ಕೊಡಲಾಗಿದೆ :

1 ನೇ ಕುಸುಬೂರು ತೋಟದ ಮೆನೆಜ್‌ಮೆಂಟ್ ನೋಡುತ್ತಿರುವ (Managing Proprietor) ಯಜಮಾನರಿಗೆ ಇದೇ ತೋಟದ ಮಜದೂರನಾದ ಚನ್ನ ಪಕೀರನು ತಿಳಿಯಪಡಿಸುವುದೇನೆಂದರೆ—30-10-57 ನೇ ದಿನ ನನಗೆ 1ನೇ ಕುಸುಬೂರು ತೋಟದ ಹೆಡ್ ರೈಟರರು ಕೆಲಸಕ್ಕೆ ನೇಮಕ ಮಾಡಿದರು ಆದರೆ ನಾನು ಕೆಲಸ ಮಾಡಲು ನಿರಾಕರಿಸಿದೆನು. ಇದನ್ನು ತಿಳಿದು ನನ್ನನ್ನು ಕುಸುಬೂರು ತೋಟಕ್ಕೆ ಹೋಗಿ ಕೆಲಸಮಾಡಿ ಕೊಂಡಿರಬೇಕಾಗಿಯೂ, ಹಾಗೆ ಕುಸಬೂರು ತೋಟಕ್ಕೆ ಹೋಗಲು ಆಗುವ ಖರ್ಚನ್ನು ಕೊಡುವುದಾಗಿಯೂ ಹೇಳಿದರು. ಇದಕ್ಕೂ ನಾನು ನಿರಾಕರಿಸಿದೆನು. ನನಗೆ ಕುಸುಬೂರು ತೋಟದಲ್ಲಿ ಕೆಲಸ ಮಾಡಿಕೊಂಡಿರಲು ಇಷ್ಟವಿಲ್ಲ, ಅಲ್ಲದೆ ಸಿದ್ದಣ್ಣ ಸಾಹುಕಾರರ ಯಾವ ತೋಟದಲ್ಲಿಯೂ ಇರಲು ಇಷ್ಟವಿಲ್ಲ, ನನ್ನ ಬಾಬ್ತು ಸಾಮಾನು ವಗೈರೆ ಎಲ್ಲಾ ಪಧಾರ್ಥಗಳನ್ನು ತೋಟದ ಯಜಮಾನರ ವಶಕ್ಕೆ ಒಪ್ಪಿಸಿದ್ದೇನೆ. ಈ ನನ್ನ ಸಾಮಾನುಗಳೆಲ್ಲವನ್ನು ನನಗೆ ಅನುಕೂಲವಾದಾಗ ನಾನೇ ಬಂದು ತೆಗೆದುಕೊಂಡು ಹೋಗುತ್ತೇನೆ.

ನನಗೆ ಕುಸುಬೂರು ತೋಟದಲ್ಲಿ ಕೆಲಸ ಮಾಡಲು ಇಷ್ಟವಿಲ್ಲದಿದ್ದರಿಂದ ನಾನು ವಾಸವಿದ್ದ ಕುಸುಬೂರು ತೋಟದ ಮನೆಯನ್ನು ಈ ದಿನ ಖಾಲಿ ಮಾಡಿದ್ದೇನೆ. ನಾನು ಈ ತೋಟಕ್ಕೆ ಮಾಲಿಕರ ಹತ್ತಿರ ಮಾಡಿದ ಸಾಲದ ಪೈಕಿ (Rs. 131/-) ಒಂದುನೂರ ಮೂವತ್ತೊಂದು ರೂಪಾಯಿಗೆ ಬಾಕಿದಾರನಾಗಿರುತ್ತೇನೆ.

ಈ ಮೇಲಿನ ಪತ್ರವನ್ನು ನರಸಿಂಹನ್ ಎಂಬ ಆಫೀಸು ರೈಟರು ಸಾಹುಕಾರರ ಪರ ಬರೆದು ಚನ್ನ ಪಕೀರನನ್ನು ದಸ್ಕತು ಮಾಡೆಂದು ಬಲಾತ್ಕರಿಸಿದಾಗ ಈ ಮೇಲಿನ ಪತ್ರದೊಡನೆ ಆತ ತಪ್ಪಿಸಿಕೊಂಡು ಲೇಬರ್ ಯೂನಿಯನ್ನಿಗೆ ಬಂದು ತಿಳಿಸಿರುತ್ತಾನೆ. ಮತ್ತು ಈ ಮೇಲಿನ ಪತ್ರಕ್ಕೆ ದಸ್ಕತ್ತು ಮಾಡದೆ ಇದ್ದರೆ ಆತನ ಮನೆಬೀಗ ಒಡೆದು ಸ್ವಾಧೀನ ಪಡಿಸಿಕೊಂಡು ಆತನನ್ನು ಪೋಲಿಸಿಗೆ ಕೊಡುತ್ತೇವೆಂದು ಸಹ ಮಾಲಿಕರು ಬೆದರಿಕೆ ಹಾಕಿರುತ್ತಾರೆ.

ಪ್ರವಾಸ ಕೈಗೊಂಡಲ್ಲೆಲ್ಲಾ ನಮ್ಮ ಮೈಸೂರು ರಾಜ್ಯದಲ್ಲಿ ಕಾರ್ಮಿಕ-ಮಾಲಿಕ ಬಾಂಧವ್ಯ ಸೌಹಾರ್ದಯುಕವಾಗಿದೆ ಎಂದು ಸಕ್ಕರೆಯ ಮಾತಾಡುತ್ತಿರುವ ಕಾರ್ಮಿಕ ಮಂತ್ರಿ ಬಾಳಿಗಾರಿಗೆ ಬಹುಶ: ಮಾಲಿಕರ ಈ ದ್ರೋಹ ಹಾಗೂ ಪೋರ್ಜರಿ ಪತ್ರದ ವಿಷಯ ತಿಳಿದಿರಲಿಕ್ಕಿಲ್ಲ. ಇದೊಂದೇ ಅಲ್ಲ, ತೋಟಗಳಲ್ಲಿ ಇಂಥ ನೂರಾರು ಘಟನೆಗಳು ಎಡೆ ಬಿಡದೆ ನಡೆಯುತ್ತಿವೆ; ಅದೂ ಕಾರ್ಮಿಕ ಮಾಲಿಕರೊಡನೆ ಪಂಚವಾರ್ಷಿಕ ಕೈಗಾರಿಕಾ ಒಪ್ಪಂದ ಆದ ಮೇಲೆ.

ಕೊಡಗಿನಲ್ಲಿ ಈ ದಬ್ಬಾಳಿಕೆ ಒಂದು ಸಂಪ್ರದಾಯ. ಹಿಂದೆ ಕೊಡಗು ರಾಜ್ಯ ಬೇರೆಯೇ ಇದ್ದಾಗ ಪೂಣಚ್ಚರ ಸರ್ವಾಧಿಕಾರದಲ್ಲಿ ಇದ್ದು ನಿರಾತಂಕವಾಗಿ ನಡೆದಿದ್ದು, 'ಇಂದು ಪೂಣಚ್ಚರು ಮೈಸೂರಿನ ಪೋಲಿಸು ಮಂತ್ರಿ ಆಗಿದ್ದಾಗ ಮಾಲಿಕರು ಪೋರ್ಜರಿ ವಂಚನೆ, ದಬ್ಬಾಳಿಕೆಯಲ್ಲಿ ಅನಿರ್ಬಂಧವಾಗಿ ಮೆರೆಯದಿದ್ದರೆ, ಇನ್ನಾವಾಗ ಮೆರೆಯಬೇಕು ?

# ಓದುಗರ ಓಲೆ

ಸ್ವಾಮಿ,

ಸರ್ಕಾರವು ಯಾವುದೇ ಇರಲಿ, ನ್ಯಾಯವು ಒಂದೇ ಆಗಿರಬೇಕೆಂದು ಅನೇಕ ಮಹನೀಯರುಗಳು ನುಡಿದಿರುತ್ತಾರೆ. ಅದರಲ್ಲೂ ವಿದ್ಯಾಭ್ಯಾಸದಲ್ಲಿ ಮಾತ್ರ ಯಾವ ತರಹೆಯ ಭೇದವನ್ನೂ ತೋರಬಾರದೆಂಬುದು ಎಲ್ಲರ ಮಾತು. ಆದರೆ ಈಗ ನಡೆಯುತ್ತಿರುವ ಮೋಸಗಳು ಎಲ್ಲೆ ಮೀರಿವೆ. ಕೋಲಾರದ ಹೈಸ್ಕೂಲು ಬ್ಯಾಕವರ್ಡ್ ಕಮ್ಯುನಿಟಿ ಸ್ಕಾಲರ್ ಷಿಪ್ ಕಮಿಟಿಯು ಬಹಳ ಜಾಗರೂಕತೆಯಿಂದ 'ಜಾಣತನದ ಮೋಸ" ಮಾಡಿದೆ. ಈ ಕಮಿಟಿಯ ಚೇಯರ್‌ಮೆನ್ನರಾದ ಶ್ರೀ. ಎಚ್. ಸಿ. ಲಿಂಗಾರೆಡ್ಡಿಯವರು ಆರಿಸಿರುವ ಕಮಿಟಿ ಮೆಂಬರುಗಳ ಪೈಕಿ ಬಂಗಾರಪೇಟೆ ತಾಲ್ಲೂಕಿನ ಇ. ನಾರಾಯಣಗೌಡ ಎಂ. ಎಲ್. ಎ. ಇವರನ್ನು ಬಿಟ್ಟರೆ ಉಳಿದವರೆಲ್ಲರೂ ಕಾಂಗ್ರೆಸಿಗರೇ ಅಥವಾ ಅದರ ಬೆಂಬಲಿಗರೇ ಆಗಿರುತ್ತಾರೆ. ಇವರೆಲ್ಲರನ್ನೂ ಆರಿಸಿದ ಕಾರಣವಾದರೂ ಏನ? ಕಾರಣವಿಷ್ಟೆ: ಚೇಯರ್‌ಮೆನ್ನರ ಮಾತು ಮೀರದವರು ಇರಬೇಕೆಂಬುದೇ !

ಈ ಸಮಯವನ್ನು ಸದುಪಯೋಗಪಡಿಸಿಕೊಂಡ ಚೇಯರ್‌ಮೆನ್ನರು ತಮ್ಮ ತಾಲ್ಲೂಕಿಗೆ ಕಡಿಮೆ ಬಿದ್ದ ಸ್ಕಾಲರ್‌ಷಿಪ್‌ಗಳನ್ನು ಬೇರೆ ತಾಲ್ಲೂಕುಗಳಿಂದ ಸೆಳೆದು, ತಮ್ಮಲ್ಲಿ ಉಳಿದಿರುವುದನ್ನು ಆ ತಾಲ್ಲೂಕುಗಳಿಗೆ ಒದಗಿಸಿದ್ದಾರೆ. ಅದರಲ್ಲೂ ಒಂದು ಜಾತಿಯ ಅಲಾಟ್‌ಮೆಂಟನ್ನು ಮತ್ತೊಂದು ಜಾತಿಗೆ ಕೊಡಿಸಿದ್ದೂ ಆಗಿದೆ. ಮತ್ತು ಪಕ್ಷಪಾತ ನೀತಿ ಚಾಚೂ ತಪ್ಪದೆ ನಡೆದಿದೆ. ಹೀಗಾದರೆ ನಿಜವಾಗಿ ಯಾವನು ಅರ್ಹನೋ ಅವನ ಪಾಡೇನು ? ಅವನ ಓದು ಅಲ್ಲಿಗೆ ಮುಕ್ತಾಯವಾಗಬೇಕಾಗಿರುವುದೇನೊ, ತಿಳಿಯದು. ಇದನ್ನು ಕಣ್ತೆರದು ನೋಡುವವರಾದರೂ ಯಾರು?

ಸ್ಕಾಲರ್‌ಷಿಪ್ ಕಮಿಟಿಗಳೇ ಅಲ್ಲ, ಪ್ರಜೆಗಳ ಉಪಯೋಗಕ್ಕಾಗಿ ಮಾಡತಕ್ಕ ಎಲ್ಲ ಕಮಿಟಿಗಳಲ್ಲೂ ಕಾಂಗ್ರೆಸ್ಸೇತರ ಮೆಂಬರುಗಳೂ ಹೆಚ್ಚಿನ ಸಂಖ್ಯೆಯಲ್ಲಿದ್ದರೆ ಮಾತ್ರ ಅರ್ಹರಿಗೆ, ಅರ್ಹತೆ ದೊರೆಯುತ್ತದೆಂದು ಸರ್ಕಾರವು ಖಂಡಿತವಾಗಿ ಕಣ್ದೆರೆದುನೋಡಬೇಕು. ಆದರೆ ಕಾಂಗ್ರೆಸ್ ಸರ್ಕಾರ ಕಾಂಗ್ರೆಸ್ಸಿಗರ ಅನ್ಯಾಯವನ್ನು ಖಂಡಿಸುವುದೇ) ಹಾಗಿಲ್ಲದಿದ್ದರೆ ಬಡವರ ಸಹಾಯಕ್ಕೆಂದೆಂದು ಕೊಡುವ ಸರ್ಕಾರದ ಎಲ್ಲ ಹಣವೂ ಹಣಗಾರನಿಗೆ ಸೇರಿ ಬಡವರ ಕಷ್ಟ ಇನ್ನಷ್ಟು ಹೆಚ್ಚಾಗುವುದರಲ್ಲಿ ಸಂದೇಹವೇ ಇಲ್ಲ. ಆದ್ದರಿಂದ ಇನ್ನು ಮೇಲಾದರೂ ಸರ್ಕಾರವು ಇಂತಹ ಅನ್ಯಾಯಗಳಿಗೆ ಎಡೆಗೊಡದೆ ಇರಲಿ.

ಇತಿ ತಮ್ಮವ,

**ಏ. ವೆಂಕಟಗಿರಿ, ಕೋಲಾರ**

# ತೋಟದ ಕೆಲಸಗಾರರ ಮೇಲೆ ಆಕ್ರಮಣ!
# ಪೋಲೀಸರ ನಿಷ್ಕ್ರಿಯತೆ!!

ಕಡಮುಕಲ್ ತೋಟದಲ್ಲಿ ಕುಡಿದು ಮತ್ತರಾದ ಗೂಂಡಗಳಿಂದಾಗಿ ರಕ್ತದ ಕಾಲುವೆ ಹರಿಯುವವರೆಗೆ ಕಾರ್ಮಿಕ ಖಾತೆ ಹಾಗೂ ಪೋಲೀಸ್ ಖಾತೆ ಕಾದು ಕುಳಿತಿದೆಯೇ ಏನು! ಹಾಗಿಲ್ಲವಾದರೆ ಈ ಕೂಡಲೇ ತೀವ್ರವಾದ ಕ್ರಮ ಕೈಗೊಂಡು ಈ ಗೂಂಡಗಳನ್ನು ಮಟ್ಟ ಹಾಕಲು ಕೊಡಗಿನ ಪೋಲೀಸು ಖಾತೆ ಮುಂದಾಗುವಂತೆ ಪೂಣಚ್ಚರು ಕ್ರಮವಹಿಸುವರೆ! ಇನ್ನಾದರೂ ಕಾರ್ಮಿಕರ ಶೋಷಣೆಯಿಂದ ಕೊಬ್ಬಿದ ಈ ಮಾಲಕರ ಕಾನೂನಿನತಿಕ್ರಮವನ್ನು ಪರಿಣಾಮಕಾರಿಯಾಗಿ ನಿಲ್ಲಿಸಲು ನಮ್ಮ ಕಾರ್ಮಿಕ ಮಂತ್ರಿ ಮುಂದಾಗುವರೆ?

ಕಡಮುಕಲ್ ರಬ್ಬರ್ ತೋಟ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಗಡಿ ಪ್ರದೇಶದ ಗೊಂಡಾರಣ್ಯದಲ್ಲಿ ಇದೆ. ತೋಟವು ಅಸ್ತಿತ್ವಕ್ಕೆ ಬಂದ ಲಾಗಾಯಿತು ಇತ್ತೀಚಿನ ವರೆಗೂ ಈ ತೋಟದ ಕಾರ್ಮಿಕರ ಜೀವನವು ಹಿಂದಿನ ಕಾಲದ ಗುಲಾಮರಂತೆ ಇತ್ತು. ಮಾಲಕರು ನಡಿಸುತ್ತಿದ್ದ ಇವರ ಶೋಷಣೆಗೆ ಇತಿಮಿತಿಯಿರಲಿಲ್ಲವೆಂದರೆ ತಪ್ಪಾಗಲಿಕ್ಕಿಲ್ಲ. ಒಂದೆರಡು ವರ್ಷಗಳಿಂಗ ರಬ್ಬರ್ ತೋಟದ ಕಾರ್ಮಿಕರು ಜಾಗೃತರಾಗಿ ತಮ್ಮ ಸಂಘಟನೆಯನ್ನು ಮಾಡಿಕೊಂಡು ತಮ್ಮ ಜೀವನವನ್ನು ಸುಧಾರಿಸಿಕೊಳ್ಳಲು ಮುಂದಾಗಿರುವರು. ಸಂಬಳ, ಬೋನಸ್ಸು, ಓವರ್ ಟೈಮ್ ಸಂಬಳ ಮುಂತಾದ ಅತ್ಯಾವಶ್ಯಕವಾದ ಬೇಡಿಕೆಗಳನ್ನು ಮಾಲಿಕರ ಮತ್ತು ಲೇಬರ್ ಅಧಿಕಾರಿಗಳ ಮುಂದಿಟ್ಟರುವರು. ಲೇಬರ್ ಇಲಾಖೆಯವರು ಕಳೆದ ಎಂಟು ತಿಂಗಳಿಂದಲೂ ಇವರ ಈ ಬೇಡಿಕೆಯ ವಿವಾದಗಳನ್ನು ಬಗೆಹರಿಸಲು ಪ್ರಯತ್ನಿಸುತ್ತಿರುವರಾದರೂ ಬಗೆಹರಿಸಲಾಗಿ ನಿಸ್ಸಹಾಯರಾಗಿರುವರು. ಕಾರ್ಮಿಕರ ಹಿತರಕ್ಷಣೆಗೆ, ಅವರ ನ್ಯಾಯವಾದ ಬೇಡಿಕೆಗಳನ್ನು ಕೊಡಿಸಿಕೊಡಲು ಅನುಕೂಲವಾಗುವ ಕಾನೂನುಗಳನ್ನು ಉಲ್ಲಂಘನೆ ಮಾಡುವ ಮಾಲಿಕರನ್ನು ದಂಡಿಸಲು, ಲೇಬರ್ ಅಧಿಕಾರಿಗಳಿಗೆ ಪೀನಲ್ (ಶಿಕ್ಷೆ ವಿಧಿಸುವ) ಅಧಿಕಾರ ಕೊಡುವ ಕಾನೂನುಗಳೂ; ಲೇಬರ್ ಕೋರ್ಟುಗಳೂ, ಇಲ್ಲದಿರುವುದೇ ಕಾರ್ಮಿಕರ ಹಿತರಕ್ಷಣೆ ಮಾಡಲಾಗದ ಈ ನಿಸ್ಸಹಾಯ ಸ್ಥಿತಿಗೆ ಕಾರಣವಾಗಿದೆ.

**ಸಂಘಟನೆ ಸದೆಬಡಿಯಲು ಗೂಂಡಾಗಳಿಂದ ಕೊಲೆಯ ಬೆದರಿಕೆ**

ಅಸ್ತಿತ್ವದಲ್ಲಿರುವ ಕಾನೂನಿಗನುಸಾರ ಲೇಬರ್ ಅಧಿಕಾರಿಗಳು, ಕನ್ಸಿಲಿಯೇಶನ್ ನಡಿಸುತ್ತಿರುವಾಗಲೇ, ಅದನ್ನು ನಿರುಪಯೋಗಗೊಳಿಸಲು ಹತ್ತಾರು ಹೊಸ ಪ್ರಶ್ನೆಗಳನ್ನು ಹುಟ್ಟಿಸಿ, ಕಾರ್ಮಿಕರಿಗೆ ನಾನಾ ಬಗೆಯ ಹಿಂಸೆಯನ್ನು ಕೊಡುವುದು ಕಡಮುಕಲ್ ತೋಟದ ಮಾಲಕರಿಗೆ ಮಾಮೂಲಾಗಿ ಬಿಟ್ಟಿದೆ. ಕಾರ್ಮಿಕರನ್ನೂ ಅವರ ಸಂಘಟನೆಯನ್ನೂ ಸದೆಬಡಿಯಲು ಕಳೆದ ಒಂದು ತಿಂಗಳಿಂದ ತೋಟದ ಮೇನೇಜ್‌ಮೆಂಟಿನವರು 50ಕ್ಕಿಂತ ಹೆಚ್ಚು ಮಂದಿ ಗೂಂಡಾ ಜನರನ್ನು ತೋಟಕ್ಕೆ ಕರೆತಂದು ಅವರಿಗೆ ಸಾರಾಯಿ ಕುಡಿಸಿ, ತೋಟದ ಖಾಯಂ ಕೆಲಸದವರನ್ನು ಬೆದರಿಸುತ್ತಿರುವರು. ಈ ಗೂಂಡಾಗಳು ಕೋವಿ, ಕತ್ತಿ ಮತ್ತು ದೊಣ್ಣೆಗಳನ್ನು ಹಿಡಿದು ಗಸ್ತು ತಿರುಗುತ್ತಿರುವುದು ನಮ್ಮ ಸರಕಾರಕ್ಕೆ ಒಂದು ಸವಾಲಾಗಿರುತ್ತೆ.

ತೋಟದ ಮೇಸ್ತ್ರಿಗಳಾದ ಪಿ. ಆಯಿಮ್ಮದೆ ಮೇಸ್ತ್ರಿ ಮತ್ತು ಅಲಗು ಮೇಸ್ತ್ರಿಯೆಂಬವರನ್ನು ರಹಸ್ಯವಾಗಿ ಕೊಲೆ ಮಾಡುವ ಬೆದರಿಕೆಯನ್ನು ಆ ತೋಟದಮೆನೇಜ್‌ಮೆಂಟಿನವರು ಹಾಕಿದ್ದರಿಂದ ಮತ್ತು ಕುಡಿದು ಮುಸ್ತಾದ ಗೂಂಡಾಗಳು ಈ ಮೇಸ್ತ್ರಿಗಳಿಬ್ಬರ ಕೊಲೆ ಮಾಡುವೆವೆಂದು ಆರ್ಭಟ ನಡಿಸಿದ್ದರಿಂದ, ಇವರಿಬ್ಬರು ತೋಟದಿಂದ ತಲೆತಪ್ಪಿಸಿಕೊಂಡು ಹೊರಬಂದು, ತೋಟಕ್ಕೆ ಹಿಂತಿರುಗಿ ಹೋಗಲು ಸಾಧ್ಯವಾಗದಾಗಿದೆ. ಪಿ. ಕೆ. ಮಹಮ್ಮದ್ ಎಂಬಕೆಲಸದವನು ಸಂಶಯಾತ್ಮಕವಾದ ರೀತಿಯಲ್ಲಿ ತಾ. 30-11-57 ರಂದು ಮರಣಪಟ್ಟದ್ದು ತಿಳಿದು ಬಂದಿದೆ. ಅದೇ ದಿನ ಸಾಯಂಕಾಲ ತೋಟದ ಪೋಲೀಸರು ಇರುವಾಗಲೇ ಪಲನಿಸ್ವಾಮಿ ಎಂಬ ಮಜೂರನನ್ನು ಗೂಂಡಾಗಳು ಕತ್ತಿಯಿಂದ ತಲೆಗೆ ಕಡಿದು ಗಾಯಗೊಳಿಸಿರುವರು. ಕುಟ್ಟಿಯೆಂಬ ಇನ್ನೊಬ್ಬನನ್ನು ಗೂಂಡಾಗಳು ಭಯಂಕರವಾದ ಆಯುಧಗಳನ್ನು ಹಿಡಿದು ಓಡಿಸಿದ್ದರಿಂದ, ಆತನು ತಲೆತಪ್ಪಿಸಿಕೊಂಡಿರುವನು. ತೋಟದ ಮೆನೇಜ್‌ಮೆಂಟಿನವರ ಈ ವಿಧದ ಗೂಂಡಾಗಿರಿಯನ್ನು ಸರಕಾರ, ಯೋಗ್ಯ ರೀತಿಯಲ್ಲಿ ದಂಡಿಸದಿದ್ದರೆ, ತೋಟದ ನೂರಾರು ಮಜೂರರು ಕೊಲೆಯಾಗುವುದರಲ್ಲಿ ಯಾವ ಅನುಮಾನವೂ ಇಲ್ಲ.

ಈ ಮಧ್ಯೆ 49 ಮಜೂರರ ಮೇಲೆ ಸುಳ್ಳು ಆಪಾದನೆಗಳನ್ನು ಹೊರಿಸಿ ಕೆಲಸದಿಂದ ತೆಗೆದುಹಾಕಲಾಗಿದೆ. ಇಷ್ಟೆಲ್ಲಾ ಅನ್ಯಾಯ, ಅತ್ಯಾಚಾರ, ಗೂಂಡಾಗಿರಿ, ಕೊಲೆ ಪ್ರಯತ್ನ, ಅಹಿಂಸಾವಾದಿ-ಪ್ರಜಾಪ್ರಭುತ್ವವಾದಿ ಕಾಂಗ್ರೆಸ್ಸಿಗರ ರಾಜ್ಯದಲ್ಲಿ ಬಹಿರಂಗವಾಗಿ, ಸರಕಾರದ ಪೋಲೀಸು ಖಾತೆಗೆ, ಕಾರ್ಮಿಕ ಕಾನೂನಿಗೆ ವಿರೋಧವಾಗಿ ನಡೆಯುತ್ತಿರುವಾಗ, ಸರಕಾರದ ಹದ್ದಿನ ದೃಷ್ಟಿಗೆ (ವಿರೋಧ ಪಕ್ಷಗಳ ಚಟುವಟಿಕೆಗೆ ವೀಕ್ಷಿಸಲು ಮಾತ್ರ) ಯಾವ ಮಾಂದ್ಯ ಬಂದಿದೆ? ಕಾರ್ಮಿಕ ಮಂತ್ರಿ ಬಾಳಿಗರಿಗೆ ಮಾಲಕರು ನಡೆಸುತ್ತಿರುವ ಈ ಕಾನೂನಿನ ಉಲ್ಲಂಘನೆ ಬಹುಶಃ ಕಾನೂನು ರೀತ್ಯಾ ಎಂದು ತೋರಿರಬೇಕಲ್ಲವೇ? ಪೋಲೀಸು ಮಂತ್ರಿ ಪೂಣಚ್ಚರ ಕೊಡಗು ಬರೇ ಪೋಲೀಸ್ ರಾಜ್ಯವೆಂದು ಭಾವನೆ ಇತ್ತು. ಈಗ ಅದು ಗೂಂಡಾಗಳ ರಾಜ್ಯವಾಗಿ ಬದಲಿದೆ ಎಂದೂ, ಈ ಗೂಂಡಾಗಿರಿಯನ್ನು ನಿಲ್ಲಿಸಲು ಪೋಲೀಸರು ಮುಂಬರದ ಕಾರಣ ಪ್ರಾಯಶಃ ಅವರ ಪರೋಕ್ಷ ಬೆಂಬಲದಲ್ಲೇ ಕಡಮುಕಲ್ ಪೋಲೀಸರ ಈ ಕ್ರೂರ ದಬ್ಬಾಳಿಕೆ ನಡೆದು ಬಂದಿದೆ ಎಂದೂ ನಾವು ಭಾವಿಸಲೇ?

**ಸರ್ವರೂ ಧನ ಸಹಾಯ ನೀಡಿರಿ**

ಕಡಮುಕಲ್ ತೋಟದಲ್ಲಿ ಗೂಂಡಾಗಳ ಹಾವಳಿಯನ್ನು ನಿಲ್ಲಿಸಲು, ಕೆಲಸದಿಂದ ತೆಗೆದುಹಾಕಲ್ಪಟ್ಟವರಿಗೆ ಕೆಲಸವನ್ನು ಕೊಡಿಸಲು, ಕೆಲಸವಿಲ್ಲದೆ ಉಪವಾಸವಿರುವ ಕೆಲಸಗಾರರಿಗೂ ಮತ್ತು ಅವರ ಕುಟುಂಬದವರಿಗೂ ಆಹಾರವನ್ನು ಒದಗಿಸಲು ಮತ್ತು ಅವರ ಹೋರಾಟವನ್ನು ಜಯಪ್ರದಗೊಳಿಸಲು, ಯೂನಿಯನಿಗೆ ಕೊಡಗಿನ ಎಲ್ಲಾ ತೋಟ ಕೆಲಸಗಾರರೂ, ಮತ್ತು ಮಹಾಜನರೂ ಧನಸಹಾಯವನ್ನು ಮಾಡಬೇಕೆಂದು ಕೊಡಗು ಜಿಲ್ಲಾ ತೋಟ ಕೆಲಸಗಾರರ ಯೂನಿಯನ್ ಕಾರ್ಯದರ್ಶಿಯವರು ಕರೆಕೊಟ್ಟದ್ದಾರೆ.

**ಕಮ್ಯೂನಿಸ್ಟ್ ಪಾರ್ಟಿ ಸಭೆ**

ತಾ. 2—11—1957 ರಂದು ಸೋಮವಾರಪೇಟೆ ಕಚೇರಿಯ ಮುಂಬಾಗದಲ್ಲಿ ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ಕಾಮ್ರೇಡ್ ವೈ.ಟಿ. ಅಯ್ಯಪ್ಪನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನೆರವೇರಿತು. ಸಾವಿರಕ್ಕೂ ಮಿಕ್ಕಿದ ಸ್ತ್ರೀ ಪುರುಷರಿಂದೊಡಗೂಡಿದ, ಕಾರ್ಮಿಕರೊಡಗೂಡಿದ ಮೆರವಣಿಗೆಯು ಕಾಂ. ಅಚ್ಯುತನ್‌ರವರ ಮುಖಂಡತ್ವದಲ್ಲಿ ಕಮ್ಯೂನಿಸ್ಟ್ ಬಾವುಟಗಳೊಡನೆ, ಘೋಷಣೆ ಹಾಕುತ್ತಾ ಪ್ರಮುಖ ಬೀದಿಯಲ್ಲಿ ಮೆರವಣಿಗೆಯನ್ನು ಮುಗಿಸಿ ಸಭೆ ಪ್ರಾರಂಭಿಸಲ್ಪಟ್ಟಿತು. ಈ ಸಭೆಗೆ, ರೈತರು, ಕಾರ್ಮಿಕರು ಮತ್ತು ಸಾರ್ವಜನಿಕರು ಅಂದಾಜು 2000ಕ್ಕೂ ಮಿಕ್ಕಿ ಬಂದಿದ್ದರು.

ಕರ್ನಾಟಕ ಪ್ರಾಂತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಕಾರ್ಯದರ್ಶಿಗಳೂ ಮತ್ತು ಮೈಸೂರು ವಿಧಾನ ಸಭೆಯ ಸದಸ್ಯರೂ ಆದ ಕ್ರಾಮ್ರೇಡ್ ಎಂ. ಸಿ. ನರಸಿಂಹನ್‌ರವರು ಮುಖ್ಯ ಭಾಷಣಕಾರರಾಗಿ ಬಂದಿದ್ದರು. ಕಮ್ಯೂನಿಸ್ಟ್ ಪಕ್ಷದ ಮುಂದಾಳಾದ ಶ್ರೀ ಚೆಕ್ಕೇರ ಮೊಣ್ಣಯ್ಯನವರು ಸಹ ಸಭೆಯಲ್ಲಿ ಭಾಗವಹಿಸಿದ್ದರು.

ಕಾ. ನರಸಿಂಹನ್‌ರವರು ಕಾರ್ಮಿಕರ ಹಿತ ದೃಷ್ಟಿಯ ಬಗ್ಗೆ ಹೆಚ್ಚಾಗಿ ತಿಳುವಳಿಕೆ ಕೊಟ್ಟು ಅವರ ನ್ಯಾಯವಾದ ಹಕ್ಕು ಬಾಧ್ಯತೆಗಳು ಕಾರ್ಯಗತವಾಗಲೇಬೇಕೆಂದು ಈ ಬಗ್ಗೆ ಕಾರ್ಮಿಕರಲ್ಲಿ ಬಲವಾದ ಐಕ್ಯತೆ ಮತ್ತು ಶಿಸ್ತು ಸಂಘಟನೆ ಬಲಗೊಳ್ಳಬೇಕೆಂದೂ ಹೇಳಿದರು.

ಅಲ್ಲದೆ ಮೊನ್ನೆ ತಾನೇ ಕಡಮುಕಲು ರಬ್ಬರ್ ತೋಟದಲ್ಲಿ ತೋಟದ ಸಾಹುಕಾರರ ಪ್ರೇರಣೆಯಿಂದ ನಡೆಸಿರುವ ಅತ್ಯಾಚಾರ ದಬ್ಬಾಳಿಕೆಯ ಬಗ್ಗೆ ತೀವ್ರ ವಿರೋಧವನ್ನೂ ಸೂಚಿಸಿರುತ್ತಾರೆ. ಈ ದಬ್ಬಾಳಿಕೆಯ ದುರಂತದಲ್ಲಿ ಒಬ್ಬ ಮಜದೂರನು ಸಾಯುವ ಸ್ಥಿತಿಯಲ್ಲಿರುತ್ತಾರಲ್ಲದೆ ಅಂದಾಜು 25 ಜನರಿಗೆ ತೀವ್ರಗಾಯವಾಗಿರುತ್ತೆ. ಶ್ರೀಯುತರು ಮುಂದುವರಿಯುತ್ತಾ, ಜತ್ತಿ ಸಮಿತಿಯ ವರದಿಯ ಕೆಲವಂಶಗಳ ಬಗ್ಗೆ ವಿರೋಧವನ್ನು ವ್ಯಕ್ತಪಡಿಸಿದರು; ಮತ್ತು ಸೇಲ್ಸ್‌ಟ್ಯಾಕ್ಸಿನಿಂದ ಸಾಮಾನ್ಯ ಜನರಿಗಾದ ಧಕ್ಕೆಯನ್ನು ವಿವರಿಸಿ ಈ ಬಗ್ಗೆ ಸಾಧ್ಯವಿದ್ದಷ್ಟು ನ್ಯಾಯದ ಸೌಲಭ್ಯಕ್ಕಾಗಿ ಹೋರಾಡುವ ಆಶ್ವಾಸನೆಯಿತ್ತರು.

ಶ್ರೀ ಮೊಣ್ಣಯ್ಯನವರು ಸಹ ಕಾರ್ಮಿಕರ ಹಕ್ಕು ಬಾಧ್ಯತೆಗಳು ಪೂರ್ಣವಾಗಿ ಕರಗತವಾಗುವ ಈ ಸುಸಂದರ್ಭದಲ್ಲಿ ಕಾರ್ಮಿಕರು ಐಕ್ಯತೆಯ ತಳಹದಿಯ ಮೇಲೆ ಶಿಸ್ತು ಪಾಲನೆಯಿಂದ ಸಂಘಟಿತರಾಗಬೇಕೆಂದು ತಿಳಿಸಿದರು. ಶ್ರೀ ವೈ.ಟಿ. ಯವರು ಅಧ್ಯಕ್ಷ ಭಾಷಣದಲ್ಲಿ ಸರ್ವರಿಗೂ ಪಾರ್ಟಿ ಸೇರಲು ಆಹ್ವಾನವನ್ನಿತ್ತರು. ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯಕರ್ತರಾದ ಕಾ. ಬಿ. ಸಿ. ಮಲ್ಲಪ್ಪನವರೂ, ಎನ್. ಎಂ. ಮುತ್ತಣ್ಣ, ಜಿ. ಟಿ. ತಮ್ಮಯ್ಯ, ಕಾ. ಲಕ್ಷ್ಮಣ ಇವರೆಲ್ಲಾ ಹಾಜರಿದ್ದರು.

# ಕೊಡಗು ಪತ್ರ

**ದಬ್ಬಾಳಿಕೆ!**

ಸೋಮವಾರಪೇಟೆ 1ನೇ ಕುಸುಬೂರು ತೋಟದ ಹೆಡ್ ರೈಟರು ಅಪ್ಪಯ್ಯ ಮತ್ತು ಮಮ್ಮದು ಮೇಸ್ತ್ರಿ ಇವರಿಬ್ಬರು, ಯೂನಿಯನ್ ಆರ್ಗನೈಜರ್ ಆದ ಕಾ. ವಿ. ಆರ್. ಅಚ್ಯುತನ್ ಇವರನ್ನು ಇನ್ನು ಮುಂದೆ ಯೂನಿಯನ್ನಿನ ಕೆಲಸಗಾರರು ಯಾರೆ ಆಗಲಿ ನಮ್ಮ ತೋಟಕ್ಕೆ ಬರಕೂಡದೆಂದೂ ಬಂದಲ್ಲಿ, ನಿಮ್ಮನ್ನು ಹಿಡಿದು ಸಾಹುಕಾರರ ಬಂಗ್ಲೆಗೆ ತೆಗೆದುಕೊಂಡು ಹೋಗಿ ಕಟ್ಟಿ ಹಾಕುವಂತೆಯೂ ನಮಗೆ ಸಾಹುಕಾರರಿಂದ ಅಪ್ಪಣೆಯಾಗಿದೆಯೆಂದು ಹೇಳಿರುತ್ತಾರೆ. ಆಲ್ ಕೂರ್ಗ್ ಎಸ್ಟೇಟ್ ಯೂನಿಯನ್ನಿನ ಸೋಮವಾರಪೇಟೆ ನಾಡಿನ ಭಾಗದ ಆರ್ಗನೈಜರ್ ಆಗಿರುವ ಅಚ್ಯುತನ್‌ರವರಾಗಲಿ, ಅಥವಾ ಯೂನಿಯನ್ನಿನ ಇತರ ಯಾವುದೇ ಕಾರ್ಯಕರ್ತರಾಗಲಿ ಈ ಭಾಗದ ಮಜದೂರರ ಪರವಾಗಿ ತೋಟಗಳಲ್ಲಿ ಪ್ರವೇಶಿಸುವ ಸಮಯದಲ್ಲಿ ತೋಟದ ಮಾಲಿಕರಿಂದ ಮುಂದೆ ಉಂಟಾಗಬಹುದಾದ ಈ ಗೊಂದಲವು ತೀವ್ರವಾಗಿ ಪರಿಣಮಿಸುವ ಮೊದಲೇ ಸಂಬಂಧಪಟ್ಟ ಇಲಾಖೆಯು ಈ ಬಗ್ಗೆ ಸೂಕ್ತ ಕ್ರಮದೊಡನೆ ಅನಾಹುತಗಳಿಗೆಡೆಯಾಗದಂತೆ ತೋಟದ ಮಾಲಿಕರಿಗೆ ಎಚ್ಚರವೀಯಲಿ.

**ಕೆಲಸಗಾರರನ್ನು ವಂಚಿಸಲು ಮಾಲಿಕರ ಪೋರ್ಜರಿ ಪತ್ರ**

ಕಳೆದ 11 ವರ್ಷಗಳಿಂದ ಕುಸುಬೂರು ತೋಟದಲ್ಲಿ ವಾಸವಿರುವ ಚನ್ನ ಪಕೀರನ ಮೇಲೆ ಸಾಹುಕಾರರಿಂದುಂಟಾದ ತೊಂದರೆಯ ಬಗ್ಗೆ ಈ ಹಿಂದೆ ಲೇಬರ್ ಡಿಪಾರ್ಟ್‌ಮೆಂಟಿಗೆ ಅರ್ಜಿ ಹಾಕಿದ ಬಗ್ಗೆ ವಿಚಾರಣೆಗಳಿಗೆ ಸಾಹುಕಾರರು ಹೋಗಲಿಲ್ಲ. ಬದಲು ಚನ್ನಪಕೀರನನ್ನು ಮೋಸ ಪಡಿಸ

(೮ನೇ ಪುಟ ನೋಡಿ)

# ಹಳೆಯ ಮೈಸೂರು ಪ್ರದೇಶದ ರೈತಬಾಂಧವರಲ್ಲಿ ವಿನಂತಿ

1952ರಲ್ಲಿ ಮಂಜೂರಾಗಿ ಅದೇ ವರ್ಷ ಕೆಲವು ತಾಲ್ಲೂಕುಗಳಲ್ಲಿ ಜಾರಿಗೆ ತರಲಾಗಿದ್ದ ಮೈಸೂರು ಟೆನೆನ್ಸಿ ಕಾನೂನು 1954ರಲ್ಲಿ ಕೆಲವು ತಿದ್ದುಪಡಿಗಳೊಂದಿಗೆ ಹಳೆಯ ಮೈಸೂರು ಪ್ರದೇಶದ ಆದ್ಯಂತವಾಗಿ ಜಾರಿಗೆ ಬಂದಿದೆ. ಆ ಕಾನೂನು ಪ್ರಕಾರ ಅತಿ ಹೆಚ್ಚಿನ ಗುತ್ತಿಗೆಯು ಮಲೆನಾಡು ಪ್ರದೇಶಗಳಲ್ಲಿ ಒಟ್ಟು ಉತ್ಪತ್ತಿಯ $\frac{1}{4}$ ಭಾಗ ಮತ್ತು ಮೈದಾನ ಪ್ರದೇಶಗಳಲ್ಲಿ ಒಟ್ಟು ಉತ್ಪತ್ತಿಯ $\frac{1}{3}$ ಭಾಗ ಇರತಕ್ಕದ್ದು.

ಈ ಕಾನೂನು ಜಾರಿಗೆ ಬಂದು ಮೂರು ವರ್ಷಗಳಾದರೂ, ಗುತ್ತಿಗೆಯು ಈಗಲೂ ಹಳೆಯ ಕಾಲದ ಅತ್ಯಧಿಕ ದರದಲ್ಲೇ ವಸೂಲಾಗುತ್ತಿದೆ. ಹಾಲಿ ಉಳುವ ರೈತರಿಂದ ಹೊಲ ತಪ್ಪಿಸುವುದಾಗಲಿ, ರೈತರು ಬಲಾತ್ಕಾರ ಅಥವ ಮೋಸಕ್ಕೆ ಒಳಗಾಗಿ ಹೊಲ ಬಿಟ್ಟು ಕೊಡುವುದಾಗಲಿ ಈಗ ಜಾರಿಯಲ್ಲಿರುವ ನಿಯಮಗಳ ಪ್ರಕಾರ ತಡೆ ಹಿಡಿಯಲ್ಪಟ್ಟಿದೆ.

ರೈತರಿಗೆ ಇನ್ನೂ ಹೆಚ್ಚಿನ ಅನುಕೂಲತೆಗಳು ದೊರಕುವ ಕಾನೂನುಗಳ ಸಲುವಾಗಿ ಚಳುವಳಿ ನಡೆಸುವುದರ ಜೊತೆಯಲ್ಲೇ, ಹಾಲಿ ಜಾರಿಯಲ್ಲಿರುವ ಕಾಯಿದೆಗಳ ಮತ್ತು ನಿಯಮಗಳ ಪ್ರಯೋಜನಗಳನ್ನು ರೈತರ ಪಡೆಯಬೇಕು. ಅದಕ್ಕೋಸ್ಕರ ರೈತಬಾಂಧವರೇ :

1. ಏನೇ ಕಾರಣವಿದ್ದರೂ ಈಗ ಹಾಲಿ ಉಳುತ್ತಿರುವ ರೈತ ತನ್ನ ಸ್ವಾಧೀನದಲ್ಲಿರುವ ಜಮೀನನ್ನು ಬಿಟ್ಟು ಕದಲಬಾರದು.

2. 1952ರ ನಂತರ ಜಮೀನು ತಪ್ಪಿಸಿರುವ ಸಂದರ್ಭದಲ್ಲಿ ಅದನ್ನು ರೈತರು ವಾಪಸ್ಸು ಪಡೆಯುವುದಕ್ಕೆ ಕಾನೂನಿನಲ್ಲಿರುವ ಅವಕಾಶವನ್ನು ಉಪಯೋಗಿಸಿಕೊಳ್ಳಬೇಕು.

4. ಮಲೆನಾಡು ಪ್ರದೇಶದ ರೈತರು ಒಟ್ಟು ಉತ್ಪತ್ತಿಯ $\frac{1}{4}$ ಭಾಗ ಹಾಗೂ ಮೈದಾನ ಪ್ರದೇಶದ ರೈತರು ಒಟ್ಟು ಉತ್ಪತ್ತಿಯ $\frac{1}{3}$ ಭಾಗಕ್ಕಿಂತ ಹೆಚ್ಚು ಗುತ್ತಿಗೆ ಕೊಡುವ ಅಗತ್ಯವಿಲ್ಲ. ಅದಕ್ಕಿಂತ ಹೆಚ್ಚು ಗುತ್ತಿಗೆ ತೆಗೆದುಕೊಳ್ಳಲು ಜಮೀನ್ದಾರರಿಗೆ ಅಧಿಕಾರವಿಲ್ಲ

4 ಗುತ್ತಿಗೆ ಕೊಟ್ಟದ್ದಕ್ಕೆ ಜಮೀನ್ದಾರರಿಂದ ತಪ್ಪದೆ ರಶೀದಿ ಪಡೆಯಬೇಕು.

5 ಪಹಣಿ ಲೆಕ್ಕಗಳಲ್ಲಿ ಉಳುವ ರೈತನ ಹೆಸರನ್ನು ಬರೆಯದೆ ಮೋಸವಾಗುವ ಸಂದರ್ಭವಿರುವುದರಿಂದ ಅದನ್ನು ಬರೆಯುವಂತೆ ಹೆಚ್ಚಿಗೆ ನಿಗ ಕೊಡಬೇಕು.

ಮೇಲಿನ ಸೂಚನೆಗಳನ್ನು ರೈತಬಾಂಧವರು ತಪ್ಪದೆ ಅನುಸರಿಸಬೇಕು. ಅದಕ್ಕೋಸ್ಕರ ಎಲ್ಲರೂ ಕರ್ನಾಟಕ ಪ್ರಾಂತ ರೈತಸಂಘದ ಸದಸ್ಯರಾಗಿ ಸೇರಬೇಕೆಂದೂ, ಪ್ರತಿಯೊಂದು ಪ್ರದೇಶದಲ್ಲೂ ರೈತಸಂಘದ ಶಾಖೆಗಳನ್ನು ಸ್ಥಾಪಿಸಿ ಒಗ್ಗಟ್ಟಾಗಬೇಕೆಂದೂ ಪ್ರಾರ್ಥನೆ.

-ಕರ್ನಾಟಕ ಪ್ರಾಂತ ರೈತ ಸಂಘ

## ರೈತರ ಸಭೆಗಳು

### ಪಾಂಡವಪುರ

ತಾ 6—12—57ರಂದು ಪಾಂಡವಪುರ ತಾಲೂಕು ರೈತರ ಸಭೆಯು ಕ್ಯಾತನಹಳ್ಳಿಯಲ್ಲಿ ಶ್ರೀ ಚಿಕ್ಕ ತಿಮ್ಮೇಗೌಡರ ಅಧ್ಯಕ್ಷತೆಯಲ್ಲಿ ಜರಗಿತು; ಸಂಚಾಲಕ ಶ್ರೀ ರಾಮೇಗೌಡರು ಸಭಿಕರನ್ನು ಸ್ವಾಗತಿಸಿದರು. ಶ್ರೀ ಬಿ. ವಿ. ಕಕ್ಕಿಲ್ಲಾಯ, ಶ್ರೀ ಎನ್. ಎಲ್. ಉಪಾಧ್ಯಾಯ, ಶ್ರೀ ಎಂ. ಎನ್. ಉಗ್ಗಪ್ಪ, ಶ್ರೀ ನಾರಾಯಣ ಸ್ವಾಮಿ ಮೊದಲಾದವರು ರೈತರ ಮುಂದಿರುವ ಸಮಸ್ಯೆಗಳನ್ನು ವಿವರಿಸಿ ಸಂಘಟನೆಯ ಅವಶ್ಯಕತೆಯನ್ನು ತಿಳಿಸಿದರು. ಪಾಂಡವಪುರ ತಾಲೂಕು ರೈತ ಸಂಘವನ್ನು ಕರ್ನಾಟಕ ಪ್ರಾಂತ ರೈತ ಸಂಘದ ಶಾಖೆಯಾಗಿ ಸ್ಥಾಪಿಸಲಾಯಿತು. ಮತ್ತು ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು. ಶ್ರೀ ಶಿವಪ್ಪನವರು ವಂದನಾರ್ಪನೆಗಳನ್ನು ಅರ್ಪಿಸಿದ ಬಳಿಕ ಶಾಲಾ ಬಾಲಿಕೆಯರಿಂದ ರಾಷ್ಟ್ರಗೀತೆಯಾಗಿ ಸಭೆ ಮುಕ್ತಾಯಗೊಂಡಿತು.

### ಬೆಂಗಳೂರು ಉತ್ತರ ತಾಲ್ಲೂಕು

8-12-52ರಂದು ರೈತ ಸಂಘದ ಕಾರ್ಯಕರ್ತರ ಸಭೆಯು ದಾಸರಹಳ್ಳಿ ಗ್ರಾಮದಲ್ಲಿ ಖಜಾಂಚಿಗಳಾದ ಬಿ. ಟಿ. ಎ ರಾಜುರವರ ಅಧ್ಯಕ್ಷತೆಯಲ್ಲಿ ನಡೆಯಿತು. ಕರ್ನಾಟಕ ಪ್ರಾಂತ ರೈತ ಸಂಘದ ಉಪ ಕಾರ್ಯದರ್ಶಿಗಳಾದ ಸಿ. ರಾಮಭದ್ರಯ್ಯನವರು ಪ್ರಾಂತ ರೈತ ಸಮ್ಮೇಳನದಲ್ಲಿ ಕೈಕೊಳ್ಳಲಾದ ನಿರ್ಣಯಗಳನ್ನು ವಿವರಿಸಿ ಸಂಘಕ್ಕೆ ಸರ್ವರೂ ಬೆಂಬಲ ನೀಡಬೇಕೆಂದು ಕೋರಿದರು. ಮತ್ತು ಇತ್ತೀಚೆಗೆ ತಾವು ಸಂದರ್ಶಿಸಿದ ಜೋಡಿ ಗ್ರಾಮಗಳಲ್ಲಿ ರೈತರಿಗಾಗುತ್ತಿರುವ ಅನ್ಯಾಯವನ್ನು ವಿವರಿಸಿ ಸರ್ಕಾರದ ಉದಾಸೀನ ಭಾವವನ್ನು ಖಂಡಿಸಿದರು. ದೊಡ್ಡ ಬಳ್ಳಾಪುರದ ತಾಲ್ಲೂಕಿನಲ್ಲಿ ಗೋಮಾಳಗಳು ಮಾಯವಾಗುತ್ತಿರುವುದನ್ನೂ, ಮತ್ತು ಅಲ್ಲಿ ಭೂಮಾಲಿಕರಾದವರಿಗೆ ಕೊಟ್ಟ ಸ್ಥಿತಿಗಳನ್ನು ವಿವರಿಸಿ ರೈತರು ಇದಕ್ಕಾಗಿ ದೊಡ್ಡ ಹೋರಾಟವನ್ನೇ ನಡೆಸಬಹುದಾದ ಪರಿಸ್ಥಿತಿ ಒದಗುವಂತಿದೆ ಯೆಂದರು. ಸಭೆಯನ್ನು ಉದ್ದೇಶಿಸಿ ಕಾರ್ಮಿಕ ನಾಯಕ ರಂಗರಾಜು ಮತ್ತು ಸಂಘದ ಕಾರ್ಯದರ್ಶಿ ಶಿವರುದ್ರಯ್ಯ ಇವರು ಮಾತನಾಡಿದರು. ಅಧ್ಯಕ್ಷರು ರೈತರ ಸಂಘಟನೆಯ ಬಗ್ಗೆ ಒತ್ತಿ ಹೇಳಿದರಲ್ಲದೆ, ಕಾರ್ಯಕರ್ತರು ರೈತರೊಡನೆ ನಿಕಟ ಸಂಬಂಧವೇರ್ಪಡಿಸಿಕೊಳ್ಳುವ ಅಗತ್ಯವನ್ನು ಹೇಳಿದರು. ಪೀಣ್ಯಾ ರೈತ ಸಂಘದ ಅಧ್ಯಕ್ಷ ನರಸಿಂಹಯ್ಯನವರು ವಂದನಾರ್ಪಣೆ ಮಾಡಿದರು.

### ಮಂಗಳೂರು

#### ಕಮ್ಯೂನಿಸ್ಟ್ ಪಾರ್ಟಿ ಆಶ್ರಯದಲ್ಲಿ ಸಾರ್ವಜನಿಕ ಸಭೆ

ತಾ. 3—12—57ನೇ ಮಂಗಳವಾರ ಸಾಯಂಕಾಲ ಘಂ. 5·30ಕ್ಕೆ ಸರಿಯಾಗಿ ಮಂಗಳೂರು ವೆಲೆನ್ಸಿಯಾ ಮೈದಾನದಲ್ಲಿ ಭಾರತ ಕಮ್ಯೂನಿಸ್ಟ್ ಪಾರ್ಟಿ ಕಂಕನಾಡಿ ಶಾಖೆಯ ಆಶ್ರಯದಲ್ಲಿ 25ನೇ ಜಪ್ಪು ಉತ್ತರ ವಾರ್ಡಿನ ನಾಗರಿಕರ ಸಾರ್ವಜನಿಕ ಸಭೆಯೊಂದು ಶ್ರೀ ವಾಮನ ಕೊಡಿಯಾಲ್ ಬೈಲ್, ಮುನ್ಸಿಪಲ್ ಕೌನ್ಸಿಲರ್ ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಪ್ರಾರಂಭದಲ್ಲಿ ಶ್ರೀ ಬಿ. ರಾಮಪ್ಪ ಸುವರ್ಣರು ಸಭೆ ಕರೆದ ಉದ್ದೇಶವನ್ನು ಸಭಿಕರ ಮುಂದಿಟ್ಟರು. ತದ ನಂತರ, ಶ್ರೀಗಳಾದ ಕೆ. ಮೋನಪ್ಪ, ಶಾಂತಾರಾಮ್ ಪೈ ಮತ್ತು ಕೆ. ಪಿ. ಸಾಲ್ಯಾನ್ ಇವರು ಈ ವಾರ್ಡಿನ ನಾಗರಿಕರ ಅವಶ್ಯ ಕತೆಗಳನ್ನು ವಿವರಿಸಿ, ಮತ್ತು ಈ ವಾರ್ಡಿನ, ಸರ್ವತೋಮುಖ ಅಭಿವೃದ್ಧಿಯನ್ನು ಕಡೆಗಣಿಸಿ ಮುನ್ಸಿಪಲ್ ಕೌನ್ಸಿಲಿನ ಆಡಳಿತೆ ಪಕ್ಷದವರು ತೋರಿಸಿರುವ ಮಲತಾಯಿ ಧೋರಣೆಯನ್ನು ಖಂಡಿಸಿ ಭಾಷಣ ಮಾಡಿದರು.

ದೀಪ. ದಾರಿ, ಚರಂಡಿ, ಹರಿಜನ ಕಾಲೋನಿಗೆ ಸಂಬಂಧಪಟ್ಟ ಈ ವಾರ್ಡಿನ ಅಭಿವೃದ್ಧಿ ಕೆಲಸಗಳನ್ನು ಈ ಕೂಡಲೇ ಕೈಗೊಳ್ಳಬೇಕೆಂದು ಜಿಲ್ಲಾ ಕಲೆಕ್ಟರರನ್ನು ಮತ್ತು ಮುನಿಸಿ ಪಾಲಿಟಿಯನ್ನು ಒತ್ತಾಯಿಸುವ ಠರಾವುಗಳು ಶ್ರೀ ಕೆ. ಮಾರಪ್ಪನವರಿಂದ ಸಭೆಯ ಮುಂದೆ ಮಂಡಿಸಲ್ಪಟ್ಟು ಸರ್ವಾನುಮತದಿಂದ ಮಂಜೂರಾದುವು. ಅಧ್ಯಕ್ಷ ಭಾಷಣ ಮತ್ತು ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

---

(೬ನೇ ಪುಟದಿಂದ)

ಕೋಲಾರ ಜಿಲ್ಲೆಯಲ್ಲಿಯೇ ಇಲ್ಲ, ಕೊರಟಗೆರೆ, ಬಿಜಾಪುರ ಮೊದಲಾದ ಕಡೆಯಲ್ಲಿ ಇದೇ ಪರಿಸ್ಥಿತಿ ಇದೆಯೆಂದು ತಿಳಿದಿದೆ. ಆದರೂ ರೈತರ ಬಗ್ಗೆ 'ಕಾಂಗ್ರೆಸ್ಸಿನ ಈ ಅನಾದರಣೆ ಹಾಗೂ ಅನಾಸಕ್ತಿಯ ಧೋರಣೆ ಮುಂದುವರಿದಿದೆ.

## ರಾಜೀನಾಮೆ ಇತ್ತಲ್ಲಿ ತಲಾ ೧ ಲಕ್ಷ ರೂ

ಕೇರಳದಲ್ಲಿ ಕಮ್ಯೂನಿಸ್ಟ್ ಸಂಪುಟವನ್ನು ಉರುಳಿಸಲು ಕೆಲವು ಮಂದಿ ಐಶ್ವರ್ಯವಂತರು ನಡೆಸುತ್ತಿರುವ ಯತ್ನದ ಬಗ್ಗೆ ವಿಚಿತ್ರ ಪ್ರಸಂಗವೊಂದನ್ನು ಕೇರಳ ಕಮ್ಯೂನಿಸ್ಟ್ ಶಾಸನಸಭಾ ಸದಸ್ಯರಾದ್ಯಶ್ರೀ ಆರ್. ಬಾಲಕೃಷ್ಣ ಪಿಳ್ಳೆಯವರು ಇಂದು ತಮ್ಮ ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

ರಾಜ್ಯದ ಶಾಸನಸಭೆಯಲ್ಲಿ ಕಮ್ಯೂನಿಸ್ಟ್ ಸದಸ್ಯರ ಸಂಖ್ಯೆಯನ್ನು ಕಡಿಮೆ ಮಾಡುವುದೇ ಅವರು ನಡೆಸುತ್ತಿರುವ ಸಂಚಿನ ತಿರುಳು.

ಶ್ರೀ ಬಾಲಕೃಷ್ಣ ಪಿಳ್ಳೆಯವರು ರಾಜೀನಾಮೆ ನೀಡುವುದಾದರೆ ಒಂದು ಲಕ್ಷ ರೂಪಾಯಿಗಳನ್ನು ನೀಡಲು ಐಶ್ವರ್ಯವಂತರೊಬ್ಬರು ಮುಂದೆ ಬಂದುದಾಗಿಯೂ, ಅದೇ ರೀತಿ ಇತರ ಅನೇಕರ ಬಳಿಗೂ ಐಶ್ವರ್ಯವಂತರು ಹೋಗಿ ಆಸೆ ತೋರಿದರೆಂದೂ ತಿಳಿಸಿದ ಶ್ರೀ ಪಿಳ್ಳೆಯವರು, ಶಾಸನ ಸಭೆಯಲ್ಲಿ ಸಂಖ್ಯೆ ಕಡಿಮೆ ಮಾಡಲು ಈ ರೀತಿ ಆಸೆ ತೋರಿ ಕಮ್ಯೂನಿಸ್ಟರನ್ನು ಒಲಿಸಿಕೊಳ್ಳಲು ಸಾಧ್ಯವಿಲ್ಲವೆಂದರು.

['ಪ್ರಜಾವಾಣಿ'ಯಿಂದ]



REG. No. M. 6867

Edited Printed and Published by C. R. Krishna Rao, at Janashakthi Printers, L—59, K. V. Temple St., Sultanpet Bangalore—2 phone · 3810